
# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ – 2015



# ಅಪರಂಜಿ

ತಿಳಿನಗೆಯ ಕಾರಂಜಿ







ಸಂಪುಟ 32
ಸಂಚಿಕೆ – 4
ಜನವರಿ – 2015



ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಟರ್ಕಿ ಪುರಾಣ | **ವಾಣೀ ಸುರೇಶ್** | 5 |
| ನನ್ನ ಶಾಪಿಂಗ್ ಫಜೀತಿ | **ಆರತಿ ಘಟಿಕಾರ್** | 10 |
| ನಿಮಗೆ ನೆಗಡಿ ಆಗಿದೆಯೇ? | **ಸಿ.ಆರ್. ಸತ್ಯ** | 14 |
| ಸ್ಕೂಲಿನಲ್ಲಿ ಸೆಕ್ಯೂರಿಟಿ–ರಿಂಗ್ | **ರಮ್ಯ** | 17 |
| ತುಂತುರು | **ದಂನಆ** | 22 |
| ಮರೆವೋ, ವರವೋ | **ಎಚ್.ಆರ್. ಹನುಮಂತ ರಾವ್** | 23 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 27 |
| ಸಾಲಿಗೊಂದು ಜೋಕು | **ಸಂಪಟೂರು ವಿಶ್ವನಾಥ್** | 28 |
| ಸ್ಕೀಮೂ–ಪೇಪರೂ | **ನುಗ್ಗೇಹಳ್ಳಿ ಪಂಕಜ** | 31 |
| 37ನೇ ಕೀ....... | **ಬಿ.ಸಿ. ಬಹದ್ದೂರ ದೇಸಾಯಿ** | 34 |
| ಯಾರಿಗೂ ಹೇಳೋಣು... | **ಎಚ್. ಗೋಪಾಲಕೃಷ್ಣ** | 36 |
| ಚೂಪಾದ ಮಾತು | **ಪ್ರಶಾಂತ ಅಡೂರ** | 39 |
| ಒಪ್ಪೊತ್ತುಣ್ಣುವವ, ಆದರೆ.. | **ಹನಸೋಗೆ** | 40 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**


*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ದೋನಿ ಬೆಂಬಲಕ್ಕೆ ಶ್ರೀನಿವಾಸನ್ – 'ಕ್ರೀಡಾ' ಸುದ್ದಿ

***• ಹಾಗಲ ಕಾಯಿಗೆ......... !!***

★★★

ಬ್ರಹ್ಮಪುತ್ರ ನದಿಯಲ್ಲಿ ಚೀನಾ ಅಣೆಕಟ್ಟೆ – ಸುದ್ದಿ

***• ಅಂತೂ ಇಂತೂ ಭಾರತಕ್ಕೆ ನೀರಿಲ್ಲ !!***

★★★

ಸಕ್ಕರೆ ಕಾರ್ಖಾನೆ ವಶಕ್ಕೆ : ಸಚಿವ ಎಚ್ಚರಿಕೆ – ಪತ್ರಿಕೆ

***• ಕಹಿ ಸುದ್ದಿ !!***

★★★

'ವಿದ್ಯೆಯೊಂದಿಗೆ ಸಂಸ್ಕಾರ ಪಡೆಯಿರಿ' – ಹೇಳಿಕೆ

***• ಅಪರಂಜಿ ನಗುತ್ತ ತಲೆದೂಗಿದಳಂತೆ !!***

★★★

ಕನ್ನಡ ಮತ್ತು ಇಂಗ್ಲಿಷ್; ನಮಗೆ ಸೌದೆಯೂ ಬೇಕು, ಶ್ರೀಗಂಧವೂ ಬೇಕು – ಪ್ರಸಿದ್ಧ ಕವಿಗಳು

***• ಅಪರಂಜಿ ಚಕಿತಳಾದಳಂತೆ !!***

★★★

ಅಂಬೇಡ್ಕರ್ ಕನಸು ನನಸಾಗಬೇಕು – ಶೀರ್ಷಿಕೆ

***• ಅರಣ್ಯರೋದನ ಎಂದರೆ ಇದೇ !!***

★★★

ಭಗವದ್ಗೀತೆಗೆ ರಾಷ್ಟ್ರೀಯ ಪವಿತ್ರ ಗ್ರಂಥ ಸ್ಥಾನ; ವಿರೋಧ – ಪತ್ರಿಕೆ

***• ಕೃಷ್ಣ ಪರಮಾತ್ಮಾ !!***

★★★

ಶ್ರೀನಿವಾಸನ್‌ಗೆ ಹಿನ್ನಡೆ – ಪತ್ರಿಕೆ

***• ಸುಪ್ರೀಂ ಕೋರ್ಟ್ ಗೂಗ್ಲಿ ಎಸೆದಂತಿದೆ !!***

★★★

# ನಮ್ಮ ನಿಮ್ಮಲ್ಲಿ

**ಕ**ಳೆದ ಮೂರು ವಾರಗಳಲ್ಲಿ ಎರಡು ಒಳ್ಳೆಯ ನಾಟಕಗಳನ್ನು ನೋಡುವ ಅವಕಾಶ ನನಗೆ ಸಿಕ್ಕಿತು. ಮೊದಲನೆಯದು ಎಂ.ಡಿ. ಪಲ್ಲವಿ ನಟಿಸಿರುವ ಏಕಪಾತ್ರಾಭಿನಯದ ಇಂಗ್ಲೀಷ್ ನಾಟಕ ''ಸಿ ಷಾರ್ಪ್, ಸಿ ಬ್ಲಂಟ್.'' ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ದೇಹದ ಶೋಷಣೆ ಎಂದಿಗೂ ಇದ್ದದ್ದೇ. ಸಮಾಜದಲ್ಲಿರುವ ಇಂತಹ ಮೃಗೀಯ ಮನೋಭಾವಕ್ಕೆ ಕನ್ನಡಿ ಹಿಡಿಯುವ ಸ್ತುತ್ಯ ಪ್ರಯತ್ನ ಈ ನಾಟಕ. ಖ್ಯಾತ ಗಾಯಕಿ ಪಲ್ಲವಿ, ಈ ನಾಟಕದಲ್ಲಿ ಸ್ಮಾರ್ಟ್ ಫೋನ್ ಆ್ಯಪ್ ಒಂದರ ಪಾತ್ರವಹಿಸುತ್ತಾಳೆ. ಈ ಆ್ಯಪ್ ಅನ್ನು ಚಾಲನೆಗೊಳಿಸಿ ಫೋನಿನ ತೆರೆಯಲ್ಲಿ ಮೂಡುವ ಹೆಣ್ಣಿನ ಬೊಂಬೆ ನಿಮಗೆ ಬೇಕಾದಂತೆ ಹಾಡುವಂತೆ ಮಾಡುಬಹುದು. ''ಶಿಲ್ಪಾ ವರ್ಷನ್ 202'' ಎಂಬ ಈ ಆ್ಯಪ್‌ನಲ್ಲಿ ಒಂದರಿಂದ ಹತ್ತರವರೆಗೆ ವಿವಿಧ ಮಟ್ಟಗಳಲ್ಲಿ ಈ ಬೊಂಬೆ ಹಾಡುವ ದನಿಯನ್ನು ಮಾರ್ಪಡಿಸುವ ಅವಕಾಶವಿರುತ್ತದೆ. ಈ ದನಿಗಳ ಮಾರ್ದವತೆ, ಮಾಧುರ್ಯ, ಲೈಂಗಿಕ ಆಕರ್ಷಣೆ ಇವುಗಳನ್ನು ಬೇಕೆಂದಂತೆ ಬದಲಿಸುವ ಆ್ಯಪ್-ಬೊಂಬೆಯ ಚಾಕಚಕ್ಯತೆಯನ್ನು ವೇದಿಕೆಯ ಮೇಲೆ ಬಹು ಮನೋಜ್ಞವಾಗಿ ಬಿಂಬಿಸಿದರು ಪಲ್ಲವಿ. ಈ ಆ್ಯಪ್‌ನ ಮುಂದುವರಿದ ವರ್ಷನ್ ''ಶಿಲ್ಪಾ 404'' ಹೊರಬಂದಾಗ ಬೊಂಬೆಯ ಅಂಗಸೌಷ್ಠವವನ್ನೂ ಗ್ರಾಹಕನು ಬೇಕೆಂದಂತೆ ಬದಲಿಸುವ ಅವಕಾಶವಿರುತ್ತದೆ. ''ಶಿಲ್ಪಾ 606'' ವರ್ಷನ್‌ನಲ್ಲಿ ಬೊಂಬೆಗೆ ಗ್ರಾಹಕನ ಆಯ್ಕೆಯನ್ನು ನಿರಾಕರಿಸುವ ಅವಕಾಶವೂ ಇರುತ್ತದೆ. ಈ ಆ್ಯಪ್-ಬೊಂಬೆಯ ಪಾತ್ರವೇ ಅಲ್ಲದೇ, ಮನರಂಜನೆಯ ಉದ್ಯಮಕ್ಕೆ ಆಗತಾನೇ ಕಾಲಿಡುತ್ತಿರುವ ತರುಣಿ, ಒಂದು ವಿಡಿಯೋ ಗೇಮಿನಲ್ಲಿನ ಒಂದು ಆಟದ ಪಾತ್ರ ಹಾಗೂ ಒಂದು ರೇಪ್ ಸೀನನ್ನು ನಿರ್ದೇಶಿಸುತ್ತಿರುವ ಸಿನಿಮಾ ನಿರ್ದೇಶಕನ ಪಾತ್ರ ಇವೆಲ್ಲ ಪಾತ್ರಗಳನ್ನೂ ವೇದಿಕೆಯ ಮೇಲೆ ತಂದು ಬಹು ಸಮರ್ಥವಾಗಿ ಆ ಪಾತ್ರಗಳಿಗೆ ಜೀವತುಂಬಿದ ಹೆಗ್ಗಳಿಕೆ ಪಲ್ಲವಿ ಅವರಿಗೆ ಸಲ್ಲಬೇಕು. ನಾಟಕದ ಯಶಸ್ಸಿಗೆ ಶಬ್ದ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡಿದ್ದೂ ಒಂದು ಕಾರಣ. ಯಾವುದೇ ಭಾವನೆಗಳನ್ನು ವ್ಯಕ್ತಪಡಿಸದೇ ಏಕತಾನದಂತಿದ್ದ ಮಾರ್ಕೆಟ್ ಸಂಶೋಧಕನ ದನಿ, ಸಮಾಜದ ಸಾಂಪ್ರದಾಯಿಕ ಅಭಿಪ್ರಾಯಗಳಿಗೆ ದನಿಗೂಡಿಸಿದ್ದ ಆ್ಯಂಟಿ, ಇವೆಲ್ಲವೂ ನಾಟಕದ ತೀವ್ರತೆಗೆ ಅಗತ್ಯವಾದ ಓಟವನ್ನು ಒದಗಿಸಿದವು. ಚಟಪಟಗುಟ್ಟಿ ನಗಿಸುತ್ತಿದ್ದ ಅನೇಕ ಸಂಭಾಷಣೆಗಳಿಗೆ ಸಾಹಿತ್ಯವನ್ನು ಒದಗಿಸಿದ ಸ್ವರ್ ತೌನಜಮ್ ಮತ್ತು ಇರಾವತಿ ಕಾರ್ತಿಕ್ ಇವರುಗಳ ಕೊಡುಗೆ ಸ್ಮರಣೀಯ.

ಪಲ್ಲವಿ ಅವರಿಂದ ಒಂದು ಚೇತೋಹಾರಿಯಾದ ಅಪೂರ್ವ ಅಭಿನಯವನ್ನು ಗಣಿಗಾರಿಕೆ ಮಾಡಿದ ಹೆಗ್ಗಳಿಕೆ ನಾಟಕದ ನಿರ್ದೇಶಕಿ ಸೋಫಿ ಸ್ಟೆಫ್ ಅವರಿಗೆ ಸಲ್ಲುತ್ತದೆ. ಪಲ್ಲವಿ ಅವರ ದನಿಯ ಏರಿಳಿತಗಳು, ಹಾಸ್ಯದ ಸೃಷ್ಟಿಗೆ ಅತ್ಯಗತ್ಯವಾದ ತತ್ಕ್ಷಣದ ಮಾತುಗಳ ಜೊತೆಗೆ

ನವಿರಾಗಿ ನಿರ್ಮಿತವಾದ ಕೌತುಕಮಯ ಪ್ರಪಂಚವೂ ಸೇರಿ ಆ ಸಂಜೆ ವೇದಿಕೆಯ ಮೇಲೆ ಮಾಯಾಲೋಕವೊಂದೇ ಮೂಡಿಬಂದಿತ್ತು. ನಾಟಕದ ಕೊನೆಯಲ್ಲಿ ಶೋಷಣೆಯಿಂದ ಹತಾಶಳಾದ ಹೆಣ್ಣು ''ಪೆಪ್ಪರ್ ಸ್ಪ್ರೇ ಏನೂ ಬೇಡ. ನನ್ನ ಚೀರುವಿಕೆಯೇ ಸಾಕು'' ಎಂದು ಹೇಳಿ ತುಂಬು ಗಂಟಲಿನಿಂದ ರಂಗಶಂಕರದ ಸೂರು ಕಿತ್ತುಹೋಗುವ ಹಾಗೆ ಚೀರಿದ್ದು ನಾಟಕಕ್ಕೆ ಒಂದು ಬಹು ಸೂಕ್ತವಾದ ಅಂತ್ಯವನ್ನು ತಂದಿತು.



ನಾನು ನೋಡಿದ ಎರಡನೆಯ ನಾಟಕ ''ಅವನು ಘಜಲ್, ಅವಳು ಷಾಯಿರಿ'' ಎಂಬ ಕನ್ನಡ ಪ್ರಣಯ ಪ್ರಹಸನ. ಫಾರ್ಸ್ ಎಂಬ ಗುಂಪಿಗೆ ಸೇರಿಸಬಹುದಾದ ಈ ನಾಟಕದ ವಸ್ತು ಬಹು ಸರಳ. ಅಕ್ಕಪಕ್ಕದಲ್ಲಿ ಎರಡು ಮನೆಗಳು. ಒಂದು ಮನೆಯಲ್ಲಿ ಮಗ ಮಹರಾಯ ಸದಾ ಸಮಾಜದ ಏಳಿಗೆ, ಶೋಷಿತರ ಉದ್ಧಾರ ಅಂತ ಉದ್ದುದ್ದ ಭಾಷಣಗಳನ್ನು ಮಾಡಿಕೊಂಡು ಸುತ್ತುತ್ತಿರುತ್ತಾನೆ. ಅವನ ತಂದೆಯೋ ಅನರ್ಥಕೋಶವನ್ನು ಕಂಠಪಾಠಮಾಡಿಕೊಂಡಿರುವವ. ಯಾರಾದರೂ ಮಾತಾಡುಕ್ಕಿಲ್ಲ, ಅವರಾಡಿದ ಮಾತಿಗೆ ಅನರ್ಥವಾದ ಅರ್ಥವೊಂದನ್ನು ಹುಡುಕಿ ಅವರ ತಲೆ ಚಿಟ್ಟುಹಿಡಿಸುವ ಪ್ರಾಣಿ ಈತ. ಪಕ್ಕದ ಮನೆಯಲ್ಲಿ ಯಥಾಪ್ರಕಾರ ಒಬ್ಬಳು ತರುಣಿ. ಈಕೆಗೆ ಕಾರಣವಿಲ್ಲದೇ ಯಾವಾಗಲೂ ಪುರುಷಸಂತತಿಯ ಮೇಲೆ ಕೋಪ, ರೋಷ ಭುಗಿಲೇಳುತ್ತಿರುತ್ತದೆ. ಹುಡುಗನ ತಾಯಿಗೆ ಹೇಗಾದರೂ ಮಗನ ಮದುವೆಯಾಗಲಿ ಅಂತ ಆಶೆ. ಹುಡುಗಿಯ ತಾಯಿಯ ಆಶೆಯೂ ಇದಕ್ಕಿಂತ ಭಿನ್ನವೇನಲ್ಲ. ಒಮ್ಮೆ ತನ್ನ ತಾಯಿಯ ಬಲವಂತಕ್ಕೆ ಹುಡುಗಿ ಹುಡುಗನನ್ನು ನೋಡಲು ಒಪ್ಪುತ್ತಾಳೆ. ನೋಡಿದ ತಕ್ಷಣ ಅವಳ ರೋಷ ಮುಗಿಲಿಗೆ ಮುಟ್ಟಿ ಅವನ ಅವಹೇಳನವನ್ನು ಒಂದು ವೀರರಮಣಿಯ ಧಾಟಿಯ ಕವನದಲ್ಲಿ ಹಾಡುತ್ತಾಳೆ. ಆವೇಶದ ಭಾಷಣವನ್ನು ಮಾಡಲು ಸಿದ್ಧನಾಗಿದ್ದ ಹುಡುಗ ಹುಡುಗಿಯ ರೋಷವನ್ನು ನೋಡಿ ತಣ್ಣಗಾಗುತ್ತಾನೆ. ಅವರಿಬ್ಬರಲ್ಲಿ ''ಪ್ರೇಮ'' ಮೂಡುತ್ತದೆ. ಪ್ರೇಮದ ಹಾದಿ ಸುಲಭವೇ? ಖಂಡಿತಾ ಇಲ್ಲ. ಅಂತೂ ನಲವತ್ತೈದು ನಿಮಿಷಗಳ ಕಾಲ ಸುತ್ತಿ ಬಳಸಿ, ಎಲ್ಲರನ್ನೂ ಬೇಕಾದಷ್ಟು ನಗಿಸಿ ಕೊನೆಗೆ ಪ್ರೇಮ ಪಕ್ಷಿಗಳು ಒಂದಾಗುತ್ತವೆ.

ಒಟ್ಟಿನಲ್ಲಿ ಡಿಸೆಂಬರ್ ಚಳಿಯಲ್ಲಿ ಸಂಜೆ ಆರಕ್ಕೇ ರಂಗಶಂಕರಕ್ಕೆ ಎರಡು ಬಾರಿ ಹೋಗಿ, ಅಕ್ಕಿರೊಟ್ಟಿ ತಿಂದು ಬೆಚ್ಚಗೆ ಕಾಫಿ ಕುಡಿದು ಮೇಲಿನ ಎರಡು ನಾಟಕಗಳನ್ನು ನೋಡಿದ್ದು ನಿಜಕ್ಕೂ ಸಂತೋಷ ಆಯ್ತುರೀ. ಅದನ್ನ ನಿಮ್ಮೊಂದಿಗೆ ಹಂಚಿಕೊಳ್ಳುವ ಪ್ರಯತ್ನ ಇದು.

ಅಂದಹಾಗೆ ಗ್ರೆಗೋರಿಯನ್ ಕ್ಯಾಲೆಂಡರ್ ಪ್ರಕಾರ ಇಂದು ಹೊಸವರ್ಷಾರಂಭ. ಭಗವಂತನು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ.

**ಶಿವಕುಮಾರ್**

# ಟರ್ಕಿ ಪುರಾಣ

- ವಾಣೀ ಸುರೇಶ್

ಇಲ್ಲಿ ಅಮೆರಿಕೆಯ ಅನೇಕ chain storesಗಳಲ್ಲಿ ''ಟ್ರೇಡರ್ ಜೋಸ್'' ಅನ್ನೋದೊಂದು ಪ್ರಮುಖ ಗ್ರೋಸರಿ ಅಂಗಡಿ. ಮೊನ್ನೆ ಅದರ flyerಲಿ ''ಬಿಳಿತಲೆಯ ಬಾಲ್ಡ್ ಈಗಲ್‌ಗಿಂತಲೂ ಟರ್ಕಿಕೋಳಿಯನ್ನೇ ಅಮೆರಿಕೆಯ ರಾಷ್ಟ್ರೀಯ ಪಕ್ಷಿಯಾಗಿ ಆರಿಸಿದ್ದರೆ ಇನ್ನೂ ಹೆಚ್ಚು ಪ್ರಸ್ತುತವಾಗಿರೋದು'' ಅನ್ನೋ ಬೆಂಜಮಿನ್ ಫ್ರಾಂಕ್ಲಿನ್ ಹೇಳಿಕೆ ಅಕಸ್ಮಾತ್ತಾಗಿ ಕಣ್ಣಿಗೆ ಬಿತ್ತು! ಏನ್ಮಾಡ್ಲಿ, ಅಂಗಡೀಲಿ ಮೆಣಸಿನಕಾಯಿ ಬೋಂಡ ಸುತ್ತಿಕೊಟ್ಟ ಎಣ್ಣೆ ಕಾಗದದ ಚೂರನ್ನೂ ಬಿಡದೇ, ಪ್ರಿಂಟಾದ ಎಂಥಾ ಪೇಪರ್ ಸಿಕ್ಕರೂ ಅದನ್ನ ಹರಿದೆಸೆಯುಕ್ಕೆ ಮುಂಚೆ ಒಂದ್ಸಲ ಅದರ ಮೇಲೆ ಕಣ್ಣಾಡಿಸೋ ದುರಭ್ಯಾಸ ನಂದು. ಹಾಗಿರೋವಾಗ ಇನ್ನು ಜೋ, ಹಾಸ್ಯ ಲೇಪದ ಇಟ್ಟು ಬರಿಯೋ ಅವನಂಗಡಿಯ ನ್ಯೂಸ್ ಲೆಟರ್ ಬಿಡ್ತೀನ್ಯೇ.



ಹೀಗಾಗಿ, ಸುಮ್ಮನಿರಲಾರದೇ ಈ ಕತೆಯ ಮೂಲಾನ ಕೊಂಚ ಕೆದಕಿದೆ. ಆಗ ಬೆಂಜಮಿನ್ ಫ್ರಾಂಕ್ಲಿನ್ನು ಹಾಗೆ ಹೇಳಿರೋದು ಹಲವಾರು ಸ್ವಾರಸ್ಯ ಕಾರಣಗಳಿಗಾಗೀಂತ ಗೊತ್ತಾಯಿತು. ಅವನ ಮಾತುಗಳೇನಾದ್ರೂ ಟರ್ಕಿ ಕೋಳಿಗಳಿಗೆ ಅರ್ಥವಾಗಿದ್ದಿದ್ರೆ ಅದಿನ್ನೆಷ್ಟು ಖುಷಿಪಡತ್ತೋ! ಅದೇನಪ್ಪಾಂದ್ರೆ, ಇದು ಹದಿನೆಂಟನೇ ಶತಮಾನದ ಕೊನೆಯಲ್ಲಿ ಆಗಷ್ಟೇ ಬಿಳೀ ತಲೆ ಬಾಲ್ಡ್ ಈಗಲ್ ಕೇವಲ ಒಂದು ಮತದ ಅಂತರದಿಂದ ಟರ್ಕಿ ಕೋಳಿ ರಾಷ್ಟ್ರೀಯ ಪಕ್ಷಿಯಾಗೋದನ್ನು ತಪ್ಪಿಸಿದ ಹೊಸದು! ಆ ದಿನಗಳಲ್ಲಿ ಇಲ್ಲಿಯ ಸಿನ್ಸಿನ್ನ್ಯಾಟಿಯಲ್ಲಿ Revolutionary War Officersಗಳ "Brave and Honest Cincinnati of America" ಅನ್ನೋ ಒಂದು ಸೊಸೈಟೀ ಪ್ರಾರಂಭವಾಯ್ತಂತೆ. ದುರಾದೃಷ್ಟವಶಾತ್ ಆ ಸಂಸ್ಥೆಯ emblemನಲ್ಲಿರೋ ಅಮೆರಿಕನ್ ರಾಷ್ಟ್ರ ಪಕ್ಷಿಯಾದ ಬಾಲ್ಡ್ ಈಗಲ್‌ನ ಕತ್ತು ಮತ್ತು ತಲೆಯಂತೂ ಥೇಟ್ ಟರ್ಕಿ ಕೋಳಿಯದರ ತರಾ ಇದ್ಯೇ ಹೊರತು ಬಾಲ್ಡ್ ಈಗಲ್ ತರಾ ಸುತಾರಾಂ ಇಲ್ಲ ಅಂತ ಅನ್ನೋದ್ರಿಂದ ಆ ಮಹಾರಾಯ ಬೆಂಜಮಿನ್ ಫ್ರಾಂಕ್ಲಿನ್‌ನ ತಕರಾರು ಶುರುವಾಗುತ್ತೆ. ಹಾಗೆ ನೋಡಿದ್ರೆ ಇದು ಅದನ್ನು ಬಿಡಿಸಿದ ಕಲಾಕಾರನ ತಪ್ಪಲ್ಲವೇ? ನನಗೇನೋ ಅವನೆಲ್ಲೋ ನನ್ನ ಕ್ಯಾಟಗೆರಿಗೆ ಸೇರಿದೋನೇ ಇರ್ಬೇಕೂಂತ ಗುಮಾನಿ. ಸ್ಕೂಲಲ್ಲಿದ್ದಾಗ ನಾನು ಬಿಡಿಸೋ ಕಪ್ಪೆ ಚಿತ್ರಾನ ನೋಡಿ ನಮ್ಮ ಜನರಲ್ ಸೈನ್ಸ್ ಟೀಚರ್ರು,

''ಅಲ್ಲ, ನೀನು ಕಪ್ಪೆ ಚಿತ್ರ ಬರೀಂದ್ರೆ ಯಾವಾಗಲೂ ಇಂಥಾ ಗಡವ – ಅದರಲ್ಲೂ ಬಾಲವಿಲ್ಲದ – ಗಡವ ಓತೀಕೇತದ ಚಿತ್ರಾನೇ ಯಾಕೆ ಬರೀತೀಂತ'' – ಆಶ್ಚರ್ಯಪಡೋರು! ಅವರೇನಾದರೂ ಓತೀಕೇತದ ಚಿತ್ರ ಬರೆಯಕ್ಕೆ ಹೇಳಿದ್ದಿದ್ರೆ ಆಗದು ಕಪ್ಪೆ ಚಿತ್ರ ಆಗಿರೋದು ಅಂತ ಅವರಿಗೆ ಕೊನೆಗೂ ಹೊಳೀಲೇ ಇಲ್ಲ! ಈಗ ಈ ಕೇಸನ್ನೂ ಹಾಗಂತಲೇ ಇಟ್ಕೊಂಡರೂ ಈ ಮ.ಬೆಂ.ಫ್ರಾ. ಕೇಳಲೇ ಒಲ್ಲನಲ್ಲ!

ಆ ಚಿತ್ರಕ್ಕಿಂತಾ ಮುಖ್ಯವಾಗಿ ಅವನ ಆಕ್ಷೇಪಣೆ – ಬಾಲ್ಡ್ ಈಗಲ್ಲಿನ – ಇತರರನ್ನು ವಂಚಿಸುವ ಧೂರ್ತತೆ, ಸೋಮಾರಿತನ, ತನಗಿಂತಾ ಅತೀ ಚಿಕ್ಕದಾದ ಲಿಟಲ್ ಕಿಂಗ್ ಬರ್ಡ್ ಅನ್ನೋ ಗುಬ್ಬಚ್ಚಿಗಿಂತಲೂ ಪುಟ್ಟ ಹಕ್ಕಿಗೂ ಹೆದರಿ ಜಾಗ ಖಾಲಿ ಮಾಡೋ ಪುಕ್ಕಲು ಮುಂತಾದವುದರ ಬಗ್ಗೆ. ಯಾಕೇಂದ್ರೆ ಈ ಪರ್ಮನೆಂಟ್ ಆಗಿ ತಲೆನೆರೆತ ಬಾಲ್ಡ್ ಈಗಲ್ಲಂತೂ ತೀರ ತನ್ನ ಹೊಟ್ಟೆಪಾಡಿಗೋಸ್ಕರಾನೂ ದುಡಿಯದೆ, ಆಸ್ಪ್ರೇ ಅನ್ನೋ ಇನ್ನೊಂದು ಪ್ರಬೇಧದ ಹದ್ದು ಕಷ್ಟಪಟ್ಟು ಹಿಡಿಯುವ ಮೀನಿನ ಮೇಲೆ ತನ್ನ (ಹದ್ದಿನ) ಕಣ್ಣಿಟ್ಟು, ಅದನ್ನ ಎಗರಿಸಿ ತನ್ನ ಹೊಟ್ಟೆ ಹೊರೆಯೋವಂಥಾ ನೀಚ ಕೆಲಸದಲ್ಲಿ ಅತಿ ಚಾಣಾಕ್ಷ ಬೇರೆ ಅಂತೆ! ಅಲ್ದೇ ಈ ಸರ್ಟಿಫಿಕೇಟ್ ಜೊತೆಗೆ ಅವನು ಇನ್ನೂ ಎಷ್ಟೋ ಸಮಜಾಯಿಷಿಗಳನ್ನ ಕೊಡ್ತಾನೆ. ''ಹದ್ದಾದರೆ ಬೇರೆ ಪ್ರದೇಶಗಳಲ್ಲೂ ಇರತ್ವೆ. ಆದರೆ ನಮ್ಮದೇ ಆದ ಟರ್ಕಿ ತಲೆ ತಲಾಂತರಗಳಿಂದ ಕೇವಲ ಉತ್ತರ ಅಮೆರಿಕಾದ ಒಂದು ಗೌರವಾನ್ವಿತ ಮೂಲ ನಿವಾಸಿಯೇ ಹೊರತು, ದಕ್ಷಿಣ ಮೆಕ್ಸಿಕೋ ಮತ್ತು ಗ್ವಾಟೆಮಾಲ ಬಿಟ್ಟು ಮಹಾ ಇನ್ಯಾವ ಊರೂ ದೇಶದಲ್ಲಿ ನೆಲೆಸಕ್ಕೆ ಅಂತತಾನೇ ಹೋಗಿದೆ? ಪಾಪ ಸ್ವಲ್ಪ ಸಿಲ್ಲಿ, ಸ್ವಲ್ಪ ಪೆದ್ದು ಪೆದ್ದಾದ್ರೂ, ಫಾರ್ಮುಗಳಲ್ಲಿ ಅಚ್ಚಗೆಂಪು ಬಣ್ಣದ ಬಟ್ಟೆ ತೊಟ್ಟುಕೊಂಡು ಯಾರು ಅದರ ತಂಟೆಗೆ ಬಂದರೂ ಅವರನ್ನ ಸುಮ್ಮನೆ ಬಿಡದೇ ಅಟ್ಟಿಸಿಕೊಂಡು ಹೋಗಲ್ವೇ?'' ಹಾಗೆ ಹೀಗೆ ಅಂತೆಲ್ಲಾ ಮುಂದುವರೆಯುತ್ತೆ ಮ.ಬೆಂ.ಫ್ರಾ.ನ ಗುಣಗಾನ! ಅಂತೂ ಈ ಬಾಲ್ಡ್ ಈಗಲ್ಲಂಥಾ ಕೀಳು ಸ್ವಭಾವದ, ಕಂತ್ರಿ, ಝೂಡಮಾಲಿ ಪಕ್ಷೀನ ಇಂಥಾ ಸಂಪತ್ಭರಿತ, ಧೀರ, ಸಮರ್ಥ ರಾಷ್ಟ್ರಕ್ಕೆ ಹೋಲಿಸಿದರೆ ಹೇಗೆ ಅಂತನ್ನೋದೇ ಅವನ ಕೊರಗು. ಅವನ ಈ ಮಾತನ್ನು ತಿರುಚಿ ತಮ್ಮ ಥ್ಯಾಂಕ್ಸ್ ಗಿವಿಂಗ್ ಟರ್ಕಿ ಮಾರಾಟಕ್ಕಾಗಿ ಜಾಹೀರಾತಿನಂತೆ ಉಪಯೋಗಿಸಿಕೊಂಡದ್ದು ಟ್ರೇಡರ್ ಜೋಸ್‌ನೋರ ಜಾಣತನದ ವ್ಯವಹಾರ ಪ್ರಜ್ಞೆ ಅಂತಿಟ್ಕೊಳ್ಳಿ. ಈಗ ಆ ಮಾತಿರಲಿ.

ಇಲ್ಲಿ ಗ್ರೋಸರಿ ಸ್ಟೋರ್ಸ್ ಅನ್ನೋದು, ಸಾಮಾನ್ಯವಾಗಿ – ದಿನಸಿ ಪದಾರ್ಥಗಳಿಂದ ಹಿಡಿದು ರೆಡಿ ಟು ಈಟ್‌ಗಳವರೆಗೂ, ತಾಜಾ ತರಕಾರಿಯಿಂದ ಹಿಡಿದು frozen ತರಕಾರಿಗಳವರೆಗೂ, ಕೋಳಿ, ಬಾತುಕೋಳಿ, ಮೊಟ್ಟೆಗಳಿಂದ ಹಿಡಿದು ಕೊಕ್ಕು ರೆಕ್ಕೆ ಪುಕ್ಕ ಕಳ್ಕೊಂಡು ಪ್ಲಾಸ್ಟಿಕ್ ಕವರುಗಳಲ್ಲಿ ಹುದುಗಿ ಕುಳಿತ ಅದರಮ್ಮ ಚಿಕ್ಕಮ್ಮ ದೊಡ್ಡಮ್ಮಂದಿರವರೆಗೂ, ತರಹೇವಾರಿ ಹಿಟ್ಟುಗಳಿಂದ ಹಿಡಿದು ವಿವಿಧ ರೀತಿಯ ಬ್ರೆಡ್ಡು–ಬನ್ನು–ಕೇಕು–ಹಾಟ್ ಡಾಗು–ಪೀಟ್ಸಾಗಳವರೆಗೂ, ಜ್ಯೂಸಿನ ಸೀಸೆಗಳಿಂದ ಹಿಡಿದು ಔಷಧಿ ಸೀಸೆಗಳವರೆಗೂ, ನೀರಿನ ಬಾಟಲಿಗಳಿಂದ ಹಿಡಿದು ಬಿಯರಿನ ಬಾಟಲಿಗಳವರೆಗೂ – ಅನ್ನೋ ಹಾಗೆ, ಇವೆಲ್ಲವನ್ನೂ ಚಿತ್ತಾಕರ್ಷಕವಾಗಿ ಜೋಡಿಸಲ್ಪಟ್ಟ ಇಲ್ಲಿಯ ವಸ್ತುನಿಷ್ಠತೆಯ ಪ್ರತೀಕವಾದ ಬೃಹತ್ ಅಂಗಡಿಗಳು! ಆದರೆ ಅವುಗಳ ಜೊತೆಗೆ, ದನ–ಕುರಿ–ಕೋಳಿ–ಹಂದಿ–

ಜಿಂಕೆ-ಮೀನು-ಏಡಿ-ಸಿಗಡಿ - ಅಂತೆಲ್ಲ ಎರಡು, ನಾಲ್ಕು, ಅನೇಕ ಕಾಲುಗಳಿಂದ ಅಥವಾ ಕಾಲಿಲ್ಲದೆಯೂ - ಚಲಿಸುವಂಥಾ ಆ ಎಲ್ಲಾ ವಿಧದ ''ಪ್ರೋಟೀನುಗಳನ್ನೂ'' ಅವನ್ನು ಪ್ಯಾಕ್ ಮಾಡುಕ್ಕಾಗುವ ಸಮಸ್ತ ವಿನ್ಯಾಸಗಳಲ್ಲೂ ತುಂಡರಿಸಿ, ಅಥವಾ ಇಡಿ ಇಡಿಯಾಗಿ ಸೂಕ್ತವಾದ ಡಬ್ಬಗಳಲ್ಲಿ ತುಂಬಿಸಿ ಇವೇ ಅಂಗಡಿಯ ಬಡುಗಳಲ್ಲಿ ಜೋಡಿಸಿಟ್ಟಿರ್ತಾರಲ್ಲ! ಅಲ್ಲೇ ಬರೋದು ಸಮಸ್ಯೆ ನಮ್ಮಂಥೋರ್ಗೆ. ಯಾಕೆಂದರೆ ಇವುಗಳ ನಡುವೆಯೇ, ನಮ್ಮಂಥಾ ಪುಳಿಚಾರಿಗಳು ಸಂಚರಿಸಿ, ನಮಗೆ ಬೇಕಿರುವ ಉಪ್ಪು, ಹುಳಿ, ತರಕಾರಿ, ಹಣ್ಣು ಹಂಪಲಿಂದ ಹಿಡಿದು ಹಾಲಿನವರೆಗೂ ಕೊಳ್ಳಲೇಬೇಕಾದ ಅನಿವಾರ್ಯತೆ ಇರತ್ತೆ ನೋಡಿ, ಅದಕ್ಕೆ ಒಂದು ವಿಧದ ಇರಸುಮುರಿಸು ಅಷ್ಟೇ. ಬೆಳಗ್ಗೆ ಎದ್ದ ತಕ್ಷಣ ಮನೇ ಬಾಗಿಲಲ್ಲೇ ಹಾಲಿನ ಹುಡುಗನ ಕೈಯಿಂದ ಹಾಲಿನ ಪ್ಯಾಕೆಟ್ ಇಸ್ಕೊಂಡು ಬಿಸಿಬಿಸಿ ಫಿಲ್ಟರ್ ಕಾಫಿ ಮಾಡ್ಕೊಂಡ್ ಹೀರೋದು ಹೇಗಿದೆ. ಅದು ಬಿಟ್ಟು ಈ ಚಳೀಲೂ ವಾರಕ್ಕೊಂದ್ಸಲವಾದ್ರೂ ಯಃಕಶ್ಚಿತ್ ಹಾಲಿಗಾಗಿ.. ಅಯ್ಯೋ ಬಿಡಿ, ನಮ್ಮೂರಿನ ಸಿಂಪಲ್ ಪ್ಲೆಶರ್ಸ್ ಬಗ್ಗೆ ಅದರಲ್ಲೂ ಈ ಮೈ ಗದಗುಟ್ಟಿಸೋ ಚಳೀಲಿ ಈಗ್ಯಾಕೆ ಜ್ಞಾಪಿಸಿಕೊಳ್ಳಲಿ?

ಅಲ್ಲ, ಈ ಪುರಾಣಾನ್ನೆಲ್ಲಾ ಯಾಕೆ ಹೇಳಿದೇಂದ್ರೆ ಹ್ಯಾಲೋವೀನ್ ಬಂತೂಂದರೆ ಸಾಕು, ಇವರ ಹಬ್ಬದ ಸಾಲು ಬಂತು ಅಂತಲೇ ಲೆಕ್ಕ! ಅದು ಕಳೆದ ಮಾರನೇ ದಿನದಿಂದಲೇ ಶುರು ಥ್ಯಾಂಕ್ಸ್ ಗಿವಿಂಗ್ ಹಬ್ಬಕ್ಕಾಗಿ ಟರ್ಕಿಯ (ಟರ್ಕಿಕೋಳಿಯ ಅಪಭ್ರಂಶ) ಮಾರಾಟದ ಭರಾಟೆ. ಥ್ಯಾಂಕ್ಸ್ ಗಿವಿಂಗ್‌ನ ಹಬ್ಬದೂಟಕ್ಕೆ ಇವರಲ್ಲಿ ಟರ್ಕಿಯಿಲ್ಲದೇ ಮಾತೇ ಇಲ್ಲವಲ್ಲ ಸಧ್ಯ! ಹೀಗಾಗಿ, ನವೆಂಬರ್ ತಿಂಗಳ ಕೊನೆಯ ಗುರುವಾರದ ದಿನ ಬರೋ ಥ್ಯಾಂಕ್ಸ್ ಗಿವಿಂಗಿಗೆ, ಏನಿಲ್ಲದೇನೇ ಮೊದಲೇ ಶೋಭಿಸೋ ಸ್ವರ್ಗಸ್ಥ ದನ-ಕರು-ಹಂದಿ-ಜಿಂಕೆ-ಕೋಳಿ-ಕುರಿಗಳಿಂದ ತುಂಬಿ ತುಳುಕೋ ಬಡುಗಳಿರೋ ಸಾಲು ಸಾಲು ಕಪಾಟುಗಳೊಂದಿಗೆ, ಪ್ಲಾಸ್ಟಿಕ್ ಕವರುಗಳಲ್ಲಿ ನೀಟಾಗಿ ಪ್ಯಾಕ್ ಮಾಡಲ್ಪಟ್ಟ ವಿವಿಧ ರೀತಿಯ ಚಿಕ್ಕ ಪುಟ್ಟ ದೊಡ್ಡ ಸೈಜಿನ ಇಡೀ ಟರ್ಕಿಗಳ ಪಾರ್ಥಿವ ಶರೀರ ರಾಶಿಗಳ displayನೂ ಶುರುವಾಗುತ್ತೆ. ಪ್ರತಿ ವರ್ಷದ ಥ್ಯಾಂಕ್ಸ್ ಗಿವಿಂಗಿಗೂ ಟರ್ಕಿಗಳ ಮಾರಣ ಹೋಮದ ಸಂಖ್ಯೆ ಕೇಳಿದರೆ ಎದೆ ಝುಗ್ ಅನ್ನುತ್ತೆ. ಉದಾಹರಣೆಗೆ ಈ ಸಲದ್ದೇನೋ ನಲವತ್ತೈದು ಮಿಲಿಯನ್ ಟರ್ಕಿಗಳು ಅಂತಾರಪ್ಪ, ಅದೇನೋ ಗೊತ್ತಿಲ್ಲ! ಅಂತೂ, ಬರೀ ಹಾಲು-ಮೊಸರಿಗೋಸ್ಕರ ಗ್ರೋಸರಿ ಸ್ಟೋರ್ಗಳಲ್ಲಿ ಕೋಲ್ಡ್ ಸ್ಟೋರೇಜಿಗೇ ಹೋಗಬೇಕಿರುವವರು, ಥ್ಯಾಂಕ್ಸ್ ಗಿವಿಂಗ್ ಕಳೆಯೋವರೆಗೂ ಈ ಬಡಪಾಯಿ ಜೀವಿಗಳ ರೋದನವನ್ನು ಸಹಿಸಲೇಬೇಕು. ಒಳ್ಳೇ ಚೆನ್ನಾಯ್ತು. ಸಂತೇಲೊಂದು ಮನೆ ಮಾಡಿ ತುಂಬಾ ಗಲಾಟೆ ರೀ ಅಂತ ಗೊಣಗಿದರೆ ಹೇಗೆ ಅಂದ್ರಾ? ಅದೇನೋ ಸರಿ, ಬಿಡಿ.

ಒಟ್ನಲ್ಲಿ, ಹಿಂದೆಲ್ಲಾ ಎಲ್ಲೆಲ್ಲೂ ಸರ್ವೇ ಸಾಮಾನ್ಯವಾಗಿ ಕಂಡುಬರ್ತಿದ್ದ ಈ ನಾಟಿ ಟರ್ಕಿಕೋಳಿಗಳ ತಳೀಗೇ ಈಗ ಸಂಚಕಾರ ಬಂದಿದೆಯಂತೆ! ಅನೇಕ ಮಿಲಿಯನ್ಗಟ್ಟಲೆ ಕಾಣಸಿಗ್ತಿದ್ದ ವನ್ಯ ಟರ್ಕಿಗಳ ಸಂಖ್ಯೆ ಈಗ ಹಲವು ಸಾವಿರಗಳಿಗೆ ಇಳಿದಿದೆಯಂತೆ! ಆಫ್‌ಕೋರ್ಸ್, ಈ ವಿಷಯದಲ್ಲಿ ಈಗೀಗ ಇಲ್ಲೂ ಸ್ವಲ್ಪ ಬದಲಾವಣೆ ಬರ್ತಿರೋ ಹಾಗೆ ಕಾಣುತ್ತೆ. ಯಾಕೇಂದ್ರೆ ನಮ್ಮ ಲಾವಣ್ಯಾನ ನರ್ಸರಿ ಸ್ಕೂಲಲ್ಲಿ ಈ ಸಲ ಮಕ್ಕಳ ಥ್ಯಾಂಕ್ಸ್

ಗಿವಿಂಗ್ ಪಾರ್ಟೀಲಿ ''ಪಾಪದ ಮುದ್ದು ಟರ್ಕಿಗಳನ್ನ ತಿನ್ನಬಾರದು. ಅದಕ್ಕೆ ಬದಲು ಬೆಂದ ಆಲೂಗೆಡ್ಡೆ ಪ್ಯಾಟೀಸ್, ಮ್ಯಾಕ್ ಮತ್ತು ಚೀಸ್ ಸ್ಯಾಂಡ್ವಿಚ್, ಕ್ರಾನ್ಬೆರಿ ಸಾಸ್, ಪಂಪ್ಕಿನ್ ಪೈ ತಿನ್ನೋಣ'' ಅಂತ ನವೆಂಬರ್ ಮೊದಲಿಂದಲೂ ಮನದಟ್ಟಾಗೋ ರೀತೀಲಿ ಹೇಳೀ, ಮಕ್ಕಳ ಕೈಯಲ್ಲಿ ಅದರ ಬಗ್ಗೆ ಪೋಸ್ಟರ್ಸ್‌ಗಳನ್ನೂ, ಆರ್ಟ್ ವರ್ಕ್‌ಗಳನ್ನೂ ಮಾಡಿಸಿ ''ಸೇವ್ ದ ಟರ್ಕೀಸ್'' ಅನ್ನೋ ತರದ ಒಂದು movementನ್ನ ಅವರದ್ದೇ ಆದ ರೀತಿಯಲ್ಲಿ ಶುರು ಮಾಡಿದ್ದಾರೆ! ಸ್ಕೂಲುಗಳ ಮಟ್ಟದಲ್ಲೇ ಹಾಗೆ ಹೇಳ್ಬೇಕೂಂದ್ರೆ ಪರಿಸ್ಥಿತಿಯಲ್ಲಿ ಏನಾದರೂ ಸ್ವಲ್ಪವಾದರೂ ವ್ಯತ್ಯಾಸವಾಗಬಹುದೇನೋಂತ ನನ್ನ ಆಶಾವಾದ.

ಅಂದಹಾಗೆ, ಈ ಮಾತು ಬಂದಾಗ ಸುಮಾರು ಇಪ್ಪತ್ತೈದು ವರ್ಷಗಳಿಂದ ಅಂದರೆ ಜಾರ್ಜ್ ಡಬ್ಲ್ಯೂ ಬುಷ್ ಕಾಲದಿಂದಲೂ ಇವರ ರಾಷ್ಟ್ರಾಧ್ಯಕ್ಷರು ಪ್ರತಿ ವರ್ಷ ''ನ್ಯಾಷನಲ್ ಥ್ಯಾಂಕ್ಸ್ ಗಿವಿಂಗ್ ಟರ್ಕಿ ಪ್ರೆಸೆಂಟೇಷನ್'' ಅಂತ ಹೇಳಿ ಪ್ರಮುಖ ಟರ್ಕಿ ಫಾರ್ಮುಗಳಿಂದ ಸಾದರವಾಗಿ ಸ್ವೀಕರಿಸಿದ ಒಂದೋ ಎರಡೋ ಟರ್ಕಿಗಳನ್ನ pardon (ಕ್ಷಮಾದಾನ) ಮಾಡೋ ಒಂದು ವಿಚಿತ್ರ ಪದ್ಧತೀನೂ ಜ್ಞಾಪಕಕ್ಕೆ ಬರುತ್ತೆ. ಪಾಪ, ಅವು ಟರ್ಕಿಯಾಗಿ ಜನಿಸಿದ್ದೇ ಅವುಗಳ ಏಕೈಕ ಅಪರಾಧ ಅಂತ ಎದ್ದು ಕಾಣಿಸಿದರೂ ಸಹಾ ಅವಕ್ಕೆ ಜಗತ್ತಿನ ಅತ್ಯಂತ ಬಲಿಷ್ಠ ರಾಷ್ಟ್ರಾಧಿಪತಿಯಿಂದ ಕ್ಷಮಾಧಾನ ಪಡೆಯುವಂಥಾ ವಿಪರ್ಯಾಸ! ಬಹುಶಃ ಅವರಿಗೆ ತಮ್ಮ ಗುರುತರ ಕಾರ್ಯಭಾರದ ನಡುವೆ ಸಿಗುವ ಕೆಲವೇ ಲಘು ಕ್ಷಣಗಳಲ್ಲಿ ಇದೊಂದು ಪ್ರಹಸನದ ಪ್ರಸಂಗ ಇರಬಹುದು! ಈ ಸಲ ''ಮ್ಯಾಕ್'' ಮತ್ತು ''ಚೀಸ್'' ಅನ್ನೋ ಎರಡು ಟರ್ಕಿಗಳಿಗೆ ಆ ಸುಯೋಗ ಒದಗಿದೆ. ಅಂದಹಾಗೆ ಈ ಆಯ್ಕೆ, ಇಂಟರ್‌ನೆಟ್ಟಿನಲ್ಲಿ ಜನಪ್ರಿಯ ಸಾಮಾಜಿಕ ತಾಣಗಳಾದ ಟ್ವಿಟ್ಟರ್, ಫೇಸ್‌ಬುಕ್, ಇನ್ಸ್ಟಾಗ್ರಾಮ್ ಇತ್ಯಾದಿಗಳನ್ನು ಬಳಸಿ ಸಾಕ್ಷಾತ್ ವೈಟ್ ಹೌಸೇ ಏರ್ಪಡಿಸೋ ಒಂದು ಆನ್ ಲೈನ್ ವೋಟಿಂಗ್ ಮೂಲಕ ನಡೆಯುತ್ತೆ. ಹೀಗೇನೇ, ಟರ್ಕಿ ಫಾರ್ಮುಗಳಲ್ಲಿ ಈ Presidential pardonಗಾಗಿ ಅಂತಲೇ ಬೆಳೆಸೋ ಟರ್ಕಿಗಳಲ್ಲಿ ಕ್ಯಾಮರಾದ ಫ್ಲಾಶ್ ಲೈಟು, ಜನರ ಗದ್ದಲ, ಚಪ್ಪಾಳೆ, ನಗು ಇವಕ್ಕೆಲ್ಲಾ ಸ್ಪಂದಿಸಿ ಗಾಬರಿ ಮಾಡಿಕೊಳ್ಳದಂಥಾ ಎರಡನ್ನು ಆಯ್ಕೆ ಮಾಡಿದ ಮೇಲೆ ಅವಕ್ಕೆ ನಾಮಕರಣ ಸಹಾ ಮಾಡೋದು! ನಾನಿಲ್ಲಿ ಒಂದು ಚೂರೂ ಉತ್ಪ್ರೇಕ್ಷಿಸ್ತಾ ಇಲ್ಲ ಇವರೇ, ನಂಬಿದರೆ ನಂಬಿ ಬಿಟ್ಟರೆ ಬಿಡಿ! ಸುಮಾರು ಒಂದು ಸಾವಿರ ಟರ್ಕಿಗಳಲ್ಲಿ ಮೊದಲ ಸುತ್ತಿನ ಆಯ್ಕೆ ಮಾಡಿ ಉಳಿಸೋ ಕೇವಲ ಎಂಭತ್ತರಲ್ಲಿ ಎರಡು ಪಕ್ಷಿಗಳು ಮಾತ್ರಾ ಆ ಸಲದ ರಾಷ್ಟ್ರೀಯ ಥ್ಯಾಂಕ್ಸ್ ಗಿವಿಂಗ್ ಟರ್ಕಿ ಎಂದು ನಾಮಕರಣಗೊಳ್ಳುತ್ವೆ. ಇವುಗಳ ವೈಟಲ್ ಸ್ಟಾಟಿಸ್ಟಿಕ್ಸು, ಆಹಾರ ವಿಹಾರಗಳ ವಿವರ, ಸ್ವರ ಮಾಧುರ್ಯ, ಇವು ಮೆಚ್ಚುವ ಹಾಡಿನ ರೆಕಾರ್ಡು – ಇವೆಲ್ಲದರ ಬಗ್ಗೆ ವೋಟಿಂಗಿಗೆ ಮುಂಚಿಂದಲೂ ಪ್ರಕಟಣೆಗಳಿರುತ್ವೆ! ವಿವಾದಾಸ್ಪದವಾದ ಈ ಬಗ್ಗೆ "The Turkey Pardon is America's dumbest tradition" ಅನ್ನೋ ಲೇಖನ, ಪ್ರಾಣಿ ದಯಾ ಸಂಘಗಳ ಪ್ರತಿಭಟನಾತ್ಮಕ ಹೇಳಿಕೆಗಳು ಮುಂತಾದ್ದವನ್ನೆಲ್ಲಾ ಓದಿ, ಮಾಧ್ಯಮಗಳಲ್ಲಿ ನೋಡಿ, ನಂಗಂತೂ ನಗಬೇಕೋ ಅಳಬೇಕೋ ತಿಳೀತಿಲ್ಲ! ಮನಸ್ಸಿನಲ್ಲಿ ಸ್ವಲ್ಪ ದ್ವಂದ್ವವನ್ನುಂಟು ಮಾಡೋ ಈ ಪಾರ್ಡನ್ ಮಾಡೋ ಪ್ರಕ್ರಿಯೆಯ ನಂತರದ ಆ ಪಕ್ಷಿಗಳ ಜೀವನ ಚರಿತ್ರೆಯೇ ಇನ್ನೊಂದು ಮಹಾ ರಾಮಾಯಣ!

ಇನ್ನೊಮ್ಮೆ ಅದರ ಬಗ್ಗೆ ಮತ್ತು ಇನ್ನಿತರ ಥ್ಯಾಂಕ್ಸ್ ಗಿವಿಂಗ್‌ನ ರೋಚಕ ವಿವರಗಳ ಬಗ್ಗೆ ಹೇಳ್ತೀನಿ, ಆಯ್ತೇ?

ಇಂಗ್ಲೆಂಡಿನ ಪ್ಲಿಮತ್‌ನಿಂದ ಸೆಪ್ಟೆಂಬರ್ 1620ರಲ್ಲಿ ಅಲ್ಲಿಯ (ಇಂಗ್ಲೆಂಡಿನ) ಚರ್ಚಿನ ಸರ್ವೋಚ್ಚ ಆದರೆ ಭ್ರಷ್ಟ ಆಡಳಿತಕ್ಕೆ ಒಳಪಡಲು ಇಚ್ಛಿಸದ ಸುಮಾರು ನೂರಿಪ್ಪತ್ತೆಂಟು ಜನ ಪ್ರಾಟೆಸ್ಟೆಂಟರು, ಸಂಸಾರ ಸಮೇತರಾಗಿ ''ಮೇ ಫ್ಲವರ್'' ಎಂಬ ಹಡಗನ್ನೇರಿ ಪಶ್ಚಿಮಾಭಿಮುಖವಾಗಿ ತಮ್ಮ ಅದೃಷ್ಟವನ್ನರಸಿ ಇಲ್ಲಿಗೆ ವಲಸೆ ಹೊರಟು ಬಂದ ಇತಿಹಾಸ ಗೊತ್ತಲ್ಲ? ಚಳಿಗಾಲದ ಹವಾಮಾನ ವೈಪರೀತ್ಯದಿಂದಾಗಿ ಉಂಟಾದ ಚಂಡಮಾರುತಗಳು, ಹಸಿವು, ಬಾಯಾರಿಕೆ, ಅನಾರೋಗ್ಯ ಮುಂತಾದವುಗಳಿಂದ ಜರ್ಝರಿತರಾಗಿ ಈ ನಾಡಿನ ದಡ ತಲುಪಿದೋರು ಅವರಲ್ಲಿ ಕೇವಲ ಅರ್ಧದಷ್ಟೇ ಜನರಂತೆ. ಮೂಲತಃ ಇಲ್ಲಿದ್ದ ರೆಡ್ ಇಂಡಿಯನ್ನರಿತ್ತ ಆಸರೆ, ಅವರ ಸರಳ, ಧಾರಾಳ ಮನಸ್ಸಿನ ಆತಿಥ್ಯ ಹಾಗೂ ಅಂದು ಇಲ್ಲಿ ಹೇರಳವಾಗಿ ದೊರೆಯುತ್ತಿದ್ದ ಕಾಡು ಟರ್ಕಿ ಕೋಳಿಗಳ ರಸದೌತಣದಿಂದಷ್ಟೇ ಜೀವವುಳಿಸಿಕೊಂಡ ''ಪಿಲ್‌ಗ್ರಿಮ್ಸ್'' ಎಂದೇ ಇಂದಿಗೂ ಪ್ರಖ್ಯಾತರಾದ ಆ ಮಾಲ ಯಾತ್ರಿಕರು, ಈ ಸಮೃದ್ಧ ನೆಲದಲ್ಲಿ ತಮ್ಮ ವಲಸೆಯೂರಿ, ಕ್ರಮೇಣ ಇಷ್ಟು ಬೃಹತ್ ದೇಶವನ್ನು ಕಟ್ಟಿ ಬೆಳೆಸಿದ್ದನ್ನು ಜ್ಞಾಪಿಸಿಕೊಂಡು ಸಂಭ್ರಮಿಸೋ ಪರಿಪಾಠವೇ ಜಾರ್ಜ್ ವಾಶಿಂಗ್ಟನ್ ಹುಟ್ಟು ಹಾಕಿದ ಇಂದಿನ ಥ್ಯಾಂಕ್ಸ್ ಗಿವಿಂಗ್ ಹಬ್ಬ! ಮತ್ತು ಟರ್ಕಿಗಳನ್ನು ಇದೇ ಕಾರಣವಾಗಿ ಟರ್ಕಿ ಫಾರ್ಮುಗಳಲ್ಲಿ ಬೆಳೆಸಿ, Anti Biotics ಮತ್ತು ಹಾರ್ಮೋನುಗಳಿಂದ ಅವುಗಳ ಗಾತ್ರವನ್ನು ಎರಡು ಮೂರು ಪಟ್ಟಿನಷ್ಟು ಹೆಚ್ಚಿಸಿ, ಕೊನೆಗೆ ಅವುಗಳಿಂದ ಅಮೆರಿಕೆಯ ಮನೆ ಮನೆಗಳ ಡೈನಿಂಗ್ ಟೇಬಲ್ಲನ್ನು ಥ್ಯಾಂಕ್ಸ್ ಗಿವಿಂಗ್ ದಿನ ಅಲಂಕರಿಸಲು ಅವನ್ನು ಒಂದು ಖಾದ್ಯ ವಿಶೇಷವಾಗಿ ಮಾರ್ಪಡಿಸೋ ಪದ್ಧತಿ ಬೆಳೆದುಬಂದಿರೋದು! ಆದ್ದರಿಂದಲೇ ಬೇರೆಲ್ಲೂ ಕಂಡುಬರದ ಈ ಹಬ್ಬ ಅಮೆರಿಕನ್ನರಿಗೆ ಮಾತ್ರಾ ಇಷ್ಟು ಮುಖ್ಯ!

ಏನೇ ಅಂದರೂ, ತೀರಾ ತಮಾಷೆಯ ಒಂದು ವಿಷಯ ಈ ಅಮಾಯಕ ಪಕ್ಷಿಗಳ ಹೆಸರಿನ ವಿಚಿತ್ರ ಕತೆ! ಅಮೆರಿಕನ್ನರು ಈ ದಷ್ಟಪುಷ್ಟ ರುಚಿಕರ ಕೋಳಿಗಳನ್ನು ಟರ್ಕಿ ದೇಶದಿಂದ ಬಂದವು ಎಂದು ಭಾವಿಸಿ ಹಾಗೇ ಕರೆದರೆ, ಅವು ಹಿಂದೂಸ್ತಾನದಿಂದ ಬಂದವು ಎಂದು ಭಾವಿಸಿದ್ದ ಟರ್ಕಿ ದೇಶದವರ ಪ್ರಕಾರ, ಇದರ ಹೆಸರು ''ಹಿಂದಿ'' ಅಂತೆ! ಇದನ್ನು ಕೇಳಿ – ''ಗುಲಾಬಿಯನ್ನು ಯಾವ ಹೆಸರಿಂದ ಕರೆದರೇನು, ಅದರ ವಾಸನೆಗೇನೂ ಬಾಧಕ ಇರುಲ್ಲವಲ್ಲ!'' – ಅನ್ನೋ ಮಾತು ನಿಮಗೂ ಜ್ಞಾಪಕಕ್ಕೆ ಬಂದರೆ ಅದು ''ಟರ್ಕಿ''ಯ ಉರುಫ್ ''ಹಿಂದಿ''ಯ ಪುಣ್ಯ ವಿಶೇಷವೇ ಸರಿ ಬಿಡಿ! ಥ್ಯಾಂಕ್ಸ್ ಗಿವಿಂಗಿನ ಮೋಜಿನ ಮೇಜವಾನಿಗೋಸ್ಕರ ಅಂತಲೇ ಹುಟ್ಟಿ ಬೆಳೆದು ಅಸುನೀಗುವ ಈ ಅಸಂಖ್ಯ ಅಮಾಯಕ ಪಕ್ಷಿಗಳು, ಒಂದು ವೇಳೆ ಫ್ರಾಂಕ್ಲಿನ್ನಿನ ಮಾತುಗಳಿಂದ ಫುಲ್ ಖುಷ್ ಆಗೋ ಹಾಗಿದ್ದಿದ್ದರೆ, ಷೇಕ್ಸ್ ಪಿಯರ್‌ನ ಈ ಮಾತಿನಿಂದಲಂತೂ – ಕಟುಕರ ಹರಿತವಾದ ಕತ್ತಿಯ ಅಲುಗಿಗೆ ಸಿಗಬೇಕಾದ ತಮ್ಮ ವಾಸ್ತವ ಸತ್ಯವನ್ನೂ ತಾತ್ಕಾಲಿಕವಾಗಿ ಮರೆತು – ಭ್ರಮೆಯ ಸಂತೋಷ ಸಾಗರದಲ್ಲಿ ಮುಳುಗಿ ತೇಲಾಡಿರೋವು..., ಪಾಪ!

# ನನ್ನ ಶಾಪಿಂಗ್ ಫಜೀತಿ

**– ಆರತಿ ಘಟಿಕಾರ್**

**ಯಾ**ವುದೇ ವಸ್ತುವಿನ ಖರೀದಿ ಅದರಲ್ಲೂ ಬಟ್ಟೆ ಬರೆ ಶಾಪಿಂಗು ಎಂದರೆ ಬಹುತೇಕ ಮಹಿಳೆಯರು ಗಂಟೆಗಟ್ಟಲೆ ಸಮಯ ಕಳೆಯುವುದರಲ್ಲಿ ಮಹದಾನಂದ ಕಂಡುಕೊಳ್ಳುವರು! ಇದು ಅವರ ಜನ್ಮಸಿದ್ಧ ಹಕ್ಕಾಗಿರುವುದರಿಂದ ಯಾವ ಗಂಡು ಪ್ರಾಣಿಯೂ ಅವರ ಈ ಹಕ್ಕನ್ನು ವಿರೋಧಿಸಬಾರದು ಎಂಬುದು ನನ್ನ ಹೃದಯಾಳದ ಅಪೀಲು! ಈ ಕಾರ್ಯದಲ್ಲಿ ಅವರ ನಿಷ್ಠೆ, ಪ್ರಾಮಾಣಿಕತೆ ಒಂದು ಕಡೆಯಾದರೆ, ಆ ಸಮಯದಲ್ಲಿ ಸಮಯ ಪ್ರಜ್ಞೆ ಎಂಬ (ಚಿಲ್ಲರೆ) ವಿಷಯಕ್ಕೆ ತಲೆ ಕೆಡಸಿಕೊಳ್ಳದೆ ಅವರು ತೋರುವ ಏಕಾಗ್ರತೆ ಯಾವುದಕ್ಕೆ ಸಮ ನೀವೇ ಹೇಳಿ?

**ಅಪ್ಪ ಪ್ಲೀಜ್. ನಮ್ಮನ್ನು ಇಲ್ಲೇ ಇಳಿಸಿ ಬಿಡು ನಾವು ಟ್ಯಾಕ್ಸಿನೋ ಬಸ್ಸೋ ಹಿಡಿದು ಮನೆಗೆ ಹೋಗ್ತೀವಿ ಎಂದು ಒಕ್ಕೊರಲಿನಿಂದ ಮಕ್ಕಳು ಕೂಗಲು ಕಾರಣ?**

ಇನ್ನು ನಾನೂ ಈ ಮೇಲೆ ಹೇಳಿದ ಗುಂಪಿನವಳೇ! ಆದ್ದರಿಂದ ನಾನೂ ನನ್ನ ಅರಿವೇ ಅಂಚಡಿಕೊಳ್ಳಲು ಹೋದಾಗ ಸಮಯದ ಬಗ್ಗೆ ಕಿಂಚಿತ್ತೂ ಯೋಚಿಸದೆ ಮನಕೊಪ್ಪುವ ಬಟ್ಟೆ ಖರೀದಿಸುವ ತನಕ ಆರಿಸಬೇಕು ಎನ್ನುವ ಸಿದ್ಧಾಂತದವಳು!

ಸಾಮಾನ್ಯವಾಗಿ ನಮ್ಮ ಚೂಡಿದಾರ್, ಸೀರೆ ಹೀಗೆ ಇತರ ಬಟ್ಟೆ ಖರೀದಿಗೆ ನಾವು ಅಂಗಡಿ ಮಾರುಕಟ್ಟೆಗೆ ಲಗ್ಗೆ ಇಟ್ಟಾಗ ಆ ಸೇಲ್ಸ್‌ಮನ್ನಿನ ತಾಳ್ಮೆ ಪರೀಕ್ಷಿಸದೆ ಬಿಡುವುದಿಲ್ಲ! ನಮ್ಮ ಮಾಮೂಲಿ ಪ್ರಶ್ನೆಗಳು ರೀ ಈ ಕಲರ್‌ನಲ್ಲಿ ಬೇರೆ ಡಿಸೈನ್ ಇಲ್ವಾ? ಅಥವಾ ಈ ಡಿಸೈನ್‌ನಲ್ಲಿ ಬೇರೆ ಕಲರಿದ್ರೆ ನೋಡಬಹುದಾಗಿತ್ತು ಎಂದು ಅವನ ತಲೆ ತಿಂದಾಗ ಆತನೂ ಪಾಪ ತನ್ನ ತಾಳ್ಮೆಯನ್ನು ರಬ್ಬರ್ ಬ್ಯಾಂಡಿನಂತೆ ಹಿಗ್ಗಿಸಿಕೊಂಡು ನಗುತ್ತಲೇ ನಮ್ಮುಂದೆ ರಾಶಿ ಬಟ್ಟೆಗಳನ್ನು ಪೇರೈಸುತ್ತಾನೆ. ಒಮ್ಮೊಮ್ಮೆ ಆ ಸೀರೆಗಳ ಗುಡ್ಡೆಯಲ್ಲಿ ನಾನೊಂದು ಕಡೆ ಎಳೆದರೆ ಇನ್ನೊಬ್ಬ ಮಹಿಳೆ ಅದೆ ಸೀರೆಯನ್ನು ಮತ್ತೊಂದು ಕಡೆಯಿಂದ ಎಳೆಯುತ್ತಿರುತ್ತಾರೆ! ಅಕಸ್ಮಾತಾಗಿ ಅವರ ಕೈಹಿಡಿತ ಜೋರಾಗಿ ಆ ಸೀರೆ ಅವರ ಕೈಸೇರಿ ಅದನ್ನು ಆಕೆ ಖರೀದಿಸಿ ಬಿಟ್ಟರಂತೂ ನಾನೇನೋ ಕಳೆದುಕೊಂಡ ಹಾಗೆ ಮತ್ತೆ ಆ ಸೇಲ್ಸ್‌ಮೆನ್ನಿಗೆ ರೀ ಅದೇ ಸೀರೆ ಇನ್ನೊಂದು ಪೀಸ್ ಇಲ್ವಾ ಎಂದು ಗಾಬರಿಯಿಂದ ಕೇಳಲು ಅಯ್ಯೋ ಮೇಡಂ ಆ ಸೀರೆ ನಿಮಗೇ ಮೊದ್ಲು ತೋರಿಸಿದ್ನಲ್ಲಾ, ನೀವು ಇಷ್ಟ ಇಲ್ಲ ಅಂದ್ರಿ ಅಂದಾಗ ನನ್ನ ಮುಖ ಪೆಚ್ಚು!

ಇನ್ನು ರೆಡಿಮೇಡ್ ಚೂಡಿದಾರ್, ಇಲ್ಲಾ ಬರಿ ಮೆಟೀರಿಯಲ್ ಕೊಳ್ಳುವಾಗ ಅದು ಕಾಟನ್ ಬಟ್ಟೆ ಆಗಿದ್ದರಂತೂ ಮಹಿಳಾ ಮಣಿಗಳ ಅನುಮಾನದಿಂದ ಕೇಳುವ ಸಾಮಾನ್ಯ ಪ್ರಶ್ನೆ ರೀ ಇದು ಷ್ರಿಂಕ್ ಆಗುತ್ತಾ? ಗಾಢ ಬಣ್ಣ ಬೇರೆ, ಕಲರ್ ಹೋಗಲ್ಲ ತಾನೇ? ಇದೇ ರೀತಿ ನಾನೂ ಒಮ್ಮೆ ಕೇಳಿದಾಗ ಒಬ್ಬ ಕಿಲಾಡಿ ಸೇಲ್ಸ್‌ಮನ್ನು ಇಲ್ಲ ಮೇಡಂ ಕಲರ್ ಎಲ್ಲೂ ಹೋಗಲ್ಲ

ಬಕೆಟ್‌ನಲ್ಲೆ ಇರುತ್ತೆ ಎಂದು ಅವನ ಸಾಮಾನ್ಯ ಜ್ಞಾನ ಪರೀಕ್ಷಿಸಿದ ನನಗೆ ಅಸಮಾನ್ಯವಾಗಿ ಉತ್ತರಿಸಿದ್ದ!

ಇಲ್ಲಿ ದುಬೈ ನಗರಿಗೆ ಬಂದ ನಂತರ ನನ್ನ ಶಾಪಿಂಗ್ ಕೂಡ ವಿಸ್ತಾರಗೊಂಡಿದೆ! ಕೊಳ್ಳುವಿಕೆಯಲ್ಲಿ ಅಲ್ಲ, ಬದಲು ಆ ಕ್ರಿಯೆಯಲ್ಲಿ ಗಂಟೆಗಟ್ಟಲೆ ಸಮಯ ವ್ಯಯ ಮಾಡುವುದರಲ್ಲಷ್ಟೇ! ಇಂದು ನನ್ನ ಬಟ್ಟೆ ಶಾಪಿಂಗಿದೆ ಎಂದು ನಾನೇನಾದರು ಬಾಯಿ ತಪ್ಪಿ ಅನೌನ್ಸ್ ಮಾಡಿದರಂತೂ ಗಂಡ ಮಕ್ಕಳ ಮುಖದಲ್ಲಿ ಗಾಬರಿ ಎದ್ದು ತೋರುತ್ತ ಒಮ್ಮೆಲೆ ಚಿಂತಾಕ್ರಾಂತರಾಗಿ ಬಿಡುತ್ತಾರೆ! ನನ್ನ ಮಕ್ಕಳು ಶಾಪಿಂಗ್ ಆದ ಬಳಿಕ ಅವರ ಅಚ್ಚುಮೆಚ್ಚಿನ ಪಿಜ್ಜಾ ತಿನ್ನುವ ಆಸೆಯನ್ನೂ ಕೈ ಬಿಟ್ಟು ಇದರಿಂದ ಜಾರಿಕೊಳ್ಳಲು ಕಾರಣ ಹುಡುಕುವ ಸದ್ಬುದ್ಧಿಯಲ್ಲಿ ತೊಡಗುತ್ತಾರೆ! ಇನ್ನು ತನ್ನ ಮೈಮೇಲೆ ಬಂದೆರುಗುವ ಆಪತ್ತಿಗೆ ಮುಂಜಾಗ್ರತಾ ಕ್ರಮವನ್ನು ಅನುಸರಿಸಲು ಸಿದ್ಧಗೊಳ್ಳುತ್ತಿರುವ ಪತಿಯ ಮುಖಭಾವ ಕಂಡಾಗ ಅರೆ ಇದಕ್ಯಾಕ್ಕೆ ಇಷ್ಟೊಂದು ಚಿಂತೆ ಮಾಡ್ತಾರೋ! ಎನ್ನುವುದು ನನ್ನ ಸಿಂಪಲ್ ತರ್ಕ ಅಷ್ಟೇ!

ಮೊದ ಮೊದಲು ಮಕ್ಕಳು ಗಂಡ ನನ್ನ ಶಾಪಿಂಗು ಪ್ರಕ್ರಿಯೆಯಲ್ಲಿ ಉತ್ಸಾಹದಿಂದಲೇ ಭಾಗವಹಿಸುತ್ತಿದ್ದರು. ಆದರೆ ಎಷ್ಟು ವೇಳೆಯಾದರೂ ಅದು ಮುಗಿಯುವ ಸೂಚನೆ ಇಲ್ಲದೆ ಹಿಗ್ಗುತ್ತಲೇ ಹೋದಾಗ ಪತಿ ಪರಮೇಶ್ವರ ಹೊರ ನಡೆದು ನಮ್ಮ ಮಾಲ್‌ನ ಮುಂಭಾಗದಲ್ಲಿ ಇರುವ ಚೇರಿನಲ್ಲಿ ಆಸೀನರಾಗಿ ಎರಡು ಧಿರಾಂ ಚಿಲ್ಲರೆ ಹಾಕಿ ಎರಡೆರಡು ಬಾರಿ ಮಸಾಜ್ ಮಾಡಿಸಿಕೊಂಡರೂ ನನ್ನ ಬಟ್ಟೆ ಶಾಪಿಂಗು ಮುಗಿದಿರುತ್ತಿರಲಿಲ್ಲ! ಅವರು ನನ್ನ ಸ್ಥಿತಿಗತಿಗಳನ್ನು ನೋಡಲು ಒಳ ಬಂದಾಗ ನಾನು 2 ಅಥವಾ 3 ಚೂಡಿದಾರ್‌ಗಳನ್ನು ಒಟ್ಟಿಗೆ ಕೈಯಲ್ಲಿ ಹಿಡಿದು ಜೀವನದ ಮಹತ್ತರ ನಿರ್ಣಯವೊಂದನ್ನು ಕೈಗೊಳ್ಳುವ ಮುಖಭಾವದಿ ಯಾವುದನ್ನೂ ಆಯ್ಕೆ ಮಾಡಲಿ ಎಂಬ ಗೊಂದಲದಲ್ಲಿ ಇರುವುದನ್ನು ಕಂಡು ಅಯ್ಯೋ ಇನ್ನು ನಿನ್ನ ಖರೀದಿ ಮುಗಿದೇ ಇಲ್ವಾ ಎಂದು ಅವರು ಆಶ್ಚರ್ಯ ಚಕಿತರಾದಾಗ, ನಾನು ಅವುಗಳ ಆಯ್ಕೆಯಲ್ಲಿ ಅವರನ್ನು ಎಳೆದುಕೊಂಡು ರೀ ಇಲ್ಲಿರುವ ಸಾಕಷ್ಟು ಬಟ್ಟೆಗಳನ್ನೆಲ್ಲಾ ತಡಕಾಡಿ ಕೊನೆಗೆ ಇವೆರಡನ್ನು ಮಾಡಿದ್ದೀನಿ. ನೋಡಿ, ಇದರಲ್ಲಿ ನನಗ್ಯಾವುದು ಒಪ್ಪುತ್ತೆ ನೀವೇ ಹೇಳಿ? ನನಗೇನೋ ಎರಡು ಚೆನ್ನಾಗಿ ಕಾಣತ್ತೆ. ಅದಕ್ಕೆ ಯಾವುದು ಆರಿಸಬೇಕು ಅನ್ನುವ ಗೊಂದಲದಿಂದ ಸ್ವಲ್ಪ ಲೇಟ್ ಆಯಿತು ಎಂದು ಸ್ವಲ್ಪವೂ ಬೇಸರವಿಲ್ಲದೆ ಪಟ್ಟ ಶ್ರಮದ ವೃತ್ತಾಂತವನ್ನು ಅರುಹಿದಾಗ ಇವರು ಕೈಜಾರುತ್ತಿರುವ ತಮ್ಮ ತಾಳ್ಮೆಯನ್ನು ಹೇಗೋ ತಿಣುಕಾಡಿ ಹಿಡಿದು ನಿಲ್ಲಿಸಿ ನಿನಗೆ ಎರೆಡೂ ಡ್ರೆಸ್ ತುಂಬಾ ಚೆನ್ನಾಗಿ ಕಾಣುತ್ತೆ. ಬೇಗ ಎರಡನ್ನೂ ಪ್ಯಾಕ್ ಮಾಡಿಸು ಎನ್ನುವ ಸೂಪರ್ ಉಪಾಯವನ್ನು ಹುಡುಕಿ ನನ್ನನ್ನು ಹೊರಗೆ ಕರೆದುಕೊಂಡು ಬರುವಲ್ಲಿ ಸಫಲರಾಗುತ್ತಿದ್ದರು!

ಒಮ್ಮೊಮ್ಮೆ ನಾನಾರಿಸಿದ ಬಟ್ಟೆ ಆಯ್ಕೆಗೆ ನಾನೇ ಸಂತಸಗೊಂಡು ಆ ಡ್ರೆಸ್ ಅನ್ನು ಪ್ರೀತಿಯಿಂದ ಎದೆಗವಚಿಕೊಂಡು ಮನೆಗೆ ಬಂದ ನಂತರ ಮನೆಯಲ್ಲೇ ಮತ್ತೊಮ್ಮೆ ಹಾಕಿ ನೋಡಲು ಅದರ ಮೇಲೆ ಸ್ವಲ್ಪವೂ ಕರುಣೆ ತೋರದೆ ಛೆ ಯಾಕೋ ಸರಿ ಅನ್ನಿಸ್ತಿಲ್ಲಾ ಎಂದು ಪತಿ ದೇವರನ್ನು ಪರಿಪರಿಯಾಗಿ ಒಪ್ಪಿಸಿ ಅದನ್ನು ಮರುದಿನವೇ ಹೋಗಿ ಬದಲಾಯಿಸಿದ

ಪ್ರಸಂಗಗಳೂ ಇವೆ. ಹಾಗಾಗಿ ಇವರು ನನ್ನ ಬಟ್ಟೆ ಆಯ್ಕೆಯ ನಂತರ ಇದು ಇಷ್ಟ ಆಗಿದೆ ಅಲ್ವಾ, ಫೈನಲ್ ತಾನೇ, ಇನ್ನು ಮತ್ತೆ ಬದಲಾಯಿಸಬೇಡ ಮಾರಾಯ್ತಿ ಎಂದು ನನ್ನಿಂದ ಭಾಷೆ ಪ್ರಮಾಣಗಳನ್ನು ತೆಗೆದುಕೊಳ್ಳುವುದೊಂದು ಬಾಕಿ!

ಇನ್ನು ನಾ ಆರಿಸಿದ ಡ್ರೆಸ್ಸು ನನಗೆ ಒಪ್ಪುವುದೋ ಇಲ್ಲವೋ ಎಂದು ಅಲ್ಲಿರುವ ಉಡುಪು ಬದಲಿಸುವ ಕೋಣೆಗೆ ನುಗ್ಗುವ ಮುನ್ನ ಇವರು ಸುಮ್ಮನೆ ನಿಂತು ಕಾಲಹರಣ ಮಾಡುವ ಬದಲಿಗೆ ಅಲ್ಲಿಗೆ ಬರಲು ಹೇಳಿರುತ್ತೇನೆ. ಇವರ ಅಭಿಪ್ರಾಯವೂ ನನಗೆ ಮುಖ್ಯವಲ್ಲವೆ? ಸರಿ ಅದೇ ಕೆಲಸಕ್ಕಾಗಿ ಕೆಲವು ಗಂಡಂದಿರು ಆಗಲೇ ಅಲ್ಲಿ ಜಮಾಯಿಸಿರುತ್ತಾರೆ. ಬಾಗಿಲ ಹೊರಗೆ ತಮ್ಮ ಕಂದಮ್ಮಗಳನ್ನು ಎತ್ತಿಕೊಂಡೋ, ಇಲ್ಲ ಪ್ರಾಂನಲ್ಲಿ ಸುಧಾರಿಸುತ್ತಲೋ ಕಾಲ ಕಳೆಯುವುದಲ್ಲದೆ ತಮ್ಮ ತುಂಟ ಮಕ್ಕಳ ಮೇಲೊಂದು ಕಣ್ಣಿಡುತ್ತಲೇ ಒಳಗೆ ರೂಪಾಂತರಗೊಳ್ಳಲು ಸೇರಿಕೊಂಡ ಮಡದಿಯ ಸಲುವಾಗಿ ಸಹನೆಯಿಂದ ಕಾಯುವ ಗಂಡಂದಿರು! ಸರಿ ಯಾವ ಕೋಣೆಯ ಬಾಗಿಲು ತೆರೆದರೂ, ಯಾವ ಬೇಧಭಾವವಿಲ್ಲದೆ ಬಂದವಳನ್ನು ಕಣ್ಣುತುಂಬಾ ನೋಡುವಾಗ ಅವರಿಗೂ ಟೈಮ್‌ಪಾಸ್!

ಇವರು ಒಮ್ಮೊಮ್ಮೆ ನಾ ಹಾಕಿಕೊಂಡು ಬಂದ ಧಿರಸುಗಳನ್ನೆಲ್ಲಾ, ಬಾಗಿಲ ಮರೆಯಿಂದಲೇ ಇಣುಕಿ ನೋಡಿ ಚೆನ್ನಾಗಿಲ್ಲ, ನಿನಗೆ ಇದು ಒಪ್ಪೋಲ್ಲಾ ಎಂದು ಬಿಟ್ಟರೆ ಪಾಪ! ಅವಕ್ಕೆ ಬೇಸರವಾದೀತು ಎಂಬ ನಿಲುವಿನಲ್ಲಿ ಎಲ್ಲವನ್ನೂ ಪಾಸ್ ಮಾಡಿದಾಗ ನಾನು ರೇಗಿ ನನಗಿಷ್ಟ ಬಂದದ್ದನ್ನು ಆಯ್ಕೆ ಮಾಡಿ ಹೊರ ನಡೆಯುತ್ತೇನೆ!

ಅಂದೊಮ್ಮೆ ನಮ್ಮ ವಾರದ ರಜೆಯ ನಿಮಿತ್ತ ನನ್ನ ಅಡುಗೆಗೆ ವಿರಾಮವನ್ನು ನೀಡಿ ಹೊರಗಡೆಯೇ ಹೊಟ್ಟೆ ಪೂಜೆ ಮುಗಿಸಿ ನಾನಿವರಿಗೆ ರೀ ಮುಂದೆ ಲುಲುನಲ್ಲಿ (ಈ ಊರಿನ ಒಂದು ಮಾಲ್) ನನ್ನ ಬಟ್ಟೆ ಶಾಪಿಂಗ್ ಇದೆ, ಸ್ವಲ್ಪ ಹೊತ್ತು ಅಷ್ಟೇ, ಮುಗಿಸಿ ಹೊರಟು ಬಿಡೋಣ ಅಂದಾಗ ಅಷ್ಟೂ ಹೊತ್ತು ಕಾರಿನಲ್ಲಿ ನಗಾಡಿಕೊಂಡಿದ್ದ ಮಕ್ಕಳಿಬ್ಬರೂ ಗಂಭೀರವದನರಾದರು! ಮುಖಭಾವದಲ್ಲಿ ಏನೋ ಬದಲಾವಣೆ. ಅಣ್ಣತಮ್ಮಂದಿರಿಬ್ಬರೂ ಕಣ್ಣ ಸನ್ನೆಯಲ್ಲೇ ಏನೋ ಮಹತ್ವದ ನಿರ್ಧಾರ ಕೈಗೊಂಡು ಅಪ್ಪ ಪ್ಲೀಜ್ ನಮ್ಮನ್ನು ಇಲ್ಲೇ ಇಳಿಸಿ ಬಿಡು ನಾವು ಟ್ಯಾಕ್ಸಿನೋ ಬಸ್ಸೋ ಹಿಡಿದು ಮನೆಗೆ ಹೋಗ್ತೀವಿ ಎಂದು ಒಕ್ಕೊರಲಿನಿಂದ ಕೂಗಿದರು! ಆಗ ನಾನು ಮುಖ ಗಂಟಿಕ್ಕಿ ರೇಗುತ್ತಾ ಆಹಾ! ನಿಮ್ಮ ಗೇಮು, ಸೀಡೀ, ಮಣ್ಣು ಮಸಿ ಇದ್ದಾಗಲೆಲ್ಲಾ ಎಷ್ಟು ಉತ್ಸಾಹದಿಂದ ನಮ್ಮ ಜೊತೆ ಬರ್ತೀರಲ್ಲೋ? ಆಗೆಲ್ಲಾ ನಾನು ಒಂಚೂರು ಬೇಜಾರು ಮಾಡಿಕೊಳ್ಳದೆ ನಿಮ್ಮಗಳ ಜೊತೆ ಸುತ್ತಿ ಗಂಟೆ ಗಟ್ಟಲೆ ಶಾಪಿಂಗ್ ಮಾಡಲ್ವಾ? ಎಂದು ಅವರನ್ನು ಫ್ಲಾಶ್ ಬ್ಯಾಕಿಗೆ ಕರೆದೊಯ್ದು ನೆನಪು ಮಾಡಿಕೊಟ್ಟರೂ ಅದು ಅವರ ಮೇಲೆ ಕಿಂಚಿತ್ ಪ್ರಭಾವವೂ ಬೀಳದೆ, ಅವರ ತಂದೆ ಅವರಿಗೆ ಅನುಮತಿ ಕೊಟ್ಟಾಕ್ಷಣ ಪಂಜರದೊಳಗಿನ ಗಿಣಿಯನ್ನು ಸ್ವತಂತ್ರವಾಗಿ ಹಾರಿಬಿಟ್ಟಂತೆ ಸಂತಸದಿಂದ. ಬೈ ಅಮ್ಮ, ಆರಾಮಾಗಿ ಶಾಪಿಂಗ್ ಮಾಡಿ ಬನ್ನಿ ಎನ್ನುತ್ತಾ ಅಪ್ಪನ ಕಡೆಗೊಂದು ಅನುಕಂಪದ ನೋಟ ಎಸೆದು ಧಾಪುಗಾಲಿಕ್ಕಿದರು.

ಅವರು ಹೋದ ದಾರಿಯನ್ನೇ ನನಗಾ ಭಾಗ್ಯವಿಲ್ಲವೆ? ಎನ್ನುವ ಮುಖಭಾವದಿಂದ ನಿರುಕಿಸುತ್ತಿದ್ದ ಪತಿಯ ಕಡೆಗೆ ತಿರುಗಿ ಆಹಾ ನೋಡಿದ್ರಾ! ಇಬ್ಬರೂ ಹೇಗೆ ಓಡಿದರೂ ಅಂತ!? ಅದು ಬಿಡಿ, ನಿಮ್ಮ ಬಟ್ಟೆ-ಬರೆ ಖರೀದಿ ಇದ್ದಾಗ ನಾನು ಎಷ್ಟು ಆಸಕ್ತಿಯಿಂದ ಹೆಲ್ಪ್ ಮಾಡಲ್ವಾ ಎಂದು ನನ್ನ ಘನ ಸೇವೆಯನ್ನು ಬೇಕಿಲ್ಲದೆ ನೆನಪಿಸಿದಾಗ ಗಂಡ ತಕ್ಷಣ ಉತ್ತರದ ಕಡೆ ಅಂದರೆ ನನ್ನ ಕಡೆ ತಿರುಗಿ ಉತ್ತರ ಮುಖಿಯಾದರು. ಅಯ್ಯೋ ನೀನಿಲ್ಲದೆ ನನ್ನ ಶಾಪಿಂಗ್ ಸಾಧ್ಯವೇ? ನಾನು ಕಾಲು ಘಂಟೆಯಲ್ಲೇ ಮುಗಿಸೋಣ ಅಂದುಕೊಂಡರೂ ನೀನು ಬಿಡಬೇಕಲ್ಲ! ನಾ ಆರಿಸಿದ ಶರ್ಟು, ಪ್ಯಾಂಟು, ಟೀ ಶರ್ಟುಗಳಿಗೆಲ್ಲಾ ನಿನ್ನ ವಿಶೇಷ ಟಿಪ್ಪಣಿಗಳು ಇರಲೇಬೇಕು! ಅಯ್ಯೋ ಈ ಬಣ್ಣದ್ದು ನಿಮ್ಮ ಹತ್ತಿರ ಇನ್ನು ಮೂರಿದೆ. ಈ ಚೆಕ್ಸು ನಿಮಗೆ ಒಪ್ಪಲ್ಲ, ಅಯ್ಯೋ ಈ ಶರ್ಟಿನಲ್ಲಿ ನಿಮ್ಮ ಹೊಟ್ಟೆ ತುಂಬಾ ಕಾಣಸತ್ತೆ. ಒಂದೇ ಎರಡೇ! ಎಂದು ತಮ್ಮ ಅಂತರಾಳವನ್ನು ನನ್ನೆದುರಿಗೇ ಅಪ್ಪಿ ತಪ್ಪಿ ತೋಡಿಕೊಂಡಾಗ ನಾನು ಕ್ಷಣ ಕಾಲ ಕಕ್ಕಾಬಿಕ್ಕಿಯಾದೆ! ಆದರು ಸಾವರಿಸಿಕೊಂಡು ಆಹಾ ನೀವು ಮಹಾ ಸ್ವಾರ್ಥಿ ಕಣ್ರೀ, ನನ್ನ ಆಯ್ಕೆ ತುಂಬಾ ಚೆನ್ನಾಗಿದೆ ಅಂತ ನಾನು ಆರಿಸಿದ ಶರ್ಟ್ ತಾನೇ ನೀವು ಹಾಕೋದು? ಮತ್ತೆ ಈಗ ನನ್ನ ಮಾತನ್ನು ಅರ್ಥಕ್ಕೋ, ಮುಕ್ಕಾಲಿಗೋ ತುಂಡರಿಸಿ ಇವರು ನಗುತ್ತಾ ಆದರೆ ಏನೇ ಅನ್ನು, ನೀನಿಲ್ಲದಿದ್ರೆ ನನಗೆ ಯಾವುದು ತೊಗೋಬೇಕು ಯಾವುದನ್ನು ಬಿಡಬೇಕು ಅಂತ ಒಂಥರಾ ಕಣೆ ಎಂದು ನನ್ನ ನಿಸ್ವಾರ್ಥ ಸಹಾಯವನ್ನು ಸ್ಮರಿಸಿಕೊಂಡರು.

ಆಗ ನಾನು ಹಲ್ಕಿರಿಯುತ್ತಾ ನೋಡಿ ಮತ್ತೆ ಈಗ ನನ್ನ ಚೂಡಿದಾರ್ ಆಯ್ಕೆಯಲ್ಲಿ ನನ್ನ ಹಾಗೆ ನೀವು ಕೂಡಾ ನನಗೆ ಹೆಲ್ಪ್ ಮಾಡ್ಬೇಕು ಆಯ್ತಾ ಎಂದು ಪ್ರೀತಿಯಿಂದ ಇವರ ಕೈ ಹಿಡಿದು ಮಾಲ್‌ನತ್ತ ನಡೆದೆ.

## ನೆಗಡಿಗೆ ಯಾವ ಗಡಿ

ನೆಗಡಿಯಿಂದ ಒದ್ದಾಡುತ್ತಿದ್ದವನೊಬ್ಬನನ್ನ ಕಂಡು ಇದ್ಯಾಕಿಂತ ಫಜೀತಿ ಪಡ್ತಿದೀರ ಏನಾದ್ರೂ ತಗೋಳೋಲ್ಲ ಯಾಕೆ ಅಂತ ಕೇಳಿದನಂತೆ. ಅದಕ್ಕೆ ಅವನು ಮೂಗು ಒರೆಸಿಕೊಂಡು ನನಗೆ ನೆಗಡಿ ವರ್ಷದಲ್ಲಿ ಎರಡೇ ಸಾರಿ ಬರೋದು. ಇರ್‍ಲಿ ಪರವಾಗಿಲ್ಲ ನನಗೆ ಅಭ್ಯಾಸವಾಗಿದೆ ಅಂದ. ಅದಕ್ಕೆ ಇವನು ಹೌದಾ ವರ್ಷಕ್ಕೆ ಎರಡೇ ಸಾರಿನಾ ಅದು ಹೇಗೆ ಅಂತ ಕೇಳಿದ್ದಕ್ಕೆ ಹೌದು ವರ್ಷಕ್ಕೆ ಎರಡೇ ಸಾರಿ ಬರೋದು ಆದರೆ ಒಂದೊಂದು ಸಾರಿ ಬಂದಾಗಲೂ ನನ್ನನ್ನು ಆರು ತಿಂಗಳು ಕಾಡಿಸುತ್ತೆ ಎಂದನಂತೆ. ಅದನ್ನು ಕೇಳಿಸಿಕೊಂಡವನಿಗೆ ಮೂಗಿನಲ್ಲಿ ಗುಳು ಗುಳು ಅನ್ನೋಕೆ ಷುರು ಆಯಿತು.

*– ಸುಕೇಶವ*

# ನಿಮಗೆ ನೆಗಡಿ ಆಗಿದೆಯೇ?

**- ಸಿ.ಆರ್. ಸತ್ಯ**

**ಬೆಂ**ಗಳೂರಿನಲ್ಲೆಲ್ಲಾ ನೆಗಡಿ ಡಾಕ್ಟ್ರು ಅಂತ ಹೆಸರುವಾಸಿಯಾಗಿರುವ ಡಾಕ್ಟರ್ ನೆಗಡಿಮಠ ಅವರು ನಮ್ಮ ಪಕ್ಕದ ಮನೆಯಲ್ಲೇ ವಾಸವಾಗಿದ್ದಾರೆ. ಸುಮಾರು ಮೂವತ್ತು ವರುಷಗಳ ಹಿಂದೆ ಹುಬ್ಬಿ ಧಾರವಾಡ್ ಕಡೆ ಇಂದ ಬಂದು ಇಲ್ಲೇ ನೆಲಸಿದ್ದಾರೆ. ಆತ ಎಂ.ಬಿ.ಬಿಎಸ್ಸೋ., ಎಮ್.ಎಸ್.(ನೆಗಡಿಯಾಲೊಜಿ)ಯೋ ಏನೋ ಗೊತ್ತಿಲ್ಲ. ಆದರೆ, ಅವರ ಡಿಗ್ರಿ ಕಟ್ಟಿಕೊಂಡು ಏನಾಗಬೇಕು ಹೇಳಿ? ಮುಖ್ಯವಾಗಿ ಅವರು ನೆಗಡಿ ಪೇಷೆಂಟ್‌ಗಳಿಗೆಲ್ಲಾ ದೇವರ ಸಮಾನರಾಗಿದ್ದಾರೆ. ನಾನೂ ನಮ್ಮ ಮನೆ ಗೇಟ್ ಹತ್ತಿರ ನಿಂತುಕೊಂಡು ಅವರ ಶಾಪ್‌ಗೆ ಹೋಗಿ ಬರೋ ಪೇಷೆಂಟ್‌ಗಳನ್ನ ನೋಡ್ತಾನೇ ಇದೀನಿ. ಹೋಗ್ತಾ ಆಕ್ಷೀ!! ಅಂತ ಸೋತ ಸೋರೇಕಾಯಾಗಿ ಕಾಣಿಸೋರು ಹೊರಗೆ ಬರ್ತಾ ಮೈಸೂರು ಬದನೇಕಾಯಿ ತರಹ ಇರ್ತಾರೆ. ಸಾಧಾರಣವಾಗಿ ನೆಗಡಿಗೆ ಔಷಧಿಯೇ ಇಲ್ಲಾ ಅಂತ ಎಲ್ಲಾ ಹೇಳೋವಾಗ, ಈ ಮನುಷ್ಯ ಹೇಗೆ ನೆಗಡೀನ ವಾಸಿ ಮಾಡ್ತಾರೆ ಅನ್ನೋ ಪ್ರಶ್ನೆ ನನ್ನನ್ನೂ ಆವಾಗಾವಾಗ ಕಾಡ್ತಿತ್ತು. ಒಂದು ದಿವಸ ಕುತೂಹಲ ತಡಿಯೋಕ್ಕೆ ಆಗದೆ, ಯಾವ ಪೇಷೆಂಟ್ ಇಲ್ಲದಿದ್ದಾಗ, ನಾನು ಅವರ ಮನೆಗೆ ನುಗ್ಗಿದೆ.

''ಓಹೋ, ನಿಮಗೂ ನೆಗಡಿ ತಟ್ಟಿತೇನೂ? ಬನ್ನಿ, ಇಲ್ಲಿ ಕೂತ್ಕೊಳ್ಳಿ'' ಅಂತ ಪೇಷೆಂಟ್ ಕುರ್ಚಿಗೆ ಆಹ್ವಾನಿಸಿದರು.

''ಇಲ್ಲಾ ಡಾಕ್ಟ್ರೆ, ಇನ್ನೂ ಬಂದಿಲ್ಲ. ಬಂದರೆ, ನೀವಲ್ಲದೇ ನನಗೆ ಇನ್ಯಾರು ಗತಿ? ನೆಗಡಿಗೆ ಇದುವರೆವಿಗೂ ಯಾವ ತರಹ ಪರಿಹಾರವೂ ವೈದ್ಯರು ಕಂಡುಹಿಡಿದಿಲ್ಲ ಅಂತ ಅಲ್ಲೀ ಇಲ್ಲೀ ಓದುತ್ತಾನೇ ಇದೀನಿ. ಹಾಗಿದ್ರೂ, ನೀವು ಇಷ್ಟೊಂದು ಜನಕ್ಕೆ ನೆಗಡಿ ವಾಸಿ ಮಾಡಿ ಪ್ರಸಿದ್ಧರಾಗಿದ್ದೀರಲ್ಲಾ, ಅದು ಹೇಗೆ ಸಾಧ್ಯವಾಯಿತು ಅಂತೀನಿ?'' ಅಂತ ಕೇಳಿದೆ.

''ಓಹೋ, ದೊಡ್ಡ ಪ್ರಶ್ನೆಯನ್ನೇ ಕೇಳಿದೀರಿ. ಇದಕ್ಕೆ ದೊಡ್ಡ ಉತ್ತರಾನೇ ಕೊಡಬೇಕು. ಇರಿ, ಕಾಫಿ ಮಾಡ್ಕೊಂಡು ತರುತ್ತೀನಿ. ಕಾಫಿ ಕುಡೀತಾ ಹೇಳ್ತೀನಿ'' ಅಂತ ಅಂದರು.

''ಅಯ್ಯೋ, ಪಾಪ ನಿಮ್ಮ ಶ್ರೀಮತಿಯವರಿಗೆ ಯಾಕೆ ತೊಂದರೆ, ಕಾಫಿ, ಗೀಫಿ ಬೇಡ'' ಅಂತ ಅಂದೆ.

''ಇಲ್ಲ ಇಲ್ಲ, ಅವಳು ಮಾಡಲ್ಲ. ನಾನೇ ಮಾಡೋದು. ಅವಳಿಗೂ ನೆಗಡಿಯಾಗಿ ಮಲಗಿಕೊಂಡಿದ್ದಾಳೆ'' ಅಂತ ಅಡುಗೆ ಮನೇಗೆ ಹೋಗಿ ಕಾಫಿ ತಂದರು. ಕಾಫಿ ಕುಡೀತಾ, ಕೇಳಿದ್ದನ್ನ ಕೆಳಗೆ ಒಪ್ಪಿಸಿದ್ದೀನಿ.

''ಕಾಫಿ ಹೇಗಿದ್ಯೋ ಏನೋ?... ನಾನು ಹುಬ್ಬಿ ಕಡೆಯವನು... ಇಲ್ಲಿ ಬಂದು ಕಾಫಿ ಮಾಡೋದು ಕಲಿತೆ. ಇರಲಿ ನೋಡಿ, ನೆಗಡಿ ಅನ್ನೋದು ವಾಸ್ತವವಾಗಿ, ಯಾವ ದೈಹಿಕ ತೊಂದರೇನೂ ಅಲ್ಲ. ಅದೊಂದು ಮಾನಸಿಕ ಭ್ರಮೆ ಅಷ್ಟೆ! ಇದನ್ನ ನಮ್ಮ ಜನ ಅರ್ಥ

ಮಾಡಿಕೊಂಡಿಲ್ಲ. ನನಗೆ ನೆಗಡಿ ಬಂತು ಅಂತ ಪ್ರಪಂಚಕ್ಕೆಲ್ಲಾ ಸಾರಿಕೊಂಡು, ಮೂಗನ್ನ ಕರ್ಚೀಫ್‌ನಲ್ಲಿ ಮುಚ್ಕೊಂಡು, ಆಕ್ಷೀ!! ಪಾಕ್ಷೀ!! ಅಂತ ಶಬ್ದ ಮಾಡ್ತಾರೆ. ಕಣ್ಣಲ್ಲಿ ನೀರು ಸುರಿಸ್ಕೋತಾರೆ. ಆಫೀಸ್‌ಗೆ ಲೀವ್ ಹಾಕ್ತಾರೆ. ಹೆಂಡತಿ ಕೈಲಿ ಮೆಣಸಿನ ಸಾರು ಮಾಡಿಸಿಕೊಂಡು ಬೆನ್ನು, ಎದೇಗೆಲ್ಲಾ ವಿಕ್ಸು, ಪಕ್ಸು ಅಂತ ಮುಲಾಮುಗಳನ್ನು ಹಚ್ಚುಸ್ಕೋತಾರೆ. ಹಾಗಾದರೆ, ಇದೇನು ನನ್ನ ಹೆಂಡತೀಗೂ ''ನೆಗಡಿ'' ಆಗಿದೆಯಲ್ಲಾ ಅಂತ ನೀವು ಕೇಳೋದು ಸಹಜಾನೆ! ನಾನು ಏನು ಮಾಡಲಿ ಹೇಳಿ? ನನ್ನಂತಹ ಡಾಕ್ಟರ್ ಹೆಂಡತಿ ಅಂತ ಅನ್ನಿಸ್ಕೊಂಡು, ನಾನು ಏನು ಹೇಳ್ತೀನಿ ಅಂತ ಅವಳು ಇದುವರೆವಿಗೂ ಅರ್ಥಮಾಡಿಕೊಂಡಿಲ್ಲ. ಬೆಳಿಗ್ಗೆ ರಗ್ಗು ಹೊದ್ದಿಕೊಂಡು ಮಲಗಿದವಳು ಇದುವರೆಗೂ ಎದ್ದಿಲ್ಲ. ಇವತ್ತು ನನ್ನದೇ ಅಡುಗೆ ಅಂತ ಕಾಣುತ್ತೆ.

ಯಾಕೆ, ಕಾಫಿ ತುಂಬಾ ಬಿಸಿ ಆಯಿತೆ?... ಆದರೆ, ದೇವರ ದಯೆಯಿಂದ, ನನಗೆ ಬರೋ ಪೇಷೆಂಟುಗಳು ನನ್ನ ಹೆಂಡತೀಗಿಂತ ಬುದ್ಧಿವಂತರು. ಹೇಳಿದ್ದನ್ನ ಅರ್ಥ ಮಾಡ್ಕೋತಾರೆ. ಹಾ, ನಾನು ಹೇಳ್ತಾ ಇದ್ದನಲ್ಲಾ ನೆಗಡಿ ಒಂದು ಭ್ರಮೆ! ಇದು ನಮ್ಮ ಮಿದುಳು ನಮ್ಮ ಮೇಲೆ ಆಡೋ ಆಟ ಅಷ್ಟೆ! ಮಿದುಳು ನಿಮಗೆ ಗೊತ್ತಿರೋ ಹಾಗೆ, ಮೂಗಿನ ಪಕ್ಕಾನೆ ಇದೆ. ಹಾಗಾಗಿ, ಅದು ಮೂಗಿನ ಜೊತೆ ಆಟಕ್ಕೆ ನಿಂತ್ಕೊಳ್ಳುತ್ತೆ. ಮೂಗೂನೂ ಆಟ ಆಡುತ್ತೆ. ಸಿಂಬಳ ಸುರಿಸಿ ಸಂತೋಷಕ್ಕೆ ಸೀನುತ್ತೆ. ಸ್ವಲ್ಪ ಹೊತ್ತಿಗೆ ಕಣ್ಣುಗಳೂ ಆಟಕ್ಕೆ ಸೇರುತ್ವೆ. ಸಂತೋಷಕ್ಕೆ, ಬುಳು ಬುಳು ಅಂತ ನೀರು ಸುರಿಸುತ್ವೆ. ಇಷ್ಟು ಹೊತ್ತಿಗೆ ಮೂಗಿನ ಓನರ್ ನನಗೆ ನೆಗಡಿ ಬಂತು ಅಂತ ಆಗಲೇ ಆಫೀಸ್‌ಗೆ ಕ್ಯಾಶುಯಲ್ ಲೀವ್ ಜಮಾಯಿಸಿರ್ತಾನೆ. ಅಡ್ವಾನ್ಸ್ ಆಗಿ ಮನೇಗೆ ಫೋನ್ ಮಾಡಿ, ಹಾಸಿಗೆ ರೆಡಿ ಮಾಡು, ಹಾಗೇ ಮೆಣಸಿನ ಸಾರೂನೂ ಮಾಡಿಟ್ಟಿರು. ಬರ್ತಾ ಇದೀನಿ ಅಂತ ಹೇಳ್ತಾನೆ. ಸಧ್ಯ ಆಂಬುಲೆನ್ಸ್‌ಗೆ ಫೋನ್ ಮಾಡಲ್ಲ.

ಕಾಫಿಗೆ ಸಕ್ಕರೆ ಸಾಕೆ? ನಾನು ಸ್ವಲ್ಪ ಕಮ್ಮೀನೇ ಹಾಕ್ಕೋಳೋದು... ಇರಲಿ... ಹಾಗಾದರೆ ಇಂತ ಭ್ರಮೆಗೆ ನಾನು ಎಂತಹ ಟ್ರೀಟ್ಮೆಂಟ್ ಕೊಡಬೇಕು ಅಂತ ಸುಮಾರಾಗೇ ಸಂಶೋಧನೆ ನಡೆಸಿದೆ. ಕೊನೇಗೆ, ನಾನು ಕಂಡ್ಕೊಂಡಿದ್ದು ಏನೆಂದರೆ ''ನೆಗಡಿ'' ಪೇಷೆಂಟ್ಗಳಿಗೆ ಎರಡು ರೀತಿಯ ಶುಶ್ರೂಷೆ ಮುಖ್ಯ. ಒಂದು ಸ್ಪಿರಿಚುಯಲ್-ಆಧ್ಯಾತ್ಮಿಕ, ಇನ್ನೊಂದು ಫಿಸಿಕಲ್-ಭೌತಿಕ. ಪೇಷೆಂಟು ಒಳಗೆ ಬಂದ ತಕ್ಷಣ ನಾನು ಮೊದಲು ಕೊಡೋದು ಟ್ಯಾಬ್ಲೆಟ್ಸು-ನಕಲಿಗಳು! ಬರೀ ಶುಂಠಿ ಪೆಪ್ಪರ್ಮೆಂಟ್ಗಳನ್ನ - ಬೆಳಿಗ್ಗೆ ಎರಡು, ಮಧ್ಯಾಹ್ನ ಊಟ ಆದಮೇಲೆ ಎರಡು, ರಾತ್ರಿಗೆ ಎರಡು ಅಂತ. ಇದರಿಂದ ಅವನಿಗೆ ನನ್ನಲ್ಲಿ ಸ್ವಲ್ಪ ನಂಬಿಕೆ ಬರುತ್ತೆ. ಕೊಡೋ ದುಡ್ಡಿಗೆ ಮಾತ್ರೇನಾದರೂ ಸಿಕ್ತಲ್ಲಾ ಅಂತ. ಆಮೇಲೆ ಅವರಿಗೆ ಹತ್ತು ನಿಮಿಷಗಳು ಆಧ್ಯಾತ್ಮಿಕ ಭಾಷಣ ಹೊಡೀತೀನಿ. ನೆಗಡಿ ಅನ್ನೋದು ದೇವರ ಸೃಷ್ಟಿ. ಅದಕ್ಕೆ ಮೂರು ಸ್ಥಿತಿಗಳಿವೆ. ಮೊದಲನೆಯ ಸ್ಥಿತಿ ನೆಗಡಿ ಬಂದ ಮೊದಲ ಮೂರು ದಿವಸಗಳು, ಎರಡನೆಯ ಸ್ಥಿತಿ ನಂತರದ ಮೂರು ದಿವಸಗಳು, ಮೂರನೆಯ ಸ್ಥಿತಿ ಕೊನೆಯ ಮೂರು ದಿವಸಗಳು. ಮಾನವರೆಲ್ಲರೂ ಜನ್ಮ ತಾಳಿದ ಮೇಲೆ ನೆಗಡಿಗೆ ಬಲಿಯಾಗಲೇಬೇಕು - ಇದು

ನೈಸರ್ಗಿಕ ನಿಯಮ. ಆದರೆ, ಸಂತೋಷದ ವಿಷಯವೆಂದರೆ, ಮೊದಲನೇ ಸ್ಥಿತಿಯಿಂದ ಮೂರನೇ ಸ್ಥಿತಿಯವರೆಗೆ ಒಬ್ಬ ಪಯಣಿಸುವಾಗ, ನೆಗಡಿಯ ತೀವ್ರತೆ ಕಮ್ಮಿಯಾಗುತ್ತಾ ಹೋಗುತ್ತೆ. ಹಾಗಾಗಿ, ನೆಗಡಿ ಆದರೆ ಆಯಿತು. ಇದು ಒಂದು ಕೇವಲ ದೂರದ ಪ್ರಯಾಣ, ಮುಂಗಡವಾಗಿ ಸೀಟ್ ಕಾದಿರಸದೇ ರಾತ್ರಿ ಟ್ರೈನ್‌ನಲ್ಲಿ ಹೋದಾಗ ಲೆಕ್ಕ. ಏನೇ ಆಗಲಿ, ಕೊನೇನಲ್ಲಿ ಯಥಾಸ್ಥಿತಿಗೆ ಬಂದೇ ಬರುತ್ತೀರ ಅಂತ ಮನದಟ್ಟು ಮಾಡ್ತೀನಿ.

ಕಾಫಿ ತುಂಬಾ ಸ್ಟ್ರಾಂಗ್ ಆಯಿತೆ?... ಇರಲಿ... ನಾನು ಪೇಷೆಂಟುಗಳಿಗೆ ಹೇಳೋದು ಇಷ್ಟೆ: ನೆಗಡಿಯನ್ನು ತಡೆಯುವುದಕ್ಕೆ ಆಗೋದಿಲ್ಲ. ಆದರೆ ಬಂದ ನೆಗಡಿ ಯಾವ ಸ್ಥಿತಿಯಲ್ಲಿದೆ ಅಂತ ತಿಳ್ಕೊಂಡು, ಅದನ್ನ ಸ್ವೀಕರಿಸೋದು ಉತ್ತಮ. ಅದು ಯಾವ ಸ್ಥಿತಿಯಲ್ಲಿದೆ ಅನ್ನೋಕ್ಕೆ ನಾನು ಒಂದು ಫಾರ್ಮುಲ ಕಂಡು ಹಿಡಿದಿದ್ದೀನಿ. ಅವರನ್ನ ''ನೆಗಡಿ ಬಂತು, ನೆಗಡಿ ಹೋಯ್ತು ಡುಂ, ಡುಂ, ಡುಂ'' ಅಂತ ಹೇಳೋಕ್ಕೆ ಹೇಳ್ತೀನಿ. ಮೊದಲನೇ ಸ್ಥಿತಿಯವರು ''ನೆಗದಿ ಬಂದು, ನೆಗದಿ ಹೋದು ದುಂ, ದುಂ, ದುಂ'' ಅಂತಾರೆ. ಎರಡನೇ ಸ್ಥಿತಿಯವರು ''ನೆಗದಿ ಬಂತು, ನೆಗಡಿ ಹೋಯ್ತು ದುಂ, ದುಂ, ದುಂ'' ಅಂತಾರೆ. ಮೂರನೇ ಸ್ಥಿತಿಯವರು ನಾನು ಹೇಳಿದ ಹಾಗೆ, ''ನೆಗಡಿ ಬಂತು, ನೆಗಡಿ ಹೋಯ್ತು ಡುಂ, ಡುಂ, ಡುಂ'' ಅಂತ ಹೇಳ್ತಾರೆ. ನೋಡಿ, ನೀವು ಇಂತಿಂಥಾ ಸ್ಥಿತಿನಲ್ಲಿದ್ದೀರಿ.

ಸಮಾಧಾನವಾಗಿರಿ. ನನ್ನ ಮಾತ್ರೆಗಳನ್ನ ತಪ್ಪದೇ ತಿನ್ನಿ. ನಾನು ಹೇಳಿದ ದಿನಕ್ಕೆ ನಿಮಗೆ ನೆಗಡಿ ವಾಸಿ ಆಗೋದು ಗ್ಯಾರಂಟಿ ಅಂತ ಆಶ್ವಾಸನೆ ಕೊಡ್ತೀನಿ. ಹಾಗೇ ಆಗುತ್ತೆ! ಇದು ನನ್ನ ಸಕ್ಸಸ್ ಫಾರ್ಮುಲಾ!!

ನಿಮ್ಮ ವಿವರಣೆಗೂ, ಕಾಫೀಗೂ ಬಹಳ ಧನ್ಯವಾದಗಳು ಡಾ. ನೆಗಡಿಮಠ್ ಅವರೆ, ಬರ್ತೀನಿ ಅಂತ ಎದ್ದೆ.

''ಇರಿ, ಗೇಟ್ ತನಕ ಬರ್ತೀನಿ'' ಅಂತ ಅವರೂ ಬಂದರು. ಅದೇ ಸಮಯಕ್ಕೆ, ಒಳಗಿನಿಂದ ''ನೆಗದಿ ಬಂದು, ನೆಗದಿ ಹೋದು ದುಂ, ದುಂ, ದುಂ'' ಅಂತ ಹೆಂಗಸಿನ ಧ್ವನಿ ಕೇಳಿಬಂತು. ನನ್ನ ಕುತೂಹಲಕರ ಮುಖ ನೋಡಿ, ಡಾಕ್ಟರ್ರು ''ನನ್ನ ಹೆಂಡ್ತಿ ಅದು. ಇನ್ನೂ ಮೊದಲನೇ ಸ್ಥಿತೀಲೇ ಇದಾಳೆ. ನಾನು ಆಗಲೇ ಹೇಳಲಿಲ್ಲವೇ? ಇವತ್ತು ನನ್ನದೇ ಅಡುಗೆ ಅಂತ ಕಾಣುತ್ತೆ. ನಾನು ಬರಲೇ?'' ಅಂತ ಒಳಗೆ ಹೋದರು.

**ದೈನಂದಿನ ಓದು**

**ಚಿಕ್ಕಂದಿನಲ್ಲಿ ಮಾಸ್ಟರು ಹೇಳಿದ್ದರು**
**ಏನನ್ನಾದರೂ ಓದು ಒಟ್ಟಿನಲ್ಲಿ ಓದು**
**ಯಾವುದಾದರೊಂದು ಪುಸ್ತಕ**
**ಈಗ ಅವನು ಓದುತ್ತಿದ್ದಾನೆ**
**ದಿನಂಪ್ರತಿ ರೇಸು ಪುಸ್ತಕ**

# ಸ್ಕೂಲಿನಲ್ಲಿ ಸೆಕ್ಯೂರಿಟಿ-ರಿಂಗ್

**- ರಮ್ಯ**

**ನ**ಮ್ಮ ಪುಟ್ಟೂನ ಸ್ಕೂಲಿಗೆ ಸೇರಿಸುವುದಕ್ಕೆ ಕರೆದುಕೊಂಡು ಹೋದ್ವಿ.

ಹೆಡ್ ಮಿಸ್ಟ್ರೆಸ್ ಸೀಟ್ನಲ್ಲಿ ಕೂತಿದ್ರು. ಅವರ ಎದುರುಗಡೆ ಸೀಟಿನಲ್ಲಿ ಒಬ್ಬರು ದಪ್ಪಕ್ಕಿರುವ ಆಸಾಮಿ, ಇನ್ನೊಬ್ಬರು ಸಣ್ಣಕ್ಕೆ ಕೋಲು ಮುಖದವರು - ಲಾರೆಲ್ ಮತ್ತು ಹಾರ್ಡಿಯ ಹಾಗಿದ್ದವರು - ಕೂತಿದ್ದರು. ಮೇಡಮ್ನ ಪಕ್ಕದಲ್ಲಿ ಯೂನಿಫಾರಂ ಹಾಕಿಕೊಂಡು ಅವರ ಬಾಡಿಗಾರ್ಡ್ ಕೂತಿದ್ದ.

'ಕೂತ್ಕೊಳ್ಳಿ. ಇವರಿಬ್ರು ಡೈರೆಕ್ಟರೇಟ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಆಫೀಸರ್ (ವಿಜಿಲೆಂಸ್) ಮತ್ತು ಪೋಲಿಸ್ ಸಬ್‌ಇನ್ಸ್‌ಪೆಕ್ಟರ್ (ಎಜುಕೇಷನ್ ವಿಂಗ್). ಅವರು... ನನ್ನ ಬಾಡಿಗಾರ್ಡ್.'

'ಥ್ಯಾಂಕ್ಸ್, ಮೇಡಮ್. ನಿಮಗೆಲ್ಲಾ ನಮಸ್ಕಾರ... ನನ್ನ ಮಗನಿಗೆ ನಿಮ್ಮ ಸ್ಕೂಲಿನಲ್ಲಿ ಸೀಟು ಸಿಕ್ಕಿದೇಂತ ಲೆಟರ್ ಬಂದಿದೆ.'

'ಕಂಗ್ರಾಜ್ಯುಲೇಷನ್ಸ್! ನಿಮ್ಮ ಮಗು ಮತ್ತು ಪೇರೆಂಟ್ಸ್ ಇಬ್ಬರೂ ಇಂಟರ್ವ್ಯೂನಲ್ಲಿ ಪಾಸಾಗಿದೀರಿ! ಲೆಟರ್ ಇಲ್ಲಿ ಕೊಡಿ. ಎಲ್ಲಾ ಸರಿಯಾಗಿದೆ. ನೀವು ದುಡ್ಡು ಕಟ್ಬೇಕು. ಡೀಟೇಲ್ಸ್ ಇದರಲ್ಲಿ ಇದೆ' ಅಂತ ಒಂದು ಫೋಲ್ಡರ್ ಕೊಟ್ಟರು.

ಅದನ್ನು ಎರಡು ಲೈನು ಓದಿದ ಕೂಡಲೇ ಛಳಿಲೂ ಹಣೆಯಲ್ಲಿ ಬೆವರಿನ ಮುತ್ತುಗಳು ಮೂಡಲು ಶುರುವಾಯಿತು.

'ಇಲ್ಲಿ ಮಗು + 3 ಅಂತ ಬರೆದು ಒಂದು ತಿಂಗಳಿಗೆ ಐವತ್ತು ಸಾವಿರ ಅಂತ ಬರೆದಿದೆ. ತಪ್ಪಾಗಿ ಒಂದು ಸೊನ್ನೆ ಜಾಸ್ತಿ ಬಿದ್ದಿದೆಯಾ? + 3 ಅಂದ್ರೇನು? ಇದು ಫೀಸಾ? ಅಥವಾ ಡೊನೇಷನ್ನಾ? ಅರ್ಥವಾಗಲಿಲ್ಲ ಮೇಡಂ.'

'ಸೊನ್ನೆ ಜಾಸ್ತಿ ಬಿದ್ದಿಲ್ಲ, ಎಲ್ಲಾ ಸರಿಯಾಗಿದೆ. ಅದು ಫೀಸೂ ಅಲ್ಲ, ಡೊನೇಷನ್ನೂ ಅಲ್ಲ..... ನಿಮ್ಮ ಮಗುವಿನ ಜೊತೆಯಲ್ಲಿರುವ ಗಾರ್ಡಿಯನ್ಸ್ ತಿಂಗಳಿಗೆ ಕೊಡಬೇಕಾದ ಚಾರ್ಜು.'

'ನಾವು ಪೇರೆಂಟ್ಸ್ ಇಲ್ಲೇ ಇರುವಾಗ ಗಾರ್ಡಿಯನ್ಸ್ ಯಾಕೆ ಮೇಡಮ್?'

'ನಿಮಗೆ ಅರ್ಥವಾಗಿಲ್ಲ, ಇದು ಸ್ಕೂಲಿನ ಒಳಗೆ ಇರುವ ಗಾರ್ಡಿಯನ್ಸ್ ಚಾರ್ಜು....'

'ಸ್ಕೂಲಿನಲ್ಲಿ ಗಾರ್ಡಿಯನ್ಸಾ? ಯಾಕೆ ಟೀಚರ್ಸ್ ಇದಾರಲ್ಲಾ ಮೇಡಮ್? ಸ್ವಲ್ಪ ವಿವರವಾಗಿ ಹೇಳ್ತೀರಾ?'

'ನಿಮ್ಮ ಮಗು ಸುಸು ಅಥವಾ ಮತ್ತೊಂದು ಮಾಡಬೇಕೆಂದಾಗ ಗಾರ್ಡಿಯನ್ ನಂಬರ್ 1 ಮಗು ಜೊತೆಗೆ ಹೋಗಿ ಮಾಡಿಸಿ ಕರೆದುಕೊಂಡು ಬರ್ತಾರೆ.'

'ಸ್ಕೂಲಿನಲ್ಲಿ ಆಯಾ ಇಲ್ವಾ?'

'ಆಯಾ ಇದಾಳೆ. ಅವ್ಳು ಜೊತೆಯಲ್ಲಿ ಬಂದು ಹೆಲ್ಪ್ ಮಾಡ್ತಾಳೆ ಅಷ್ಟೆ. ಟಾಯ್ಲೆಟ್ಟಿಗೆ ಕರೆದುಕೊಂಡು ಹೋಗಿ ಮಾಡಿಸಿ ಮಗುವನ್ನು ಸೇಫಾಗಿ ವಾಪಸ್ಸು ಕರೆದುಕೊಂಡು ಸೀಟಿಗೆ ಬಿಡುವುದು ಗಾರ್ಡಿಯನ್ 1 ಅವರ ಜವಾಬ್ದಾರಿ.' ಸೇಫ್ಟಿ ಈಸ್ ವೆರಿ ಇಮ್‌ಪಾರ್ಟೆಂಟ್ ಯು ಸೀ.

ಲಾರೆಲ್ ಅಂಡ್ ಹಾರ್ಡಿ ಸೇರಿ ದನಿ ಹೂಂ ಗೂಡಿಸಿದರು.

'ಓ ಐಸಿ. ಮತ್ತಿಬ್ಬರು?'

'ನಿಮಗೆ ಗೊತ್ತಿರೋ ಹಾಗೆ ನಮ್ಮ ಸ್ಕೂಲು ಇಂಟರ್ ನ್ಯಾಷನಲ್ ಸ್ಕೂಲು. ಎಕ್ಸ್‌ಟ್ರಾ ಕರಿಕ್ಯುಲರ್ ಆಕ್ಟಿವಿಟೀಸ್ ಬಹಳ ಇರುತ್ತೆ. ನಿಮ್ಮ ಮಗು ಸ್ವಿಮಿಂಗಿಗೆ ಹೋಗುವಾಗ, ಗಾರ್ಡಿಯನ್ ನಂಬರ್ 2 ನಿಮ್ಮ ಮಗುವಿಗೆ ಸ್ವಿಮಿಂಗ್‌ಟ್ರಂಕ್ ಹಾಕಿಸಿ, ತಾನೂ ಹಾಕಿಕೊಂಡು ಪೂಲಿಗೆ ಇಳಿಯುತ್ತಾನೆ/ಳೆ. ಮಗು ಸ್ವಿಮಿಂಗ್ ಪೂಲಿನಲ್ಲಿರುವ ತನಕ ಗಾರ್ಡಿಯನ್ನೂ ನೀರಿನಲ್ಲೇ ಇರುತ್ತಾರೆ.'

'ಸ್ವಿಮಿಂಗ್ ಇನ್ಸ್ ಟ್ರಕ್ಟರ್ ಇಲ್ವಾ?'

'ಮತ್ತೆ ನೀವು ಅದೇ ಕೇಳ್ತಾ ಇದೀರ? ಇದಾರೆ. ಇನ್ಸ್‌ಟ್ರಕ್ಟರ್ ಸ್ವಿಮಿಂಗ್ ಮಾತ್ರ ಕಲಿಸ್ತಾರೆ... ಗಾರ್ಡಿಯನ್ ಇನ್ಸ್‌ಟ್ರಕ್ಟರ್‌ನಿಂದ ಮಗೂಗೆ ಏನೂ ತೊಂದರೆ ಆಗದ ಹಾಗೆ ನೋಡ್ಕೊಳ್ತಾರೆ... ಐ ಹೋಪ್ ಯು ಅನ್ಡರ್ ಸ್ಟ್ಯಾಂಡ್ ವಾಟ್ ಐ ಮೀನ್?'

'ಗೊತ್ತಾಯ್ತು ಮೇಡಮ್. ವೆರಿ ಕ್ಲಿಯರ್ ನೌ........ ಮೂರನೇಯವರು?'

'ಮಗು ಜಿಮ್ಗೆ ಹೋಗುವಾಗ, ಜಿಮ್ ಡ್ರೆಸ್ ಹಾಕಿಸಿ, ಅವರೂ ಜಿಮ್ ಯೂನಿಫಾರಂ ಹಾಕಿಕೊಂಡು ಮಗುವನ್ನು ಕರೆದುಕೊಂಡು ಹೋಗ್ತಾರೆ. ಸ್ಕೂಲಿನಲ್ಲಿ ಜಿಮ್ ಇನ್ಸ್‌ಟ್ರಕ್ಟರ್ ಇಲ್ವಾಂತ ಕೇಳ್ಬೇಡಿ! ಇದಕ್ಕೆಲ್ಲಾ ಆಗುವ ತಿಂಗಳ ವೆಚ್ಚ ಐವತ್ತು ಸಾವಿರ. ಅವರ ಟಿ.ಎ., ಡಿ.ಎ., ಎಕ್ಸ್‌ಟ್ರಾ ಏಟ್ ಆಕ್ಚುಅಲ್ಸ್.'

'ಒಂದು ಸಣ್ಣ ಡೌಟು. ಕೇಳಬಹುದಾ?'

'ಖಂಡಿತ. ಕೇಳಿ.'

'ಗಾರ್ಡಿಯನ್‌ಗಳೇ ಅನ್‌ರಿಲೈಯಬಲ್ ಆದ್ರೆ ನಮ್ಮ ಗತಿಯೇನು?'

'ಗುಡ್ ಕೊಶ್ಚನ್! ಅದಕ್ಕೇ ಕಾರಿಡಾರ್, ಬಾತ್ ರೂಂ, ಜಿಮ್, ಸ್ವಿಮಿಂಗ್ ಪೂಲಿಗೆ ಸಿಸಿಟಿವಿ, ಕ್ಯಾಮರಾ ಹಾಕಿರುತ್ತೆ. ಡೀಟೈಲ್ಸ್ ಎಲ್ಲಾ ಫೋಲ್ಡರ್ನಲ್ಲಿ ಇದೆ.'

'ಸದ್ಯ!'

'ಹಾಗೂ ಸೆಂಟ್ರಲ್ ಕಂಟ್ರೋಲ್ ರೂಮಿನಿಂದ ಆಪರೇಟರ್ ಸ್ಕ್ಯಾನ್ ಮಾಡ್ತಾ ಇರ್ತಾರೆ. ನನ್ನ ರೂಮಿನಲ್ಲೂ ನನ್ನ ಲ್ಯಾಪ್ಟಾಪಿಗೆ ಪಿಕ್ಚರ್ಸ್ ಮತ್ತು ಇನ್ಫರ್ಮೇಷನ್ ಬೆಳಿಗ್ಗೆಯಿಂದ ಸ್ಕೂಲು ಮುಚ್ಚುವ ತನಕ ಆನ್‌ಲೈನ್ ಬರ್ತಾ ಇರುತ್ತೆ.'

ದಪ್ಪಕ್ಕಿರುವ ಆಸಾಮಿ ಈಗ ಬಾಯಿ ತೆಗೆದ.

'ನನ್ನ ಪೋಲಿಸ್ ಕಂಟ್ರೋಲ್ ರೂಮಿನಿಂದ ಮೂರೂ ಕಡೆ, ನನಗೆ ಒವರಾಲ್ ಪಿಕ್ಚರ್ಸ್ ಬರ್‍ತಿರುತ್ತೆ. ಹೆಡ್ ಮೇಡಮ್ ರೂಮಿನ ಸಿಚುಏಷನ್ನೂ ನನಗೆ ಬರ್‍ತಾ ಇರುತ್ತೆ.'

ಮೇಡಂಗೆ ಅದು ಇಷ್ಟವಾಗ್ಲಿಲ್ಲ. ಹುಬ್ಬು ಗಂಟಿಟ್ಟು ತೋರಿಸಿದರು ಅದನ್ನು.

ಕೋಲಿನ ಮುಖದವನು ಕೊನೆಗೆ ಬಾಯಿ ತೆಗೆದ.

'ನನಗೆ ಇದೆಲ್ಲವೂ ಲೈವ್ ಆಗಿ ಬರ್‍ತಾ ಇರುತ್ತೆ. ನಾನು ಡಿಪಿಐ ಆಫೀಸಿನಿಂದ ಇದೆಲ್ಲರ ಜೊತೆಗೆ ಪೋಲಿಸಿನವರ ಮೇಲೂ ಕಣ್ಣಿಟ್ಟಿರ್‍ತೀನಿ. ವಿ ವಾನ್ಟು ಮೇಕ್ ಶೂರ್ ನಥಿಂಗ್ ಗೋಸ್ ರಾಂಗ್.'

ಹೆಡ್ ಮೇಡಮ್ ನಗುತ್ತಾ 'ಡೋನ್ಟ್ ವರಿ. ಗಾರ್ಡಿಯನ್ 1 ಬಹಳ ಹೆಲ್ಪ್‌ಫುಲ್ ಆಗಿರ್‍ತಾರೆ. ಏಬೋಲ ರನ್, ಚಾಚ ನೆಹ್ರುಜಿ ರನ್, ಸರದರ್ ಪಟೇಲ್ ರನ್ ಇತ್ಯಾದೀಲಿ ಅವರೂ ನಿಮ್ಮ ಮಗನ ಜೊತೆ ಟೀ-ಶರ್ಟ್ ಹಾಕಿಕೊಂಡು ಪಕ್ಕದಲ್ಲೇ ಓಡುತ್ತಾರೆ. ನೀವು ಪ್ರತಿ ತಿಂಗಳು ಫೀಸು ಮತ್ತು ಚಾರ್ಜು ಕಟ್ಟಿ, ಮಿಕ್ಕಿದ್ದು ನಾವು ನೋಡ್ಕೊಳ್ತೀವಿ.'

'ಇನ್ನೊಂದು ಕೊಶ್ಚನ್. ಕೇಳ್ಬಹುದಾ?'

'ಕೊನೇದು ಕೇಳಿ. ಇನ್ನು ಬಹಳ ಜನ ಕಾಯ್ತಿದಾರೆ.'

'ಮಗೂಗೆ ಹೇಗೆ ಗೊತ್ತಾಗುತ್ತೆ ಗಾರ್ಡಿಯನ್ಸ್ ಕರೆಯಬೇಕೂಂತ?'

'ಅದರ ಸೀಟಿನ ಮುಂದೆ ಕಲರ್ ಬಟನ್ಸ್ ಇರುತ್ತೆ. ಯಾವುದನ್ನು ಒತ್ತಬೇಕೆಂದು ಹೇಳಿಕೊಡುವುದೇ ಮೊದಲ ಲೆಸನ್. ಆಯ ಆಗಾಗ್ಗೆ ಬಂದು ಮಕ್ಕಳ ಫೇಸ್ ಸ್ಟಡಿ ಮಾಡಿ ಹುಷಾರಿ ಮಾಡ್ತಾಳೆ. ಇದರಲ್ಲಿ ಅವಳು ಎಕ್ಸಪರ್ಟ್, ಆನ್-ಲೈನ್ ಕೋರ್ಸ್ ಮಾಡಿದಾಳೆ. ಮಕ್ಕಳ ಸ್ಮಾರ್ಟ್ ಫೋನ್ನಲ್ಲೂ ಗಾರ್ಡಿಯನ್ರ ನಂಬರ್ ಲೋಡ್ ಮಾಡ್ತೀವಿ. ಒನ್-ಟಚ್‌ನಿಂದ ಗಾರ್ಡಿಯನ್ಸ್ ಕರೀಬಹುದು. ಇದೆಲ್ಲಾ ಫೂಲ್-ಪ್ರೂಫ್ ಮೆಥಡ್ಸು. ಡೋನ್ಟ್ ವರಿ.'

★★★

ನನ್ನ ಜೊತೆ ನನ್ನ ತಮ್ಮ ಬಂದಿದ್ದ.

ಅವನು ಕಾಶ್ಮೀರದಲ್ಲಿ ಬಾರ್ಡರ್ ಸೆಕ್ಯೂರಿಟಿಲಿ ಆಫೀಸರ್‍ರಾಗಿ ಕೆಲಸ ಮಾಡ್ತಾನೆ. ನಾವು ಹೊರಗೆ ಬಂದಾಗ ಅವನಂದ. 'ಈ ತರಹ ಸೆಕ್ಯೂರಿಟಿ ಸರ್ವಿಸ್ ನಮ್ಮ ಆರ್ಮಿಗೆ ಕೊಟ್ಟಿದ್ರೆ ನಾವು ಟೆರರಿಸ್ಟ್‌ಗಳನ್ನು ಯಾವಾಗ್ಲೋ ಓಡಿಸ್ತಿದ್ವಿ!'

❋

Advertisement

# Advertisement

**- ದಂನಅ**

- ಲಕ್ಷಾಂತರ ಮಂದಿ ಒಟ್ಟಿಗೆ ಏಕಾಂಗಿಯಾಗಿರುವುದೇ ನಗರ ಜೀವನ.
- ಶ್ರೇಷ್ಠ ಕೆಲಸ ಮಾಡುವ ಏಕೈಕ ದಾರಿ ಎಂದರೆ ಈಗಿರುವ ಕೆಲಸವನ್ನು ಪ್ರೀತಿಯಿಂದ ಮಾಡುವುದು.
- ನಿಮ್ಮ ಅತ್ಯುತ್ತಮ ಸ್ನೇಹಿತ ನೀವೇ; ನಿಮಗಿಂತ ನಿಮ್ಮನ್ನು ಯಾರು ಬಲ್ಲರು?
- *Neighbour's envy is what leads to owner's pride.*
- ಒಳ್ಳೆಯ ಮನುಷ್ಯ ಹೇಗಿರಬೇಕು ಎಂಬುದರ ಬಗ್ಗೆ ವಾದ ಮಾಡಿ ಸಮಯ ಹಾಳು ಮಾಡಬೇಡ. ನೀನೇ ಒಳ್ಳೆಯವನಾಗು.
- ಸೋಲು ಎಂದರೆ ಗೆಲ್ಲುವುದು ಹೇಗೆ ಎಂದು ಕಲಿಯುವುದಷ್ಟೇ ಹೊರತು ಬೇರೇನೂ ಅಲ್ಲ.
- *Never say dye....*
- 20ನೇ ವಯಸ್ಸಿನಲ್ಲಿ ಬೇರೆಯವರು ನಮ್ಮ ಬಗ್ಗೆ ಏನು ಯೋಚಿಸುತ್ತಾರೆ ಎಂಬುದರ ಬಗ್ಗೆ ಕಾಳಜಿ; 40 ಆದಾಗ ಬೇರೆಯವರು ನಮ್ಮ ಬಗ್ಗೆ ಏನು ಯೋಚಿಸುತ್ತಾರೆ ಎಂಬುದರ ಬಗ್ಗೆ ನಿರ್ಲಕ್ಷ್ಯ; 60 ಮುಟ್ಟಿದಾಗ ನಮ್ಮ ಬಗ್ಗೆ ಬೇರೆಯವರು ಏನೂ ಯೋಚಿಸುತ್ತಲೇ ಇಲ್ಲದಿರಬಹುದು, ಎಂಬುದರ ಅರಿವು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- *Think beyond the gift wrapped box.*
- ಸಾವಿಗಾಗಿ ನಾನು ಕಾಯುತ್ತಿಲ್ಲ. ಅದೇ ನನಗಾಗಿ ಕಾಯುತ್ತಿದೆ.
- ಗಡಿಬಿಡಿಯಿಂದ ಇರಲು ಏನಾದರೂ ಮಾಡುತ್ತಲೇ ಇರಬೇಕು. ಶಾಂತಿಯಿಂದ ಇರಬೇಕಾದರೆ ಮಾಡಬೇಕಾದರೂ ಏನಿದೆ?
- *Don't marry for money; divorce for money.*
- ಬದುಕಿನ ಸವಾಲುಗಳನ್ನು ಎದುರಿಸುವ ಕೌಶಲವನ್ನು ಹಿರಿಯರಿಂದ ಕಿರಿಯರಿಗೆ ಹೇಗೆ ದಾಟಿಸಬಹುದು?
- ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಭಾರತೀಯರು ನಿಸ್ಸೀಮರು; ಆದರೆ ಸಮಸ್ಯೆಗಳನ್ನು ಗುರುತಿಸುವಲ್ಲಿ ಅವರು ಬಹಳ ಹಿಂದೆ.
- ದಾನ ಮಾಡಲು ನಮ್ಮಲ್ಲಿ ಹಣ ಇಲ್ಲದಿರಬಹುದು ಆದರೆ ಸಾಂತ್ವನ ಹೇಳಲು, ಹುರಿದುಂಬಿಸಲು ಬಾಯಿ ಇದೆ ಅಲ್ಲವೆ?
- ಕರೆನ್ಸಿ ನೋಟು ಕಾಗದ ನಿಜ ಆದರೆ ಅದನ್ನು ಎಂದಾದರೂ ಕಸದ ಬುಟ್ಟಿಯಲ್ಲಿ ನೋಡಿದ್ದೀರಾ?

❋

# ಮರೆವೋ, ವರವೋ

**- ಎಚ್.ಆರ್. ಹನುಮಂತ ರಾವ್**

**ಕಾ**ಲೇಜಿನ ವಾತಾವರಣ, ವಿದ್ಯಾರ್ಥಿಗಳದೇ ಒಂದು ಪ್ರಪಂಚವಾದರೆ, ಉಪನ್ಯಾಸಕರುಗಳದೇ ಒಂದು ಲೋಕ. ಪಿರಿಯಡ್ಡುಗಳ ಮಧ್ಯೆ ವಿಶ್ರಮಿಸಲು ಮತ್ತು ಮುಂದಿನ ಪ್ರವಚನಗಳಿಗೆ ಸಿದ್ಧವಾಗಲು ಉಪನ್ಯಾಸಕರುಗಳಿಗೆ ಮೀಸಲಾದ ಕಾಮನ್ ಕೊಠಡಿಯಲ್ಲಿ (ಸ್ಟಾಫ್ ರೂಂ) ಅಪರೂಪಕ್ಕೊಮ್ಮೊಮ್ಮೆ ಎಲ್ಲರೂ ಒಟ್ಟಿಗೇ ಸೇರುವುದುಂಟು. ಅಂತಹ ಸಮಯಗಳಲ್ಲಿ ಆಗಾಗ್ಗೆ ಕಾಲೇಜಿನ ಆಗು ಹೋಗುಗಳು, ಬಿಸಿಬಿಸಿಯಾದ ಇಲ್ಲವೇ ಪಾಂಡಿತ್ಯ ಪೂರ್ಣ ಸಂವಾದಗಳು, ವಿಷಯ ಪ್ರತಿಪಾದನೆಗಳ ಮಂಡನೆ, ಖಂಡನೆ ಹಾಗೂ ಪರಸ್ಪರ ಕಿಚಾಯಿಸಲೆಂದೇ ತಯಾರಾಗುವ ತರ್ಕ, ವಿತರ್ಕ, ಕುತರ್ಕಗಳು ಮನರಂಜನೆಗೆ ಸಿಕ್ಕುವ ಸಾಕಷ್ಟು ಸಾಮಗ್ರಿಗಳು.

ಇಂತಹ ಹರಟೆಗಳ ಮಧ್ಯೆ ಒಂದು ಬಾರಿ, ನಮ್ಮ ಮಾತು ಎಲ್ಲೆಲ್ಲಿಯೋ ಸುತ್ತಿ 'ಮರೆಗುಳಿ'ಗಳ ಬಗೆಗೆ ಹೊರಳಿ, ಸುದೀರ್ಘವಾಗಿಯೇ ಚರ್ಚೆ ನಡೆದುಹೋಯಿತು. ಎಲ್ಲ ಪ್ರೊಫೆಸರುಗಳನ್ನು ಮರೆಗುಳಿಗಳೆಂದು ಸಾಮಾನ್ಯರು ಭಾವಿಸಿರುವುದುಂಟು. ನಮ್ಮ ವಿ.ಟೀ.ಡೀ. (ಭೌತಶಾಸ್ತ್ರ ಉಪನ್ಯಾಸಕರು) ಪ್ರಕಾರ ಅದು ಖಂಡಿತ ಸರಿಯಲ್ಲ, ವಿದ್ಯೆಗೆ ಬೆಲೆಕೊಡುವವರು ಅವರ ಜ್ಞಾನ ವೃದ್ಧಿಗಾಗಿ, ಹಾಗೂ ತಮ್ಮ ಲೇಖನ, ಉಪನ್ಯಾಸ, ವಿಮರ್ಶೆಯ ಪ್ರತಿಪಾದನೆಗಳಲ್ಲಿ ನಿಖರತೆ ಹಾಗೂ ಸ್ಪಷ್ಟತೆಗಾಗಿ ಪುಸ್ತಕಗಳ ಮಧ್ಯೆಯೋ, ಆಳವಾದ ಅಧ್ಯಯನದಲ್ಲಿ ನಿರತರಾಗಿಯೋ, ದೀರ್ಘ ಆಲೋಚನೆಗಳಲ್ಲೋ ತಲ್ಲೀನರಾಗಿ ಬಿಡುವುದುಂಟು. ಅಮುಖ್ಯತೆಯ ಆಧಾರದ ಮೇಲೆ ಇತರ ವಿಷಯಗಳು ಗೌಣವಾಗಿ ಕಂಡವರಿಗೆ ಉದಾಸೀನರಾಗಿಯೋ, ಮರೆಗುಳಿಗಳಾಗಿಯೋ ತೋರಬಹುದೆಂದು ವಾದಿಸಿದರು. ಈ ತರ್ಕಕ್ಕೆ ಆತನೂ ಕಾರಣವಾಗಿದ್ದು, ವಿದ್ಯಾರ್ಥಿಗಳಲ್ಲಿ ಅವರ ಬಗ್ಗೆ 'ಮರೆಗುಳಿ' ಬಿರುದು ಹರಡಿದ್ದುದು ಗುಟ್ಟೇನು ಆಗಿರಲಿಲ್ಲ! ಈ ಮಾತಿಗೆ ಸೊಪ್ಪು ಹಾಕದ ಮತ್ತೊಬ್ಬರು (ಕೆ.ಎನ್.ಆರ್. ಗಣಿತ) ತಮ್ಮದೇ ಮಾತಿನಲ್ಲಿ ಖಂಡ ತುಂಡವಾಗಿ ವಿರೋಧಿಸಿದರು. ಮರೆವಿಗೂ ಜ್ಞಾನಾರ್ಜನೆಗೂ ಎಲ್ಲಿಂದೆಲ್ಲಿಯ ಸಂಬಂಧ? ಹಾಗಿದ್ದಲ್ಲಿ, ತಮ್ಮ ವಿಷಯ ಪ್ರತಿಪಾದನೆ ಮಂಡಿಸುವಾಗಲೂ ಮರೆವು ಸಹಜವಾಗಿ ಕೈಕೊಡುವುದಿಲ್ಲವೆ? ಈ ಪರ, ವಿರೋಧೀ ತರ್ಕಕ್ಕೆ ಮತ್ತಷ್ಟು ಉರಿ ಹಾಕಿದವರು ನನ್ನ ಆತ್ಮೀಯ ಗೆಳೆಯರಾದ ಟಿ.ಎಸ್.ಕೆ. (ಸಂಸ್ಕೃತ ವಿದ್ವಾಂಸ). ಅವರ ಅಭಿಪ್ರಾಯದಲ್ಲಿ ವಿಜ್ಞಾನ ಬೋಧಿಸುವವರಲ್ಲಿ ಶೇಕಡ ಅರವತ್ತು ಮಂದಿಯಾದರೂ ವಿವಿಧ ಹಂತದ ಮರೆಗುಳಿಗಳೆಂದು ಸಾರಾ ಸಗಟಾಗಿ ತೀರ್ಮಾನವನ್ನೆ 'ಸುಗ್ರೀವಾಜ್ಞೆ'ಯ ತರಹ ತೇಲಿಬಿಟ್ಟರು! ಮತ್ತೊಬ್ಬರು ಇವರನ್ನೇ ಕೇಂದ್ರವಾಗಿಟ್ಟುಕೊಂಡು, ಭಾಷಾ ಪಂಡಿತರುಗಳು ಯಾರಿಗೂ ಸಲ್ಲದ ಭಾವ ಪ್ರಪಂಚದಲ್ಲಿ ತಲ್ಲೀನರಾಗಿ ಅರೆ ಹುಚ್ಚರಾಗಿಯೂ ವರ್ತಿಸುವುದುಂಟೆಂದು ಕಾಲೆಳೆದರು. ಅವರ ಅಭಿಪ್ರಾಯದಲ್ಲಿ 'ಕವಿಗಳು ಸಂಪೂರ್ಣವಾಗಿ, ಪಂಡಿತರು ಅರೆ ಹುಚ್ಚಿನ 'ಅಂಚಿ'ನಲ್ಲಿರುವವರು. ಇಲ್ಲಿಂದಾಚೆಗೆ ಎಲ್ಲರೂ ಒಟ್ಟಿಗೇ ಏರಿದ ಧ್ವನಿಯಲ್ಲಿ ಪರ, ವಿರೋಧ

ಮಾತಾಡಲು ನಡೆದ ಕೋಲಾಹಲದ, ಅಬ್ಬರ ಮಾತು ಇನ್ನೊಬ್ಬರಿಗೆ ತಾಕಲಾರದಷ್ಟು ತಾರಕಕ್ಕೇರಿ, ತಮಾಷೆಗಾಗಿ ಪರಸ್ಪರ ಕಾಲೆಳೆಯಲು ಹೋಗಿ, ವಿಕೋಪಕ್ಕೆ ತಿರುಗಿ, ಇಡೀ ಕೊಠಡಿಯಿಂದ ಮೇಲಿನ ಮಹಡಿಯಲ್ಲಿದ್ದ ಪ್ರಿನ್ಸಿಪಾಲರ ಕಿವಿಗೂ ಮುಟ್ಟಿತು. ಅವರಿಂದ ಅಟೆಂಡರ್ ಅಂತೋಣಿ ತಂದು ಕೊಟ್ಟ 'ಮೆಮೋ' ಕೂಡ ಯಾರ ಗಮನಕ್ಕೂ ಬಂದಿರಲಿಲ್ಲ. ಈ ವೇಳೆಗೆ ಮಧ್ಯಾಹ್ನದ ಕೊನೆಯ ಘಂಟೆಯಾಗುತ್ತಿದ್ದಂತೆ, ಒಬ್ಬೊಬ್ಬರೂ ತಮ್ಮ ತಮ್ಮ ಪರಿಕರಗಳನ್ನು ಹೊತ್ತು ಹಾಲಾಹಲದ ಮಧ್ಯೆಯೇ ಮಾತಿನ ದಾಂಧಲೆ - ಎಂದು ವರ್ಣಿಸುವುದು ಈ ''ಜ್ಞಾನದಾ(ನಿ)ಹಿ'' ಗಳಿಗೆ ಅಪಚಾರವಾದೀತು! - ಹೊರಡಲನುವಾದರು.

ಮಾರನೆಯ ದಿನ ರವಿವಾರವಾಗಿದ್ದು ಮತ್ತೆ ಎಲ್ಲರೂ ಸೋಮವಾರ ಹತ್ತು ಗಂಟೆಗೆ ಸರಿಯಾಗಿ ಕಾಲೇಜು ಒಳಹೊಕ್ಕುತ್ತಲೆ, ಪ್ರಿನ್ಸಿಪಾಲರನ್ನು ಅವರ ಕೊಠಡಿಯಲ್ಲಿ ಕಾಣಲು ಆದೇಶ ಬಂತು. ಇದೀಗ ನಮ್ಮ ಪ್ರಾಧ್ಯಾಪಕರುಗಳು ಹಿಂದೆ ಮಾಡಿದ ತಪ್ಪಿನ ಅರಿವಾಗಿ ಗಿಲ್ಲಿಟೋನಿಗೆ ತಲೆಕೊಡುವ ಸಮಯ ನೆನೆಸಿಕೊಂಡು, ಅಳುಕುತ್ತಲೇ ಸಾಮೂಹಿಕವಾಗಿ ಅವರ ಕೊಠಡಿಯನ್ನು ಹೊಕ್ಕರು. ಎಲ್ಲರೂ ಸೇರಿದ ನಂತರ ಪ್ರಿನ್ಸಿಪಾಲರು ನಮ್ಮ ಕಡೆ ನೋಡಿ ದೇಶಾವರಿ ನಗೆ ನಕ್ಕು ಹೇಳಿದರು - ''ಇದೀಗ ಹೇಳಿ, ನೀವೆಲ್ಲ ಯಾವ ನಿರ್ಧಾರಕ್ಕೆ ಬಂದಿರಿ ಮೊನ್ನೆಯ ಚರ್ಚೆ ಕೊನೆ ಮುಟ್ಟಿದ್ದರೆ?'' - ಎಲ್ಲರೂ ಒಂದು ಕ್ಷಣ ಸ್ತಂಬೀಭೂತರಾದರು. ಶಾಲೆಯ ಹುಡುಗ ತನ್ನ ತಪ್ಪಿನಿಂದಾಗಿ ಮೇಷ್ಟರ ಕೋಲಿನ ರುಚಿಗಾಗಿ ಸರದಿಯಲ್ಲಿ ಕಾಯುತ್ತಿದ್ದಂತೆ, ಅವರ ಬಿಸಿ ಅಪ್ಪುಗೆಯಿಂದ ಆ ಬಾಲಕನ ಮೇಲೆ ಯಾವ ಪರಿಣಾಮವಾಗುತ್ತಿತ್ತೋ, ಆ ಅನುಭವ ನಮಗೂ ಆಗಿದ್ದರಲ್ಲಿ ಅತಿಶಯವೇನು? ಈ ಮಾತು ಅರಗಿಸಿಕೊಳ್ಳಲು ಕೆಲವು ಕ್ಷಣಗಳೇ ಹಿಡಿಯಿತಾದರೂ, ಒಬ್ಬೊಬ್ಬರೂ ಛಳಿ ಬಿಟ್ಟು, ಕ್ಷಮಾಪಣೆ ಕೇಳಿಕೊಳ್ಳಲು ಮುಂದಾದರು. ನಮ್ಮ ಮಾತನ್ನು ಅಲ್ಲಿಗೇ ತಡೆ ಹಿಡಿದು, ಅವರು ಮುಂದುವರೆಸಿದರು,'' ನೀವು ಅಧ್ಯಾಪಕರುಗಳು ಕ್ಷಮೆ ಕೇಳುವುದು ಸರ್ವಥಾ ಸರಿಯಲ್ಲ, ಅಲ್ಲಿಗೇ ಬಿಡಿ, ಆದರೆ ಮರೆವೆಯೆನ್ನುವುದೂ ಒಂದು ಮನೋದೈಹಿಕ ಚಟುವಟಿಕೆ. ನಮ್ಮ ದಿನನಿತ್ಯದ ಆಗುಹೋಗುಗಳೆಲ್ಲವನ್ನೂ ಜ್ಞಾಪಕವಿಟ್ಟುಕೊಳ್ಳುವುದು ಮೂರ್ಖತನವಲ್ಲದೇ ಮತ್ತೇನು? ನಮ್ಮ ದೇಹ ಅನಾವಶ್ಯಕವಾದದ್ದನ್ನು ಹೇಗೆ ಹೊರಹಾಕುವುದೋ ಹಾಗೆಯೇ ಮನಸ್ಸು ಬೇಡವಾದದ್ದನ್ನು ತಿರಸ್ಕರಿಸುತ್ತದೆ. ಆದರೆ, ನಮ್ಮ ಕಂಪ್ಯೂಟರಿನಲ್ಲಿಯಂತೆ ಅನೇಕ ವರ್ಷಗಳ ಹಿಂದೆ ನಡೆದಿದ್ದ ಯಾವುದೋ ಸಂಗತಿಯನ್ನೂ ನೀವು ಎಷ್ಟು ಯೋಚಿಸಿದರೂ ನೆನಪಿಗೆ ಬರದಿದ್ದರೂ, ಮತ್ಯಾವುದೋ ಗಳಿಗೆಯಲ್ಲಿ ನಿಮ್ಮ ಬಾಯಿಂದ ಹೊರಬೀಳುವುದಿಲ್ಲವೇ? ನಾವು ನೆನಪಿನಲ್ಲಿ ಉಳಿಸಿಕೊಳ್ಳಲೇಬೇಕಾದ ಮತ್ತು ಸಮಯಕ್ಕೆ ಸರಿಯಾಗಿ ಹೊರಗೆಡವಲೇಬೇಕಾದಂತಹ ವಿಷಯಗಳನ್ನು ಶೇಖರಿಸಿ, ನೆನಪಿನಲ್ಲಿಟ್ಟುಕೊಳ್ಳುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕಷ್ಟೆ. ಅದರ ಬಗ್ಗೆ ಕಾಳಜಿ ವಹಿಸಿದರೆ ಎಲ್ಲವೂ ಸುಸೂತ್ರ, ಇಲ್ಲವೇ ಅಪಮಾನ ಹಾಗೂ ಅಪನಿಂದೆಗೆ ಗುರಿಯಾಗುತ್ತೇವೆ. ವಯಸ್ಸಾಗುತ್ತಾ ಬಂದಂತೆ ಅಂಗಾಂಗಗಳು ನಶಿಸಿ, ಕಾರ್ಯಕ್ಷಮತೆ ಕಮ್ಮಿಯಾಗಿ, ಜ್ಞಾಪಕ ಶಕ್ತಿಯೂ ಕ್ಷೀಣಿಸಬಹುದಷ್ಟೆ. ನಿಮ್ಮ ಕೆಲವು ಮಿತ್ರರ ಪ್ರಕಾರ, ಪ್ರೊಫೆಸರ್ ಆಗಿರುವುದರಿಂದ ನಾನೂ ಒಬ್ಬ 'ಮರೆಗುಳಿ'ಯೆ. ಇದೀಗ ಹೇಳಿ, ಇಲ್ಲಿ ವಯಸ್ಸಾದವರು ಎಷ್ಟು ಮಂದಿ, ಅದೂ

ನನಗಿಂತ? ನಿಮ್ಮಲ್ಲಿ ನಲವತ್ತರ ಆಜುಬಾಜುನಲ್ಲಿರುವವರೇ ಹೆಚ್ಚು. ಮೊನ್ನೆ ನಿಮ್ಮ ಮಾತಿನ ಗೊಂದಲದ ನಡುವೆ ನಾನು ಕಳಿಸಿದ್ದ 'ಮೆಮೊ' ಎಷ್ಟು ಜನ ಬಲ್ಲಿರಿ ಹಾಗೂ ಯಾರು ಅದನ್ನು ಓದಿದ್ದೀರಿ?'' ಮತ್ತೆ, ಎಲ್ಲರೂ ಸ್ತಬ್ಧ. ಅಟೆಂಡರ್ ಅಂತೋಣಿ ಬಂದು 'ಮೆಮೊ' ಕೊಟ್ಟು ಎತ್ತರದ ಧ್ವನಿಯಲ್ಲಿ ಎಚ್ಚರಿಸಿ ಹೋದರೂ, ಯಾರು ಅದಕ್ಕೆ ನಿಗಾ ಕೊಟ್ಟಿರಲಿಲ್ಲ. ''ಅಂದಮೇಲೆ ನಿಮಗೆಲ್ಲ ಜ್ಞಾಪಕ ಕಮ್ಮಿ, ಮರೆವು ಜಾಸ್ತಿಯಾಗಿದೆ ಎಂದು ಭಾವಿಸಲೇ? ಇಲ್ಲವೆ ಅಗೌರವ ತೋರಿಸಿದಿರಿ ಎಂದು ಆಕ್ಷೇಪಿಸಲೆ? ನಾರಾಯಣರಾವ್, ಆ 'ಮೆಮೊ'ದಲ್ಲೇನಿದೆಯೋ ಜೋರಾಗಿ ಎಲ್ಲರಿಗೂ ಓದಿ ಹೇಳಿ''.

ಆ ಪತ್ರದ ಸಾರಾಂಶವಿಷ್ಟು – 'ವಿದ್ಯಾರ್ಥಿಗಳಿಗೆ ತಮ್ಮ ಜವಾಬ್ದಾರಿಯನ್ನು ಅರಿಯುವಂತೆ ಮಾಡಿ, ಮಾರ್ಗದರ್ಶಕರಾಗಿಯೂ, ಉತ್ತಮ ಪ್ರಜೆಗಳಾಗಿ ರೂಪಿಸುವುದೂ ಪ್ರಾಧ್ಯಾಪಕರುಗಳ ಕರ್ತವ್ಯವೆನ್ನುವುದು ಎಲ್ಲರೂ ಒಪ್ಪುವುದಾದರೆ, ಕ್ಷುಲ್ಲಕ ಕಾರಣಗಳಿಗಾಗಿ ಇಡೀ ಕಾಲೇಜಿನ ಸೂರು ಕಿತ್ತು ಹೋಗುವ ಹಾಗೆ ಕೂಗಾಡಿದ ಮಾತ್ರಕ್ಕೆ ಚರ್ಚೆಯಿಂದ ಗುರಿ ಮುಟ್ಟಲಾಗುವುದೆ? ಹಾಗಿಲ್ಲವಾದಲ್ಲಿ ಕೂಡಲೇ ಜವಾಬ್ದಾರಿಯನ್ನು ಅರಿತು ಶಿಸ್ತನ್ನು ಈ ಕ್ಷಣದಿಂದಲೇ ರೂಢಿಸಿಕೊಳ್ಳುವುದು ಜರೂರು ಅತ್ಯವಶ್ಯಕ. ತಪ್ಪಿದ್ದಲ್ಲಿ ಕಾಲೇಜಿನ ನಿಯಮಾನುಸಾರ ಮುಂದಿನ ಕ್ರಮ ಜಾರಿ ಮಾಡಲಾಗುವುದು – ಎಲ್ಲರೂ ಮುಂದಿನ ಕೆಲಸಗಳಿಗೆ ಹೊರಡಬಹುದು.'

ಮರೆವು ಅನೇಕ ವೇಳೆ ಅನುಕೂಲಕ್ಕೆ ಬರುವುದೂ ಇದೆ. ನಮ್ಮ ಕಾಲೇಜಿನಲ್ಲಿ ಡೆಮಾನ್ಸ್ಟ್ರೇಟರ್ ಹುದ್ದೆ ಖಾಲಿ ಇದ್ದು ಅದಕ್ಕೆ ತುಂಬಲು ಜಾಹಿರಾತು ಮಾಡಿದ್ದರು. ನಮ್ಮ ಬಂಧುವೊಬ್ಬರು ಅದನ್ನ ಕಂಡು ತನ್ನ ಮಗನಿಗೆ ಕೊಡಿಸುವಂತೆ ನನಗೆ ಗಂಟು ಬಿದ್ದರು. ಪ್ರಿನ್ಸಿಪಾಲರು ಯಾರ ಮಾತಿಗೂ ಸೊಪ್ಪು ಹಾಕುವವರಲ್ಲವೆಂದು ಎಷ್ಟು ಹೇಳಿದರೂ ಅವರ ಹಠ ಬಿಡಲಿಲ್ಲ. ಹಾಗಾಗಿ 'ಸರಿ, ಆ ಹುಡುಗನನ್ನ ನನ್ನ ಬಳಿ ಕಳುಹಿಸಿ, ವಿವರವಾಗಿ ಅವನ ಬಗ್ಗೆ ತಿಳಿದು ಪ್ರಯತ್ನಿಸುವೆ' ಎಂದು ಹೇಳಿ ಸಾಗಹಾಕಿದೆ. ನಂತರ ನನಗೆ ತಿಳಿದಿದ್ದೇನೆಂದರೆ ಆ ಹುಡುಗ ಆ ಹುದ್ದೆಗೆ ಯಾವ ರೀತಿಯಲ್ಲೂ ಅರ್ಹನಾಗಿರಲಿಲ್ಲ. ಹೀಗಿದ್ದು ಶಿಫಾರಸ್ಸು ಮಾಡಲು ಹೋಗಿ ಪ್ರಿನ್ಸಿಪಾಲರಿಂದ ತಿರಸ್ಕಾರಕ್ಕೆ ನಾನು ಗುರಿಯಾಗುವುದು ಸುತಾರಾಂ ಇಷ್ಟವಾಗಲಿಲ್ಲ. ಆಯ್ಕೆ ಸಮಿತಿಗೆ ನನ್ನನ್ನು ಕರೆದಿದ್ದರೂ, ಯಾವುದೋ ಕಾರಣ ಹೇಳಿ ತಪ್ಪಿಸಿಕೊಂಡೆ. ಇಂಟರ್‌ವ್ಯೂ ವೇಳೆ ಆ ಹುಡುಗನ ಅಜ್ಞಾನಕ್ಕೆ ಪ್ರಿನ್ಸಿಪಾಲರು ಬಯ್ಯದಿದ್ದರೆ ಅದಷ್ಟೆ ಅವನ ಅದೃಷ್ಟ. ನಂತರ ಹಲವು ದಿನಗಳ ಮೇಲೆ ಆ ಬಂಧುವಿಗೆ ಸಮಜಾಯಿಷಿ ಹೇಳಬೇಕಾದಾಗ, ನಾನು ಆ ದಿನ ಬೇರೆ ಅತಿ ಮುಖ್ಯ ಕೆಲಸದ ಮೇಲೆ ಕಾಲೇಜು ಬಿಟ್ಟು ಹೊರಹೋಗಬೇಕಾಗಿ ಬಂದು, ಪ್ರಿನ್ಸಿಪಾಲರಿಗೆ ಜ್ಞಾಪಿಸುವುದನ್ನು ಮರೆತೇ ಬಿಟ್ಟೆ, ಕ್ಷಮಿಸಿ, ಎಂದು ಹೇಳಿ ಕೈ ತೊಳೆದುಕೊಂಡಿದ್ದುಂಟು. ನಿಜವನ್ನು ಮರೆಮಾಚಲು 'ಮರೆವನ್ನು' ಆಶ್ರಯಿಸಿ ಅಸತ್ಯವನ್ನು ಹೇಳಬೇಕಾದದ್ದು ಎಂತಹ ವಿಪರ್ಯಾಸ!


ಮರೆವು ಪುರಾಣ, ಪುಣ್ಯ ಕಥೆಗಳನ್ನೂ ಬಿಟ್ಟಿಲ್ಲ. ದುಷ್ಯಂತ ಮರೆವಿನಿಂದಾಗಿ – ಅದು ಯಾವ ಶಾಪವೇ ಆಗಿರಲಿ – ಶಕುಂತಲೆಗೆ ಕೈ ಕೊಟ್ಟದ್ದು ಕಾಳಿದಾಸನ ಮಹಾ ಕಾವ್ಯ 'ಅಭಿಜ್ಞಾನ ಶಾಕುಂತಲ'ಕ್ಕೆ ಕಾರಣವಾಯಿತಷ್ಟೆ. ಇಲ್ಲವಾದಲ್ಲಿ ಎಂತಹ ಸುಂದರ ಕೃತಿ ಇಡೀ ಲೋಕಕ್ಕೆ ಅಲಭ್ಯವಾಗುತ್ತಿತ್ತಲ್ಲವೇ? ಕಚೇರಿಗಳಲ್ಲೂ, ಹಿಂದಿನ ದಿನ 'ಬಾಸ್' ಹೇಳಿದ್ದ ತುರ್ತು

ಕೆಲಸ ಇತರ ಚಟುವಟಿಕೆಗಳ ಮಧ್ಯೆ ಮರೆತಾಗಲೋ, ಮಾಡಲಾಗದುದಕ್ಕೋ ಅವರಿಂದ ಪಡೆವ ಚುಚ್ಚು ಮಾತಿನ ಶಿಕ್ಷೆ, ಅಪಮಾನ ಗೌರವಸ್ಥರಿಗೆ ನುಂಗಲಾರದ ತುತ್ತು. ನನ್ನ ಸಹ ಉದ್ಯೋಗಿಯೊಬ್ಬರು ಒಮ್ಮೆ ತುಂಬಾ ಅರ್ಜೆಂಟಾಗಿ ಎರಡು ಸಾವಿರ ರೂಪಾಯಿಗಳು ಬೇಕಾಗಿದೆಯೆಂದೂ, ಅವರ ಬಳಿ ಇದ್ದ ಹಣ ಹೆಂಡತಿ ತೌರಿಗೆ ಹೋಗುವಾಗ ಕೊಟ್ಟು ಕಳುಹಿಸಿ, ಪೇಚಿನಲ್ಲಿದ್ದೇನೆಂದು ಅಲವೊತ್ತುಕೊಂಡರು. ಇದೀಗ ಆರು ತಿಂಗಳಾದರೂ ನನಗೆ ಹಣ ವಾಪಸ್ಸು ಕೊಟ್ಟಿದ್ದಿಲ್ಲ. ನನ್ನ ನೋಡುತ್ತಲೇ ಆತನೇ ಜ್ಞಾಪಿಸಿಕೊಂಡು 'ಅಯ್ಯೋ, ಈ ಸಲಿಯೂ ಮರೆತೇಬಿಟ್ಟೆ ಕಣಯ್ಯ, ಮುಂದಿನ ಸಂಬಳದಲ್ಲಿ ಗ್ಯಾರಂಟಿ ಕೊಟ್ಟು ಬಿಡುವೆ' ಎಂದು ನಾನು ಅವರನ್ನ ಕೇಳದಿದ್ದರೂ ಗೋಳಾಡಿದ್ದರೂ! ನನ್ನ ಗ್ರಹಚಾರ, ನಾನೇ ಅವರನ್ನು ಸಮಾಧಾನಪಡಿಸಬೇಕು! ಮನೆಯಿಂದ ಪೇಟೆಗೆ ಹೋಗುವಾಗ ನನ್ನ ಹೆಂಡತಿ 'ಅದು ತನ್ನಿ, ಇದು ತನ್ನಿ' ಎಂದು ಉದ್ದನೆಯ ಪಟ್ಟಿಯನ್ನೇ ಹೇಳಿ ಕಳುಹಿಸುತ್ತಾಳೆ. ಬಜಾರಿನಲ್ಲಿ ಕೊಳ್ಳುವಾಗ, ಒಂದೆರೆಡನ್ನಾದರೂ ಮರೆತು ಬಂದು, ಅನೇಕ ಸಲ ಅವಳ ತೀಕ್ಷ್ಣ ನಾಲಿಗೆಯ ಪ್ರಹಾರಕ್ಕೆ ಬಲಿಯಾಗಿದ್ದನ್ನ ನಾಚಿಕೆಯಿಲ್ಲದೆ ನಾನೇ ಹೇಳಿಬಿಡುತ್ತೇನೆ. ಇದೇ ಕಾರಣವಾಗಿ ಮಕ್ಕಳಿಗೆ ಬೇಕಾಗುವ ತಮ್ಮ ಪಠ್ಯ ಪುಸ್ತಕ, ನೋಟ್ ಬುಕ್ಕು, ಪೆನ್ಸಿಲ್ಲು, ಯೂನಿಫಾರಂ ಇತ್ಯಾದಿ ಸಾಮಗ್ರಿಗಳನ್ನು ಕೊಳ್ಳಲು ನನ್ನ ಹೆಂಡತಿ ಅವಳೇ ಹೋಗಿ ಬರುತ್ತಾಳೆ! ಅದು ನನಗೂ ಒಳ್ಳೆಯದೇ! ಇತ್ತೀಚೆಗೆ ಮನೆಗೆ ಬೇಕಾಗುವ ಸಾಮಗ್ರಿಗಳ ಪಟ್ಟಿ ತಯಾರಿಸಿ ನನಗೆ ತೋರಿಸಿ, ಇವನ್ನು ಯಾವ ಕಾರಣಕ್ಕೂ ಮರೆಯುವಂತಿಲ್ಲ ಎಂದು ಎಚ್ಚರಿಕೆಯ ಮಾತನ್ನು ಆಡಿ ನನ್ನ ಕೋಟಿನಲ್ಲಿ ತುರುಕಿ ಕಳುಹಿಸಿದ್ದಳು. ಆದರೆ, ಆ ಕೆಟ್ಟ ದಿನ ನಾನು ಕೆಲಸ ಮುಗಿಸಿ ಹಿಂತಿರುಗುವಾಗ, ನನ್ನ ಕುರ್ಚಿಗೆ ಸಿಕ್ಕಿಸಿದ್ದ ಕೋಟನ್ನು ಅಲ್ಲೇ ಮರೆತುಬಂದು, ಬಹಳ ದೂರದಲ್ಲಿರುವ ಬಜಾರಿನಲ್ಲಿ ಪಟ್ಟಿಯನ್ನು ಕಾಣದೆ, ಮೊಬೈಲನ್ನೂ ಕೋಟಿನಲ್ಲೆ ಬಿಟ್ಟಿದ್ದು, ಅವಳ ಬಳಿ ಸಮಜಾಯಿಷಿ ಪಡೆಯಲೂ ಆಗದೆ ಇಂಗು ತಿಂದ ಮಂಗನಂತಾಗಿದ್ದೆ!

ನನ್ನ ಚಿಕ್ಕಪ್ಪನ ಸೋದರ ಸಂಬಂಧಿಯೊಬ್ಬರು ಮರೆವಿನ ಆಸಾಮಿಯೆಂದು ನಮ್ಮ ಸಂಬಂಧಿಗಳೆಲ್ಲರೂ ಬಲ್ಲರು. ಹಾಗಿದ್ದರೂ ಅವರು ಟ್ರಾನ್ಸ್ಪೋರ್ಟ್ ಕಂಪನಿಯೊಂದರ ಏಜೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಹಾಗಾಗಿ ಇವರಿಗೆ ಎಲ್ಲ ಬಸ್ಸುಗಳ ನಿರ್ವಾಹಕ, ಡ್ರೈವರುಗಳ ನಿಕಟ ಪರಿಚಯವಿತ್ತು. ಒಂದು ಬಾರಿ ಅವರ ಸಂಬಂಧಿಗಳ ಪೈಕಿ ಯಾರಿಗೋ ಆಪರೇಷನ್ ಮಾಡಬೇಕಿದ್ದು ಬೆಂಗಳೂರಿನಿಂದ ತಡಮಾಡದೆ, ತ್ವರಿತವಾಗಿ ಬ್ಲಡ್ ಬ್ಯಾಂಕಿನಿಂದ ರಕ್ತವನ್ನು ತರಬೇಕಿತ್ತು. ಆ ಕಾರ್ಯ ಈತನಿಗೆ ಹೇಳಿ, ಮರೆಯದೇ ತರಲು ಒಪ್ಪಿಸಿದ್ದರು. ಅವರೇನೋ ಕೂಡಲೇ ಒಪ್ಪಿ, ಇತರ ಎಲ್ಲ ಕೆಲಸ ಬಿಟ್ಟು ತಮಗೆ ಗೊತ್ತಿದ್ದ ಬಸ್ಸಿನಲ್ಲಿ ಕೂಡಲೇ ಬೆಂಗಳೂರಿಗೆ ಹೊರಟರು. ಬಸ್ಸಿನಲ್ಲಿ ಕೂತ ತರುವಾಯ, ತಮ್ಮ ಪರಿಚಯದ ನಿರ್ವಾಹಕ, ಡ್ರೈವರುಗಳೊಡನೆ ಹರಟುತ್ತಾ ಬೆಂಗಳೂರು ಸೇರಿ, ಅಲ್ಲಿ ಇತರರೊಡನೆ ಊಟ ಮುಗಿಸಿ ಮತ್ತಿನ್ನೇನೋ ಕೆಲಸ ಹಚ್ಚಿಕೊಂಡು, ತಾವು ಹೋಗಿದ್ದ ಕಾರಣವನ್ನೇ ಮರೆತು ಊರಿಗೆ ಹಿಂದಿರುಗಿದ್ದರು! ಎಲ್ಲರಿಂದ 'ಛೀ, ಥೂ' ಅನಿಸಿಕೊಂಡ ನಂತರ ಮತ್ತೆ ಹೋಗಿಬರಲೇನೋ ಸಿದ್ಧರಾದರು. ಆದರೆ ಸಮಯದ ವ್ಯವಧಾನವಿಲ್ಲದ ಕಾರಣ ಇವರ ಮರೆವಿಗೆ ಪ್ರತಿಯಾಗಿ, ರೋಗಿಯ ಪ್ರಾಣಕ್ಕೆ ಸಂಚಕಾರವಾಗದಂತೆ ಬೇರೇನೋ ವ್ಯವಸ್ಥೆ ಮಾಡಿ ಕೊಂಡವರಷ್ಟೇ.

# ಕೊರವಂಜಿ ಪದಬಂಧ – 14

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

1. ಆ ದಿವಸ ನೋಡಿರುವ ಜೈನ ದೇವಾಲಯ (3)
3. ಮನದಿಂದ ಮಾಡಿಕೊಂಡಿರುವ ಅರಿಕೆ (3)
5. ತಕ ತಕ ಕುಣಿಯಲು ತೋರಿರುವ ಆತುರ (3)
7. ಸಂಪಾದನೆಗಾಗಿ ಹಿಡಿದಿರುವ ಕಾಲು (2)
8. ತಲೆಯಲ್ಲಿರಿಸಿಕೊಂಡಿರುವ ಅನ್ನದ ಪಾತ್ರೆ (3)
9. ಅಕ್ಷರ ಕಲಿಯುತ್ತಿರುವ ಕಾಪಾಡುವವ (3)
10. ಸರ ಹಿಡಿದುಕೊಂಡಿರುವ ಆರೋಹಿ (3)
11. ಬರಿದಾಗಿರುವ ಪಾತ್ರೆ (3)
13. ದುಸ್ತರದಿಂದ ನೋಡಿರುವ ಮಡಿಕೆ (2)
14. ವನದ ಕೊನೆಗೆ ಮಾಡಿದ ಹೋಮ (3)
15. ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)
16. ಸೇವಂತಿಗೆ ಬೆಳೆಯಲು ಎತ್ತಿರುವ ಚಂದಾ (3)

**ಮೇಲಿಂದ ಕೆಳಕ್ಕೆ**

2. ಉಚಿತವಿದ್ದರೂ ಯೋಗ್ಯವಾದುದು (4)
4. ದಮಯಂತಿ ಪತಿಯ ಭರ್ಜರಿ ಅಡುಗೆ (4)
5. ಕನ್ನಡಿಗ ನೀಡಿದ ಟೈಟಲ್ (5)
6. ಕೈ ಸೇರಿಸಿ ತಟ್ಟಿದ ಚಪ್ಪಾಳೆ (5)
10. ಸರ ಕದ್ದವನಿಗೆ ಹಾಕಿರುವ ಸಂಕೋಲೆ (4)
12. ಯತಿಗೆ ಸಿಕ್ಕಿರುವ ಲಬೇಟ್ (4)

*(ಉತ್ತರಕ್ಕೆ 38ನೇ ಪುಟ ನೋಡಿ)*

# ಸಾಲಿಗೊಂದು ಜೋಕು

- ಸಂಪಟೂರು ವಿಶ್ವನಾಥ್

## ಅವನು – ಅವಳು

- ಅವಳು ಕೇವಲ ಹತ್ತೇನಿಮಿಷ ಮಾತನಾಡಿ, ರಿಸೀವರನ್ನು ಕೆಳಗಿಟ್ಟರೆ, ಅದು ರಾಂಗ್ ನಂಬರ್ರೇ.
- ಅವಳ ಹರಿತವಾದ ನಾಲಿಗೆ ಮುಳ್ಳುಬೇಲಿಯನ್ನೂ ಕತ್ತರಿಸುತ್ತದೆ.
- ಅವಳ ಮಾತನ್ನು ಕೇಳಿ ಕೇಳಿ ನನ್ನ ಗಂಟಲೇ ಕಟ್ಟಿಕೊಂಡಿತು.
- ಅವಳು ಕುರೂಪಿಯೇ ಅಲ್ಲ; ರೇಡಿಯೋದಲ್ಲಿ ಕೂಡ ಕಾಣಿಸಿಕೊಳ್ಳಬಹುದು.
- ಅವನಿಗೆ ಅವಳಿಗಿಂತ ರೇಡಿಯೋನ ಕಂಡ್ರೇನೆ ಪ್ರೀತಿ ಹೆಚ್ಚು, ಯಾಕೇಂದ್ರೆ ಅದನ್ನ ಬೇಕಾದಾಗ ನಿಲ್ಲಿಸಬಹುದು.
- ಅವನಿಗೆ ತುಂಬಾ ಹಸಿವಾಗಿತ್ತು; ಮೆನುದಲ್ಲಿದ್ದ ಹೋಟಲಿನ ಹೆಸರೊಂದನ್ನು ಬಿಟ್ಟು ಮಿಕ್ಕಿದ್ದನ್ನೆಲ್ಲಾ ತಿಂದ.
- ಅವಳು ನನ್ನ ಹಣವನ್ನು ಉಳಿಸಿದಳು, ಬೇರೆಯವನನ್ನು ಮದುವೆಯಾದಳು.
- ಅವನು ಕ್ಲಾಸಿಗೆ ಮಾತ್ರ ಚಕ್ಕರ್ ಹೊಡೆಯೊಲ್ಲ; ವಿರಾಮಕ್ಕೂ ಚಕ್ಕರ್ರೇ.
- ಅವಳ ಬಾಯಿಯಲ್ಲಿರುವ ಹಲ್ಲುಗಳೆಲ್ಲಾ ಅವಳ ಸ್ವಂತದ್ದೇ, ದುಡ್ಡುತೆತ್ತು ಕಟ್ಟಿಸಿಕೊಂಡಿದ್ದು.
- ಅವನಿಗೆ ಅಲ್ಸರ್, ಆದ್ದರಿಂದ ಅವನು ಜಾಣರ ಗುಂಪಿಗೇ ಸೇರುತ್ತಾನೆ.
- ಅವಳ ಧ್ವನಿ, ಒಡೆದ ಗ್ರಾಮೊಫೋನ್ ಪ್ಲೇಟಿನ ಹಾಗೆ.
- ಅವಳು ತಿನ್ನುವ ಉಪ್ಪುಖಾರಕ್ಕಿಂತ, ಅವಳ ಹಾಡುಗಾರಿಕೆಯೇ ಸಪ್ಪೆ.
- ಅವಳ ಮೂಗಿನ ಅಳತೆಯ ಕರ್ಚೀಫು, ಬಿಗ್‌ಬಜಾರ್‌ನಲ್ಲು ಇರಲಿಲ್ಲ.
- ಅವನು ಬಡವ, ಅದಕ್ಕೆ ಒಂದೊಂದು ಚಪ್ಪಲಿಯನ್ನು ಒಂದೊಂದು ಸಾರಿ ಕೊಂಡುಕೊಂಡ.
- ಅವನು ಬಡವ, ಅದಕ್ಕೆ ವಾರಕ್ಕೆರಡು ಬಾರಿ ಸಿನಿಮಾಗೆ ನಡಕೊಂಡೇ ಹೋಗ್ತಾನೆ.
- ಅವನು ಬಡವ; ತನ್ನ ರೋಲ್ಸ್ ರಾಯ್ಸ್‌ಕಾರನ್ನ ತಾನೇ ತೊಳೆದುಕೊಳ್ತಾನೆ...
- ಅವಳ ಬಾಯಿ ಅಂಚೆ ಪೆಟ್ಟಿಗೆ, ಸದಾ ತೆರೆದೇ ಇರತ್ತೆ.
- ಅವಳು ಜಾಣೆ – ಗಾಳಿ ಮಾತಿಗೆ ಕಿವಿಗೊಡೊಲ್ಲ, ಅದನ್ನ ಆರಂಭಿಸ್ತಾಳೆ ಅಷ್ಟೆ

★★★

## ನಾನು – ನನ್ನದು

❖ ನನ್ನ ತಲೆಯಲ್ಲಿ ಹೊಸ ಹೊಸ ಆಲೋಚನೆ ಮೂಡಿದಾಗಲೆಲ್ಲಾ, ಮನೆಯಲ್ಲಿ ಕರೆಂಟ್ ಇರೊಲ್ಲ ಅಥವಾ ಡಾಟ್‌ಪೆನ್ ಬರೆಯೊಲ್ಲ ಅಥವಾ ನಾನು ಗಾಢನಿದ್ರೆಯಲ್ಲಿರ್ತೀನಿ.

❖ ನಾನು ಮಾಡುವ ಕೆಲಸ ಮತ್ತು ನಾನು ಆಡುವ ಮಾತು, ಇವೆರಡನ್ನು ಬಿಟ್ಟು ಉಳಿದಿದ್ದೆಲ್ಲಾ ನನ್ನ ಹೆಂಡತಿಗೆ ಇಷ್ಟ

❖ ನನ್ನ ಹೆಂಡತಿ ವಿಶ್ವಜ್ಞಾನಿ, ಎಂಥಾ ಸಮಸ್ಯೆಗಾದರೂ ಪರಿಹಾರ ಹೇಳೇ ಬಿಡ್ತಾಳೆ.

❖ ನನ್ನ ಕೆಲಸ ನನಗೆ ಇಷ್ಟ, ಅದಕ್ಕೇ ಆಫೀಸಿನಲ್ಲಿ ಅದನ್ನ ಮುಂದೆ ಇಟ್ಕೊಂಡೇ ಕೂತಿರ್ತೀನಿ.

❖ ನನ್ನ ಹೆಂಡ್ತಿ ಪ್ರಪಂಚ ತೋರಿಸಿ ಅಂದ್ಳು, ನಾನು ಅಟ್ಲಾಸ್ ತಂದು ಕೊಟ್ಟೆ.

❖ ನನ್ನ ಕಂಪ್ಯೂಟರ್ ಇನ್ನೂ ಸರಿ ಹೋಗಿಲ್ಲ, ಯಾವಾಗಲೂ ತಲೆಕೆಳಕಾಗೇ ಬೀಳತ್ತೆ.

❖ ನನ್ನ ಹೆಂಡತಿ ಪಾಪ ಸದಾ ಅಡುಗೆ ಮನೇಲ್ಲೇ ಇರ್ತಾಳೆ. ಟಿ.ವಿ. ಟೆಲಿಫೋನು ಎರಡು ಅಲ್ಲೇ ಇರೋದು.

❖ ನನ್ನ ಟಿ.ವಿ. ನನಗೆ ಬೇಕಾದ ಶಾಂತಿ ಸಮಾಧಾನ ಕೊಡತ್ತೆ; ನನ್ನ ಹೆಂಡತಿ ಅದರ ಮುಂದೇನೇ ಕೂತಿರೋದರಿಂದ.

❖ ನನ್ನ ನಾಲಿಗೆ ಒದ್ದೆಯಾಗಿರುವುದರಿಂದ, ಜಾರುವ ಸಾಧ್ಯತೆಗಳು ಜಾಸ್ತಿ.

❖ ನನ್ನ ಚಿನ್ನದ ಚೈನಿನ ಗಡಿಯಾರ ಸದಾ ಚಲಿಸ್ತಾನೇ ಇರತ್ತೆ; ಮನೆಯಿಂದ ಗಿರವಿ ಅಂಗಡೀಗೆ, ಗಿರವಿ ಅಂಗಡಿಯಿಂದ ಮನೇಗೆ.

❖ ನನ್ನ ವೈಯಕ್ತಿಕ ಪ್ರಶ್ನೆಗಳನ್ನೂ ಕೇಳುವ ಮನೋಚಿಕಿತ್ಸಕನ ಬಳಿಗೆ ನಾನು ಹೊಗೊದಿಲ್ಲ.

❖ ನನ್ನ ಹೆಂಡತಿ ಜಾಣೆ, ಸಂಬಳದ ಖಾಲಿಕವರುಗಳನ್ನೆಲ್ಲಾ ಉಳಿಸಿದ್ದಾಳೆ..

❖ ನನ್ನ ನರನಾಡಿಗಳಲ್ಲಿ ರಂಗಭೂಮಿ ತುಂಬಿಕೊಂಡಿದೆ. ಅದರ ಬದಲು ಸ್ವಲ್ಪ ರಕ್ತವೂ ಇದ್ದಿದ್ದರೆ ಚೆನ್ನಾಗಿತ್ತು ಅಂತಾರೆ ನನ್ನ ಡಾಕ್ಟ್ರು.

★★★

## ಹೆಂಡತಿಯೊಬ್ಬಳು ಮನೆಯೊಳಗಿದ್ದರೆ

✤ ಯಾವ ಜಾಣೆಯೂ, ಪಾತ್ರೆ ತೊಳೆಯುತ್ತಿರುವಾಗ ಗಂಡನನ್ನು ಹೊಡೆಯುವುದಿಲ್ಲ.

✤ ಜಾಣೆಯಾದ ಹೆಂಡತಿ, ತನ್ನ ವಯಸ್ಸು, ತೂಕ ಮತ್ತು ಗಂಡನ ಸಂಬಳದ ಬಗ್ಗೆ ಮಾತ್ರ ಸುಳ್ಳು ಹೇಳುತ್ತಾಳೆ.

✤ ನಿಮ್ಮ ಹೆಂಡತಿ ನಿಮ್ಮ ಮಾತಿಗೆ ಕಿವಿಗೊಡಬೇಕಾದರೆ, ಬೇರೊಬ್ಬರ ಹೆಂಡತಿಯ ಮಾತಿಗೆ ಕಿವಿಗೊಡಿ

✤ ಗೃಹಿಣಿಯ ಸ್ಥಾನ ಮನೆಯಲ್ಲೇ, ಮೊಬೈಲ್ ಮಾತ್ರ ಕೈನಲ್ಲೇ.

- ನನ್ನ ಹೆಂಡತಿ ನನ್ನ ಕೈಗೆ ಕೊಟ್ಟ ಟೆಲಿಫೋನ್ ಬಿಲ್ಲನ್ನು ನೋಡಿದಾಗಲೇ ನನಗೆ ಗೊತ್ತಾಗಿದ್ದು, ಬಾಯಿ ತುಂಬಾ ಮಾತನಾಡಿದರೆ ಏನು ಕಳಕೊಳ್ತಿವಿ ಅಂತ.
- ಮುಂಬಾಗಿಲಿಗೆ ಬಂದು ''ಬಾಯ್'' ಅಂದರೆ, ನನಗೇನು ತರ್ತೀರಿ ಸಂಜೆ ಬರುವಾಗ ಅಂತ್ಲೇ ಅರ್ಥ.
- ನಾನು ನಿದ್ದೆ ಮಾಡುವಾಗ ಮಾತ್ರವೇ ನನ್ಹೆಂಡ್ತಿ ನನ್ನ ಮಾತು ಕೇಳೋದು.
- ನನ್ನ ಹೆಂಡತಿಗೆ ನಾನು ಎಷ್ಟೋ ಬಾರಿ ಹೇಳಿದ್ದೀನಿ, ''ನನ್ನತ್ತೆಗಿಂತ ನಿನ್ನ ಅತ್ತೇನ ಕಂಡ್ರೇನೇ ನನಗೆ ತುಂಬಾ ಇಷ್ಟ ಅಂತ.
- ಅದೊಂದು ಅದ್ಭುತ ರಾತ್ರಿ; ಚಂದ್ರ ಮೋಡದ ಹಿಂದಿನಿಂದ ಇಣಿಕುತ್ತಿದ್ದ; ಹೆಂಡತಿಯ ಅಪ್ಪ ಅಮ್ಮ ಮನೆಯಿಂದ ಹೊರಕ್ಕೆ ಹೋಗುತ್ತಿದ್ದರು.
- ಗೃಹಸ್ಥರು ಒಳ್ಳೆಯ ವ್ಯಾಪಾರಿಗಳಾಗಬಲ್ಲರು, ಏಕೆಂದರೆ ಅವರಿಗೆ 'ಆರ್ಡರ್'ಗಳನ್ನು ತೆಗೆದುಕೊಳ್ಳುವುದು ಚೆನ್ನಾಗಿ ಅಭ್ಯಾಸವಾಗಿರತ್ತೆ
- ಅವರದು ಕೊಟ್ಟು ತೆಗೆದುಕೊಳ್ಳುವ ದಾಂಪತ್ಯ; ಅವನು ಕೊಡುತ್ತಾನೆ, ಅವಳು ತೆಗೆದು ಕೊಳ್ಳುತ್ತಾಳೆ.
- ಹೆಂಡತಿಯನ್ನು ಬದಲಿಸಲು ಸುಲಭೋಪಾಯವೆಂದರೆ, ಅವಳು ಹೇಳಿದ ಹಾಗೆ ಕೇಳುವುದು.
- ಐದು ವರ್ಷದ ಹಿಂದೆ, ಅವಳನ್ನು ಅವಳಪ್ಪ ನನ್ನ ಕೈಗೆ ಕೊಟ್ಟ, ಅಂದಿನಿಂದ ಆ ಕೈ ನನ್ನ ಜೇಬಿನಲ್ಲೇ ಇದೆ.

## ಹೊಸ ವರ್ಷದ ಹೊಸತು

ಬಡವ ಕೇಳದ ರಾಜಕಾರಿಣಿಯನ್ನು
ಹೊಸ ವರ್ಷಕ್ಕೆ ಹೊಸದೇನು
ಹೊಸ ಹಾಲಿನ ದರ, ಹೊಸ ನೀರಿನ ದರ
ಹೊಸ ಕರೆಂಟಿನ ದರ
ಕೇಳದ ರಾಜಕಾರಿಣಿ
ಸಾಕೇನು

# ಸ್ಕೀಮೂ - ಪೇಪರೂ

**- ನುಗ್ಗೇಹಳ್ಳಿ ಪಂಕಜ**

"ಗುಡ್ಮಾರ್ನಿಂಗ್ ಮೇಡಮ್, ಕಾಫಿ ಆಯ್ತಾ ಮೇಡಮ್? ಏನು, ಇನ್ನೂ ಹಾಲೇ ಬಂದಿಲ್ವಾ? ಇಷ್ಟು ಹೊತ್ತಾದ್ರೂ? ಛೇ, ಏನ್ ನ್ಯಾಯ ಮೇಡಮ್! ನಿಮ್ಮಂಥಾ ವಯಸ್ಸಾದವ್ರಿಗೆ ಹೀಗಾ ಮಾಡೋದು, ಛೆಛೇ! ಸೀನಿಯರ್ ಸಿಟಿಜನ್ಸ್‌ಗೆ ಸ್ವಲ್ಪಾನೂ ಕೇರ್ ಮಾಡಲ್ಲ ನಮ್ಮ ಸರ್ಕಾರ - ಯಾವ ಸರ್ಕಾರ ಬಂದ್ರೂ ಅಷ್ಟೆ ಅನ್ನಿ, ಅದೇ ನೋಡಿ, ಅಮೇರಿಕಾದ ಸರ್ಕಾರ...."

"ಅದಿರ್ಲಿ, ತಾವು ಯಾರು, ತಿಳೀಲೇ ಇಲ್ವಲ್ಲಾ?" ಅಸಹನೆಯಿಂದ ಅವನ ವಾಕ್‌ಪ್ರವಾಹವನ್ನು ಕಟ್ ಮಾಡಿದ್ಲು, ಶಾರದೆ.

ಬೆಳಿಗ್ಗೆ ಬೆಳಿಗ್ಗೆಯಾಗೊತ್ಲೂ ಯಾರಿಗ್ಬೇಕಾಗಿದೆ, ಸರ್ಕಾರಗಳ ವರ್ಣನೆ?

"ನಾನು ಮೇಡಮ್, ನಿಮ್ಮನೇಗೆ ಪೇಪರ್ ಕೊಡೊ ಏಜೆಂಟ್ ಆಗ್ಲೆ ಮರೆತ್ಬಿಟ್ರಾ ನನ್ನನ್ನ?"

"ಹೇಗಪ್ಪಾ ಮರ್ಯೋದು? ಫಸ್ಟ್ ಆಗಿದ್ದೇ ತಡ, ಬಾಗಿಲ್ನ ಬಡಿಯೋವನನ್ನ? ಹಣ ಕೊಡೋವರ್ಗೂ ಬಡಪೆಟ್ಟಿಗೆ ಜಾಗ ಖಾಲಿ ಮಾಡ್ದೆ ನಿಂತಿರೋವ್ನನ್ನ?"

ಅವನು ನಕ್ಕ. "ಏನ್ಮಾಡೋದು ಮೇಡಮ್, ಹೊಟ್ಟೆಪಾಡು..... ನಿಮಗೇ ಗೊತ್ತಲ್ಲ, ಬೆಂಗ್ಳೂರು ಪೇಟೆ ಜೀವನ ಎಷ್ಟು ಕಷ್ಟ ಅನ್ನೋದು, ಎಲ್ಲಾ ಬೆಲೆ ಜಾಸ್ತಿ.. ಅದಕ್ಕೆ ಏನೋ, ದಿನಬೆಳಗಾದ್ರೆ ಸರಿ, ಒಬ್ರತಪ್ಪ ಒಬ್ರು ಸೂಸೈಡ್ ಮಾಡ್ಕೋತಾನೇ ಇರೋದು? ಮೊನ್ನೆ......"

ಮತ್ತೆ ಕಟ್ ಮಾಡಿದ್ಲು ಶಾರದೆ, ಆಸಾಮಿ ಮಾತನ್ನ. ಅಲ್ಲಾ, ಬೆಳಿಗ್ಗೆಯಾಗೊತ್ಲೂ ಯಾರಿಗ್ಬೇಕಾಗಿದೆ, ಬೆಂಗ್ಳೂರು ಪೇಟೆ-ಬೆಲೆ ಬಗ್ಗೆ ಹರಿಕಥೆ? ಅದ್ರ ಮೇಲೆ ಸೂಸೈಡ್ ವಿಚಾರ ಭಾಷಣ ಬೇರೆ!

ಅದ್ಸರಿ, ಯಾತಕ್ಕಾಗಿ ಫೋನ್ ಮಾಡ್ದ ಭೂಪ? ಕುಶಲ ಪ್ರಶ್ನೆಗಂತೂ ಅಲ್ಲ....

"ಮೇಡಮ್, ನಿಮಗೊಂದು ಸಮಾಚಾರ ತಿಳಿಸ್ಬೇಕಿತ್ತು". ಅಬ್ಬಾ, ನೇರವಾಗಿ ವಿಷಯಕ್ಕೆ ಬಂದ. "ನಿಮಗಾ ಸ್ಕೀಮು ಜ್ಞಾಪಕ ಇರ್ಬೇಕಲ್ವೇ? ಅದೇ 'ಗುಡ್‌ಲಕ್' ಅನ್ನೊ ಪತ್ರಿಕೆ ಸ್ಕೀಮು? ಅದೇ ಒಂದು ವರ್ಷಕ್ಕೆ ಚಂದಾದಾರರಾದ್ರೆ, ಅರ್ಧಕ್ಕರ್ಧ ಬೆಲೆಗೆ ಆ ಪತ್ರಿಕೆ ಕೊಡೋ ಸ್ಕೀಮು? ನೋಡಿ, ಎಷ್ಟು ಉಳಿತಾಯ ಆಗತ್ತೆ, ಕೂತ್ ಹಾಗೇ! ಸೊಗಸಾದ ಪತ್ರಿಕೆ, ಕರ್ನಾಟಕದಲ್ಲಿ ಆಗೋ ರೇಪೂ, ಮರ್ಡರೂ, ಕಿಡ್ನಾಪಿಂಗೂ ಎಲ್ಲಾ ಒಂದೂ ತಪ್ಪದೆ ಬರತ್ತೆ ಅದ್ರಲ್ಲಿ, ವಿಪರೀತ ಪುಟಗಳು! ಓದಿದಷ್ಟೂ ಪುಟಗಳು! ದಿನವೆಲ್ಲಾ ಕೂತು ಓದಿದ್ರೂ ಮುಗಿಯೋದೇ ಇಲ್ಲ! ಅಂಥಾ ಭರ್ಜರಿ ಪೇಪರು! ತಗೊಳ್ಳಿ ಮೇಡಮ್ - ನಿಮ್ಮ ಜನರಲ್‌ನಾಲೆಡ್ಜ್ ಇಂಪ್ರೂವ್ ಆಗತ್ತೆ."

ಹೌದಲ್ಲಾ? ಜೊತೆಗೆ, ಜಾಸ್ತಿ ಪುಟಗಳು ಇರೋದ್ರಿಂದ ಹಣಾನೂ ಒಂದಕ್ಕೆರಡರಷ್ಟು ಬರತ್ತೆ, ರದ್ದಿಗೆ ಹಾಕ್ದಾಗ...... ಎಷ್ಟೊಂದು ಉಳಿತಾಯ!

''ಸರೀಪಾ, ಹಾಕಿ'' ಒಪ್ಪಿಗೆ ಕೊಟ್ಲು.......

ಒಂದು ವಾರ ತಪ್ಪದೆ ಆ ಪತ್ರಿಕೆ ಬಂತು. ಶಾರದೆಯ ಯಜಮಾನ್ರಿಗಂತೂ ಸಂತೋಷವೋ ಸಂತೋಷ! ಪಿಹೆಚ್.ಡಿ. ಮಾಡೋವ್ರಂತೆ ದಿನವೆಲ್ಲಾ ಆ ಪತ್ರಿಕೇನ ಓದಿದ್ದೂ ಓದಿದ್ದೇ! ಜಾಣ ಆ ಏಜೆಂಟ್, ಅದ್ರ ರುಚಿ ಹತ್ತಲಿ, ಅಂತ ಕಾಯ್ತಿದ್ನೇನೋ, ಸರಿಯಾಗಿ ಒಂದು ವಾರದ್ಮೇಲೆ ಬಂದ.

''ಈಗ್ಲೇ ಹಣ ಕಟ್ಬೇಕು, ಆ ಸ್ಕೀಮಿನವರಿಗೆ'' ಹೇಳಿದ.

ಕ್ಯಾಶ್ ಕೊಡೋಕ್ಕೆ ಹೋದಾಗ, ''ನಾನು ಆ ಸ್ಕೀಮಿನವರಿಗೆ ಚೆಕ್ ಅನ್ನೇ ಕಳಿಸ್ಬೇಕು ಮೇಡಮ್, ಕ್ಯಾಶ್ ತಗೊಳಲ್ಲ - ಏನ್ಮಾಡ್ಲಿ, ರೂಲ್ಸು'' ತಿಳಿಸಿದ.

ಬ್ಯಾಂಕ್‌ನಲ್ಲಿ ಅಕೌಂಟ್ ಇರೋದು, ಶಾರದೆಯ ಯಜಮಾನ್ರ ಹೆಸರಲ್ಲಿ! ಅಂದ್ರೆ, ಅವರೇ ಚೆಕ್ ಕೊಡ್ಬೇಕು!

ತಕ್ಷಣ ಆ ಗುಡ್ಲಕ್ ಪತ್ರಿಕೆಯ ಮೇಲಿದ್ದ ಆಸಕ್ತಿಯೆಲ್ಲಾ ಜರ್‍ರನೆ ಇಳಿದುಬಿಡ್ತು ರಾಯರಿಗೆ! ಅದನ್ನ ಆ ಕಡೆ ರೊಪ್ಪಂತ ಬಿಸಾಕಿದವರೆ, ಗದರಿದ್ರು ''ಯಾರಿಗ್ಬೇಕು, ಈ ಸುಡುಗಾಡು ಪತ್ರಿಕೆ! ಬೇಡ ಅಂತ್ ಹೇಳು'' ಎಂದು.

ಹಾಗ್ಮಾಡೋದಿಕ್ಕಾಗತ್ಯೇ? ಮಾತೂಂದ್ರೆ ಮಾತು!

ಕೊನೆಗೆ ಅವರ ಕೈಲಿ ಆ ಅಮೌಂಟ್ ಇನ್ ಕ್ಯಾಶ್ ಅನ್ನ ಶಾರದೆ ಇಟ್ಮೇಲೇನೇ ಮಹಾರಾಯ್ರು ಚೆಕ್ ಬರೆದದ್ದು.

ಹೌದು, ''ಶಾರದೆ ಜ್ಞಾಪಿಸಿಕೊಂಡು ವಿಚಾರಿಸಿದ್ಲು ಗಿಫ್ಟ್ ಎಲ್ಲಿ? ಅದೇ ಈ ಸ್ಕೀಮಿಗೆ ಸೇರಿದೋರಿಗೆ ನೀವು ಹೋದ್ಸಲ ಕೊಟ್ಟ ಗಿಫ್ಟ್?''

''ಈಸಲದಿಂದ ಕೊಡಲ್ವಂತೆ ಮೇಡಮ್ ಗಿಫ್ಟ್ ಅನ್ನ, ನಾನೇನ್ಮಾಡ್ಲಿ?'' ಅಳುಮೊರೆ ಮಾಡ್ದ - ''ಹೊಸಾ ರೂಲ್ಸು......''

ಎಂಥಾ ಶಾಕು, ಶಾರದೆಗೆ! ಪಾಪ, ಗಿಫ್ಟ್ ಆಸೆಯಿಂದ ಸ್ಕೀಮ್ಗೆ ಕೈಹಾಕಿದ್ದಳು.

''ಮೊದ್ಲೇ ಯಾಕೆ ಹೇಳಿಲ್ಲಾ?'' ಗದರಿದಳು, ''ಚೆಕ್ ಬರೆದ್ಮೇಲೆ ಯಾಕೆ ಹೇಳಿದ್ರಿ?''

''ನಂಗೂ ಈಗ್ಲೇ ಗೊತ್ತಾಗಿದ್ದು ಮೇಡಮ್, ಪಕ್ಕಾ ಘಾಟಿಗಳು, ಆ ಪೇಪರಿನವರು!'' ಉತ್ತರಿಸಿ, ಹಾಯಾಗಿ ಕೈತೊಳ್ಕೊಂಡ!

''ಸರೀಪಾ'' ಅಂದಳು, ಹೆಸರಿಗ್ಮಾತ್ರ ಶಾರದೆಯಾಗಿದ್ದ ಆ ಶಾರದೆ.

ಇನ್ನಾದ್ರೂ ಹೊಗ್ಬೇಡವೇ ಆ ಏಜೆಂಟು? ಇಲ್ಲ, ನಿಂತೇ ಇದ್ದ ಗರುಡಗಂಬದ ಹಾಗೆ!

''ಇನ್ನೇನು?'' ಎಂಬಂತೆ ಶಾರದೆ ಹುಬ್ಬೇರಿಸಲು, ಗಂಟಲು ಸರ್ಮಾಡ್ಕೊಂಡು, ಮೆಲ್ಲಗಾರಂಭಿಸಿದ ''ಹ ಏನಿಲ್ಲ.. ಹ... ಇನ್ನೊಂದು ವಿಷಯ ಮೇಡಮ್.......''

‘‘ಏನದು?’’

‘‘ಅ..... ಏನಿಲ್ಲ, ಈ ಸ್ಕೀಮ್ ಶುರು ಆಗೋದು ಮುಂದಿನ ತಿಂಗಳು ಫಸ್ಟ್ ಇಂದ. ಆಗ ಬರೋ ಪತ್ರಿಕೆ ನಿಮಗೆ ಫ್ರೀ ಹೌದು, ಆದ್ರೆ ಈ ತಿಂಗಳಿಂದ ಹಾಕ್ತಿರೋ ಪತ್ರಿಕೇಗೆ, ನೀವು ಮಾಮೂಲಿ ರೇಟ್ ಕೊಡ್ಬೇಕು.’’

ಶಾರದೆಗೆ ರೇಗಿತು. ಯಜಮಾನ್ರು ಪತ್ರಿಕೇನಾ ಹಿಡ್ಕೊಂಡು ಕಿಚನ್‌ಗೆ ನಿಷ್ಕ್ರಮಣ. ಇಲ್ಲೇ ಇದ್ರೆ, ಪಾಪರ್ ಆಗೋದು ಖಂಡಿತ ಎಂದು.

‘‘ಅವತ್ತೇ ಯಾಕ್ ಹೇಳಿಲ್ಲಾ? ಚೆಕ್ ಬರೆದ್ಮೇಲೆ ಹೇಳಿದ್ರಿ?’’ ಎಂದು ತರಾಟೆಗೆ ತೆಗೆದುಕೊಂಡದ್ದಕ್ಕೆ ಬಂತು ಜಾಣತನದ ಉತ್ತರ. ‘‘ನಂಗೂ ಗೊತ್ತಿರ್ಲಿಲ್ಲ ಮೇಡಮ್ ಇವತ್ತೇ ಗೊತ್ತಾಗಿದ್ದು’’ ಎಂದು.

‘‘ಎಲಾ ಇವನಾ! ಎಷ್ಟು ಜಾಣಾಪ್ಪಾ!’’ ಎಂದುಕೊಂಡ ರಾಯರು ಅಷ್ಟೇ ಜಾಣತನದಿಂದ ‘‘ನಾಳೆಯಿಂದ ಆ ಪತ್ರಿಕೇನ ಹಾಕ್ಬೇಡಿ, ಮುಂದಿನ ತಿಂಗಳಿಂದ ಬರುತ್ತಲ್ಲಾ ಸ್ಕೀಮ್ – ಪತ್ರಿಕೆ, ಅಷ್ಟೇ ಸಾಕು. ಈಗ ಒಂದು ವಾರ ಹಾಕಿರೋ ಪತ್ರಿಕೆ ದುಡ್ಡನ್ನ ಮುಂದಿನ ತಿಂಗಳು ಕೊಡ್ತೀನಿ ಸಧ್ಯಕ್ಕೆ ನಮ್ಮಲ್ಲಿ ಹಣ ಇಲ್ಲ, ನೀವೇ ನೋಡಿದ್ರಲ್ಲಾ? ಗುಡ್ ಲಕ್’’ ನಿಮಗೆ ಎಂದು ಬೀಳ್ಕೊಟ್ಟಾಗ ಅವನ ಮುಖ ನೋಡ್ಬೇಕಿತ್ತು!

✵

## ಗಂಡನಿಗಾಗಿ ಹುಡುಕಾಟ

ಒಬ್ಬ ದಢೂತಿ ಮಹಿಳೆ ಒಂದು ದೊಡ್ಡ ಪುಸ್ತಕದಂಗಡಿಗೆ ಬಂದಳು. ಅಲ್ಲಿನವರು ಆಕೆಯನ್ನು ಯಾವ ಪುಸ್ತಕ ಬೇಕು ಅಂತ ವಿಚಾರಿಸಿದರು. ಯಾರು ವಿಚಾರಿಸಿದರೂ ಆಕೆ ಏನೂ ಮಾತಾಡದೆ ಪುಸ್ತಕದಂಗಡಿಯ ನಾಲ್ಕೂ ಮಹಡಿಗಳನ್ನು ತಡಕಾಡಿದಳು. ಅವಳನ್ನು ಗಮನಿಸುತ್ತಿದ್ದ ಸೇಲ್ಸ್‌ಮನ್ ಒಬ್ಬ ಹತ್ತಿರ ಬಂದು ಮೇಡಂ ನಿಮಗೆ ಯಾವ ಪುಸ್ತಕ ಬೇಕು ಅಂತ ಹೇಳಿದರೆ ನಾನು ಸಹಾಯ ಮಾಡುತ್ತೀನಿ ಅಂದ. ಅದಕ್ಕೆ ಆಕೆ ಅಕ್ಕ ಪಕ್ಕ ನೋಡಿ ಅವನ ಹತ್ತಿರ ಹೋಗಿ ಪಿಸು ಮಾತಿನಿಂದ ಇಲ್ಲಿ ಪೋಲೀ ಪುಸ್ತಕಗಳ ರ್‍ಯಾಕ್ ಎಲ್ಲಿದೆ ಅಂತ ಕೇಳಿದಳು. ಅದಕ್ಕೆ ಸೇಲ್ಸ್‌ಮನ್ ಗಾಬರಿಯಿಂದ ಏನ್ ಮೇಡಂ ನೀವು ಈ ವಯಸ್ಸಿನಲ್ಲಿ ಅಂಥಾ ಪುಸ್ತಕಗಳ ಬಗ್ಗೆ ಅಂತ ಇನ್ನೂ ಏನೇನೋ ಹೇಳುತ್ತಿದ್ದಾಗ ಆಕೆ ಸಿಟ್ಟಿನಿಂದ ರೀ, ಅದು ನನಗಲ್ಲರೀ, ನನ್ನ ಗಂಡ ನಿಮ್ಮ ಪುಸ್ತಕದಂಗಡಿಗೆ ಬಂದು ಒಂದು ಗಂಟೆಯ ಮೇಲಾಯಿತು. ನಾನು ಕಾರಿನಲ್ಲಿ ಕೂತು ಕೂತು ಸಾಕಾಗಿ ಒಳಗೆ ಬಂದೆ. ಇಲ್ಲಿ ನೋಡಿದರೆ ಅವರು ಎಲ್ಲಿಯೂ ಕಾಣುತ್ತಿಲ್ಲ. ಇದ್ದರೆ ಅಂಥಾ ರ್‍ಯಾಕ್ ಬಳಿಯೇ ಇರಬೇಕು ಅದಕ್ಕೆ ತೋರಿಸಿ ಆ ರ್‍ಯಾಕ್ ಎಲ್ಲಿದೆ ಅಂತ ಕೇಳಿದಾಗ ಸೇಲ್ಸ್‌ಮನ್ ಹುಬ್ಬೇರಿಸಿ ಹೀಗೂ ಉಂಟೇ ಅಂದುಕೊಂಡ.

*– ಸುಕೇಶವ*

# “37ನೇ ಕೀ ಮಾಸ್ತರ ಕೀ”

**– ಬಿ.ಸಿ. ಬಹದ್ದೂರ ದೇಸಾಯಿ**

**ಸ**ಮಾಜದೊಳಗ ಎಲ್ಲಾರೂ ಒಂದSS ನಮೂನಿ ಕೆಲಸ ಮಾಡ್ಲಿಕ್ಕೆ ಆಗೋದಿಲ್ಲಾ. ಅವರವರ ಕುಲಕಸಬು, ವಿದ್ಯಾರ್ಹತೆ, ವ್ಯಾಪಾರ, ವ್ಯವಹಾರ, ವಾಹನ ರಿಪೇರಿ. ಇತ್ತೆತ್ತಲಾಗಿ ಬೆಳೆದು ಬಂದಿರೋ ಐ.ಟಿ.ಬಿ.ಟಿ., ರಿಯಲ್ ಎಸ್ಟೇಟ್, ಶೇರು ವಹಿವಾಟು, ರೇಡಿಯೋ, ಟಿ.ವಿ., ಪತ್ರಿಕೆ ಇತ್ಯಾದಿ ಮಾಧ್ಯಮಗಳೊಳಗ ಕೆಲಸ. ಹಲವಾರು ಉದ್ದಿಮೆಗಳು, ಸಾರಿಗೆ ಸಂಪರ್ಕ, ದೇಶದ ರಕ್ಷಣೆಗಾಗಿ ಇರುವ ಆರ್ಮಿ, ಏರಫೋರ್ಸ್ ಮತ್ತ ಸೇವಿಗಳಲ್ಲೆಲ್ಲಾ ಕೆಲಸ, ಪೋಲಿಸ್ ವೃತ್ತಿ ಇತ್ಯಾದಿ. ಏನೂ ಕೆಲಸ ಇಲ್ಲಾ ಅಂದ್ರ ರಾಜಕಾರಣ, ಎಲ್ಲೂ ಕೆಲಸ ಸಿಗಲಿಲ್ಲ ಅಂದ್ರ ಶಿಕ್ಷಕ ವೃತ್ತಿ. ಹಿಂಗ ಮನುಷ್ಯ ಒಂದಲ್ಲಾ ಒಂದು ಉದ್ಯೋಗಾನ ಮಾಡಲಿಕ್ಕೇ ಬೇಕಾಗ್ತದ ಇಲ್ಲಿದ್ರ ಜೀವನ ನಡೀಬೇಕಲ್ಲಾ?

ಜೀವನ ನಡಸಬೇಕು ಅಂತ ಹೇಳಿ ಎಂಥೆಂತಾದೋ ಸಮಾಜ ಬಾಹಿರ ಕೆಲಸಾನ ಮಾಡಲಿಕ್ಕೆ ಆಗ್ತದೇನು? ಎಲ್ಲಾರೂ ತಮತಮಗ ಇಷ್ಟಾ ಬಂದಿರೋ ಉದ್ಯೋಗ ಆರಿಸಿಕೊಂಡು ಪ್ರಾಮಾಣಿಕತನದಿಂದ ಜನಸೇವಾ ಮಾಡ್ತಾ ಇದ್ರ ಸಮಾಜದ ಸ್ವಾಸ್ಥ್ಯ, ಸಮತೋಲನ ಕಾಯ್ಕೊಳ್ಳಿಕ್ಕೆ ಸಾಧ್ಯ ಆಗ್ತದ.

ಹಿಂಗSS ಒಬ್ಬ ಮಹಾನುಭಾವರು ಈ ಎಲ್ಲಾ ಉದ್ಯೋಗ, ಕೆಲಸ, ನೌಕರಿ, ವೃತ್ತಿ. ಏನರ ಅನ್ರಿ ಇವೆಲ್ಲಾವುಕ್ಕೂನೂ ಅವರು ಅವರವರ ‘ಧಂದೆ’ ಅಂತ ಕರದ್ರು.

ಹಂಗರ ಎಷ್ಟ ನಮೂನಿ ಧಂದೆ ಅವ ಅಂತ ಪಟ್ಟಿಮಾಡಿಕೋತ ಹೋದ್ರ....

ಮೊದಲನೇದಾಗಿ ದೇಶದ ಅತ್ಯುನ್ನತ ಪದವಿ.

ಅದನ್ನ ಪ್ರೆಸಿಡೆಂಟ ಕೀ ಅಂತೇವಿ

ಮುಂದ ಪ್ರೈಮ ಮಿನಿಸ್ಟರ ಕೀ

ಚೀಫ ಮಿನಿಸ್ಟರ ಕೀ

ಗವರ್ನರ ಕೀ

ಮಿನಿಸ್ಟರ ಕೀ

ಮ್ಯಾಜಿಸ್ಟ್ರೇಟ ಕೀ

ಕಮೀಶನರ ಕೀ

ವಕೀಲ ಕೀ

ಮ್ಯಾನೇಜರ ಕೀ

ಇನ್ನ ಕುಲ ಕಸಬುಗಳಿಗೆ ಹೇಳೋದಾದ್ರ

ಬಡಗೇರ ಕೀ

ಕಮ್ಮಾರ ಕೀ

ಉದ್ದಾರ ಕೀ

ನೇಕಾರ ಕೀ

ಸೋನಾರ ಕೀ

ಹಿಂಗ ಎಲ್ಲಾ ಧಂದೆಕ್ಕೂ ಕೀ ಪ್ರತ್ಯಯ.

ಹಚಗೋತ ಹೋದ್ರ ಒಟ್ಟಾರೆ ಸಮಾಜದಾಗ 37 ಕೀ ಅವ ಅಂತ.

ಒಂದೊಂದು ಉದ್ಯೋಗನ ಅನ್ರಿ, ಧಂದೆನರ ಅನ್ರಿ ಅವರವರ ಕೆಲಸನ ಗೌರವದಿಂದ ಮಾಡಿಕೋತ ಹೋದ್ರ ಆ ವ್ಯಕ್ತಿಗೂ ಗೌರವ, ಅವರು ಕೆಲಸಾ ಮಾಡೋ ಸ್ಥಾನಕ್ಕೂ ಗೌರವ. ಸಧ್ಯ ಇರೋ ಈ 37 ಕೀ ದೊಳಗ 37ನೇ ಕೀನ 'ಮಾಸ್ತರ ಕೀ' ನೋಡ್ರಿ ರಾಷ್ಟ್ರಪತಿಗಳಿಂದ ಹಿಡಿದು ಮೇಲೆ ಕಾಣಿಸಿರೋ ಎಲ್ಲಾ ವೃತ್ತಿ ಜನಾಂಗವನ್ನು ತಯಾರು ಮಾಡಿರೋರ ಮಾಸ್ತರು ಅಂಥಾದ್ದು ಅವರಿಗೆ ಎಲ್ಲೆ ಸ್ಥಾನ ಅದ ನೋಡ್ರಿ!? ಏಣಿ ಅಥವಾ ನಿಜ್ಜಣ ಕೀ ಎಲ್ಲರ್ನೂ ಮ್ಯಾಲಕ್ಕ ಕಳಸ್ತದ ಅದು ಮಾತ್ರ ಕೆಳಗ ಇರ್ತದ ಅನ್ನೋದರ ಸಂಕೇತನೂ ಇದ್ರೂ ಇರಬಹುದು.

36ನೇ ಕೀ ಯಾವುದದ ಗೊತ್ತದ ಏನ್ ನಿಮಗ? ಅದು ''ಮುದುಕಿ''. ಅಂದ್ರ ಮುದುಕೀಗಿಂತಾ ಕಡಿ ಮಾಸ್ತರ ಕೀ. ಇದು ಸುಳ್ಳಲ್ಲಾ ಮತ್ತಽಽ ಜಗತ್ತಿನ ಮುಂದಿನ ಸತ್ಪ್ರಜೆಗಳನ್ನ ತಯಾರು ಮಾಡೋದ ಮಾಸ್ತರ ಕೀ ಅಂದ್ರ ಅದ ಖರೇ ''ಮಾಸ್ಟರ್ ಕೀ''

❋

## ಟೆರಿರ್ ಇಷ್ಟು

ಕಾಮ ಕ್ರೋಧ ಮೋಹ ಮದ ಮಾತ್ಸರ್ಯ
ಇವು ನಮ್ಮ ಮನಸ್ಸಿನ ಬಹು ದೊಡ್ಡ
ಟೆರರಿಸ್ಟು
ಅದಕ್ಕೇ ನಮಗೆ
ತಾಳ್ಮೆ, ವಿನಯ, ಸ್ನೇಹ, ಪ್ರೀತಿ, ಮಮಕಾರ
ಮುಂತಾದುವು ಇದ್ದರೆ
ಅದೇ ಬೆಸ್ಟು

– ಸುಕೇಶವ

# ಯಾರಿಗೂ ಹೇಳೋಣು ಬ್ಯಾಡಾ...

**- ಎಚ್. ಗೋಪಾಲಕೃಷ್ಣ**

**ಹೊ**ರದೇಶಗಳಿಗೆ ಪ್ರವಾಸ ಹೋಗಿಬಂದ ನಮ್ಮ ಪ್ರತಿನಿಧಿಗಳು ಇನ್ನೂರ ಎಂಬತ್ತು ಮೂರು ಪುಟಗಳ ಒಂದು ಸಂಕ್ಷಿಪ್ತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರಂತೆ. ಅವರು ಸಲ್ಲಿಸಿರುವ ವರದಿಯ ಬಹುಮುಖ್ಯ ಅಂಶಗಳನ್ನು ಅವರುಗಳ ಲೀಡರು ಆಗಲೇ ಹೇಳಿದ್ದಾರೆ. ಆದರೆ ಇನ್ನೂ ಸುಮಾರು ಅಂಶಗಳು ನಮ್ಮ ಕಿರಿಯ ನೇತಾರರ ಬಳಿಯಿದ್ದು ಅದನ್ನು ಸದರಿ ಕಿರಿಯ ನಾಯಕರು ಮೊನ್ನೆ ರಾತ್ರಿ ಬ್ರಿಗೇಡ್ ರೋಡಿನಲ್ಲಿ ಸರಿಹೊತ್ತಿನಲ್ಲಿ ಸಿಕ್ಕಾಗ ನಮ್ಮೊಂದಿಗೆ ಹಂಚಿಕೊಂಡರು. ಅವರ ಪ್ರಕಾರ ವರದಿ ಈಗಿನ ಗಾತ್ರಕ್ಕೆ ಡಬಲ್ ಆಗಬೇಕಿತ್ತಂತೆ. ಕೆಲವು ಅವರು ಹಂಚಿಕೊಂಡ ಅಂಶಗಳು:

ಫಾರಿನ್‌ನಲ್ಲಿ ಎಲ್ಲರೂ ಇಂಗ್ಲೀಷೇ ಮಾತನಾಡುತ್ತಾರೆ - ಅದರಿಂದ ಅಲ್ಲಿ ಕನ್ನಡ ಶಾಲೆಗಳನ್ನು ಮುಚ್ಚಿದರೆ ಹೋರಾಡುವವರು ಯಾರೂ ಇಲ್ಲ. ಈ ಕಾರಣದಿಂದ ಇಲ್ಲಿ ನಾವು ಇಂಗ್ಲೀಷ್ ಅನ್ನು ಹೆಚ್ಚು ಹೆಚ್ಚು ಹೇಳಿಕೊಡಬೇಕು ಮತ್ತು ಮುಂದಿನ ಹದಿನೈದು ವರ್ಷಗಳಲ್ಲಿ ಇಲ್ಲಿ ಕನ್ನಡ ಮಾತನಾಡುವವರೇ ಇಲ್ಲದ ಹಾಗೆ ಮಾಡಿದರೆ ನಂತರ ನಾವು ಕನ್ನಡ ಶಾಲೆಗಳನ್ನು ಮುಚ್ಚಿ ಕಸ ಗುಡಿಸಿದ ಹಾಗೆ ಗುಡಿಸಿ ಸಾರಿಸಿಬಿಟ್ಟರೂ ಯಾರೂ ಕೇಳುವವರು ಇರುವುದಿಲ್ಲ. ಸರ್ಕಾರ ಈ ಬಗ್ಗೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ರೂಪಿಸಿ ಸದ್ದಿಲ್ಲದ ಹಾಗೆ ಅಳವಡಿಸತಕ್ಕದ್ದು.

ಬಹುಮುಖ್ಯವಾದ ಅಂಶ ಎಂದರೆ ಪ್ರತಿಬಾರಿ ನಾವು ಇಲ್ಲಿ ಅನುಭವಿಸುವ ಕಾವೇರಿ ಹಾಗೂ ಕೃಷ್ಣಾ ನೀರಿನ ಸಮಸ್ಯೆಗಳು. ಫಾರಿನ್‌ನಲ್ಲಿ ಜಾಗ ಅಷ್ಟು ಚಿಕ್ಕದಿದ್ದರೂ ಅಲ್ಲಿ ನೀರಿನ ಸಮಸ್ಯೆಯೇ ಕಾಣಲಿಲ್ಲ. ಇದಕ್ಕೆ ಮೂಲಕಾರಣ ಎಂದರೆ ಅಲ್ಲಿ ಶೌಚಕ್ಕೆ ನೀರಿನ ಬಳಕೆಯೇ ಇಲ್ಲ. ಇಲ್ಲಿ ನಾವು ದುಂದು ಮಾಡಿದ ಹಾಗೆ ಬರೇ ಶೌಚಕ್ಕೆ ಕ್ಲೀನಿಂಗ್‌ಗಾಗಿಯೇ ಅಲ್ಲಿ ಯಾರೂ ಬಕೆಟ್ ಗಟ್ಟಲೇ ನೀರು ಸುರಿಯುವುದಿಲ್ಲ. ಅಲ್ಲಿ ಬಿಳಿಯ ಬಣ್ಣದ ಟಿಷ್ಯೂ ಪೇಪರುಗಳನ್ನು ಹಾಸಿಗೆಯ ಹಾಗೆ ಸುತ್ತಿ ಪ್ರತೀ ಕಕ್ಕಸು ರೂಮಿನಲ್ಲಿಯೂ ಇಟ್ಟಿರುತ್ತಾರೆ. ಕೆಲಸವಾದ ನಂತರ ಪೇಪರು ಹರಿದುಕೊಂಡು ಚೆನ್ನಾಗಿ ಒರೆಸಿದರೆ ಆಯಿತು. ಕಾವೇರಿ ಮತ್ತು ಕೃಷ್ಣೆಯರ ಕದನ ನಿಲ್ಲಬೇಕು ಎಂದು ಮನಸ್ಸು ಮಾಡಲು ಇದು ಸಕಾಲ. ನಮ್ಮ ರಾಜ್ಯದಲ್ಲಿಯೇ ರಾಶಿ ರಾಶಿ ಟಿಷ್ಯೂ ಕಾಗದ ತಯಾರಿಸಲು ವಿದೇಶದಿಂದ ಹೂಡಿಕೆದಾರರನ್ನು ಆಕರ್ಷಿಸುವುದು ಮತ್ತು ತಯಾರಾದ ಕಾಗದವನ್ನು ಬಳಸಲು ನಮ್ಮ ನಾಗರಿಕರಿಗೆ ತರಬೇತಿ ನೀಡುವುದು. ಇದರಿಂದ ಒಂದು ಸಮಸ್ಯೆಗೆ ಶಾಶ್ವತವಾದ ಪರಿಹಾರ ಕಂಡುಹಿಡಿದ ಗೌರವಕ್ಕೆ ನಾವು ಪಾತ್ರರಾಗುತ್ತೇವೆ. ಆಗ ಇಲ್ಲಿ ನೀರಿನ ಬಳಕೆ ಕಡಿಮೆ ಮಾಡಿದ ಹಾಗೆ ಉಳಿದ ನೀರನ್ನು ನೆರೆ ರಾಜ್ಯಗಳಿಗೆ ಅವರು ಕೇಳುವ ಮೊದಲೇ ಹರಿಸಿದರೆ ಆಯಿತು. ಪ್ರತಿ ವರ್ಷದ ಘರ್ಷಣೆ ತಪ್ಪಿದ ಹಾಗೇ.. ಜಯಲಲಿತಾ ಮೇಡಮ್ಮಿನ ಕೆಂಗಣ್ಣಿಗೆ ನಾವು ಯಾರೂ ಗುರಿಯಾಗಬೇಕಿಲ್ಲ.

ಫಾರಿನ್‌ನಲ್ಲಿ ರೇಷನ್ ಅಂಗಡಿಗಳೇ ಇಲ್ಲ. ಯಾಕಪ್ಪಾ ಹಿಂಗೇ ಅಂತ ವಿಚಾರಿಸಿದೆವು. ಅಲ್ಲಿ ಯಾರೂ ಅಂಗಡಿ ರೇಷನ್ನು ಉಪಯೋಗಿಸಾಕಿಲ್ಲವಂತೆ. ಯಾಕೆ ಉಪಯೋಗಿಸೋಲ್ಲ ಅಂತ ಅಂದರೆ ಅಲ್ಲಿ ಎಲ್ಲಾ ಸಾಮಾನೂ ಮಾಲ್ ಅಂಗಡೀಲೀ ತಗೋತಾರಂತೆ. ಮಾಲ್ ಅಂಗಡೀಲಿ ತಗೊಂಡರೆ ಈ ತಾಪತ್ರಯವೆಲ್ಲಾ ತಪ್ಪೈತೆ ಅಲ್ವಾ? ಅದಕ್ಕೇ ನಾವೂ ಒಂದು ಐಡಿಯಾ ಕಂಡುಹಿಡಿದಿದ್ದೀವಿ – ರೇಷನ್ ಅಂಗಡಿಗಳ್ನ ಮುಚ್ ಬಿಡಾದು ಮತ್ತು ಎಲ್ರೂ ಮಾಲ್‌ಗಳಿಗೇ ಹೋಗ್ರಲಾ ಅನ್ನೋದು. ಎರಡು ಹಕ್ಕಿ ಹೊಡೆದ್ಹಾಂಗೆ ಆಗ್ತದೆ. ಒಂದು ರೇಷನ್ ಅಂಗಡಿ ಇರಾಕಿಲ್ಲ, ಅದರಿಂದ ರೇಷನ್ ಕದ್ರು ಅನ್ನೋ ಆರೋಪ, ರೇಷನ್ ಸಿಕ್ತಾ ಇಲ್ಲ, ಸರ್ಕಾರ ಬಡವರನ್ನ ಕೇರೇ ಮಾಡ್ತಿಲ್ಲ... ರೇಷನ್ ಅಂಗಡೀಲಿ ಜೋಳ ಕೊಡ್ರೀ, ರಾಗಿ ಕೊಡ್ರೀ, ಹೆಸರ್ಬೇಳೆ ಕೊಡ್ರೀ, ನಿರೋಧ್ ಕೊಡ್ರೀ ಅಂತ ಬೇಕು ಬೇಡಾದನ್ನೆಲ್ಲಾ ಯಾವ ಪುಟಗೋಸಿ ಪುಢಾರಿಯೂ ಕೇಳೋಹಾಗಿರುಲ್ಲ... ಈ ಎಲ್ಲಾ ಆರೋಪಗಳಿಗೂ ಪರ್ಮನೆಂಟ್ ಫುಲ್ ಸ್ಟಾಪ್ ಬಿದ್ದು ಹೋಗುತ್ತೆ. ನಮ್ಮ ಹೈಕಳನ್ನ ಪಾರಿನ್‌ಗೆ ಕಳ್ಸಿ ಅಲ್ಲಿ ಮಾಲುಗಳು ಹೆಂಗೆ ನಡೀತವೆ ನೋಡ್ಕೊಂಡು ಬರ್ರಲಾ ಅಂತ ಕಳಿಸಿದರೆ ಆಯ್ತು. ಅವೂ ಆರಾಮಾಗಿ ಒಂದಾರು ತಿಂಗ್ಳೋ ವರ್ಷವೋ ಫಾರಿನ್ ನೋಡ್ಕೊಂಡು ಬರ್ಲಿ. ಅವುಗಳ ಕೈಲೇ ಮಾಲು ಓಪನ್ ಮಾಡಿಸಿದರೆ ಆಗ್ತೈತೆ...

ಇನ್ನೊಂದು ವಿಸ್ಯ ಗೊತ್ರಾ? ಅಲ್ಲಿ ಯಾರೂ ಸೇಂದಿ ಕಳ್ಳಭಟ್ಟಿ ಇವುಗಳ್ನ ಮೂಸೂ ನೋಡೋಲ್ಲಾ... ನಮ್ಜೊತೆ ಬಂದಿತಲ್ಲಾ ಫಾರಿನ್‌ಗೆ ತಿಪ್ಪೇನಳ್ಳೀ ಕಡೇದು ಅದಕ್ಕೆ ಎರಡು ವಾರಕ್ಕೇ ಬಾಯಿ ಕೆಟ್ಟು ಹೋಯಿತು. ಇರ್ರಲಾ ಬಾಯಿ ಕೆಟ್ಟು ಹೋಗದೆ ಇಲ್ಲಿ ಎಲ್ಲಾದರೂ ನಮ್ಮ ಕಂಟ್ರಿ ಸಿಕ್ತೈತಾ ನೋಡ್ಕೊಂಡು ಬತ್ತೀನೀ ಅಂತ ಆತ ಓದ. ಇಡೀ ರಾತ್ರಿ ಫಾರಿನ್‌ನಾಗೆ ಜಾಲಾಡಿ ಬುಟ್ಟ, ಅಲ್ಲೆಲ್ಲೂ ಸೇಂದೀನೇ ಇಲ್ವಂತೆ. ಅಂಗಡೀಲಿ ಸಿಗೋ ದಾರೂನೇ ಹಾಕ್ತಾರಂತೆ. ಇಲ್ಲೂ ಅದೇ ದಾರೂ ತಂದಿಟ್ಟರೆ ದೇಸದ ಹಾರ್ಥಿಕ ಪರಿಸ್ತಿತಿ ಇಂಪ್ರೋವಾಗಾಕಿಲ್ವಾ? ಇದೂ ನಮ್ಮ ಸಲಹೆನಲ್ಲಿ ಐತೆ...

ಭಾರೀ ಮಜಾ ಕೊಟ್ಟಿದ್ದು ಸುದ್ದಿ ಇನ್ನೂ ಅಷ್ಟಿದಾವೆ – ಬೇಗನೆ ನೆನಪಿಗೆ ಬರೋದಿಲ್ಲ ಹಾಳೋದೋವು....

ಬಂತು ನೆನಪಿಗೆ ಬಂತು, ಬಂತು ನೆನಪಿಗೆ ಬಂತು ಈಗ.... ಅಲ್ಲಿ ಲೈಂಗಿಕ ಕಿರುಕುಳ ಅಷ್ಟು ಇಲ್ವಂತೆ. ಅಲ್ಲಿ ಗೊತ್ತಾ ಹುಡುಗ ಹುಡುಗೀರು ಅಂತಲೇ ಅಲ್ಲ ಮುದುಕ ಮುದುಕೀರೀರೇ ಇರಲಿ, ರಸ್ತೆನಾಗೇ ತಬ್ಕೊಂಡು ಮುತ್ತು ಕೊಡ್ತಾರೆ ಗೊತ್ರಾ? ನಮ್ಮ ಜತೆ ಬಂದಿತಲ್ಲಾ ಬೋಟಮ್ಮ ಅದನ್ನೋಡಿ ನಾಚಿಕೋತು ನಾಚಿಕೋತು ನಾಚಿಕೋತು... ಹೇಗೆ ನಾಚಿಕೋತು ಅಂದರೆ ಕೆಂಪ್ಗೆ ಆಗಿಬಿಟ್ತು – ಟೊಮೊಟೋ ಅಣ್ಣು ಆದಹಾಗೆ. ನಾಕು ದಿನ ಆ ರೋಡ್ಗೇನೇ ಬರ್ಲಿಲ್ಲ ಆಯಮ್ಮ. ಅದಕ್ಕೇ ಇದೂ ಒಂದು ಸಲಹೇನಾ ಸರ್ಕಾರಕ್ಕೆ ಕೊಡ್ತಾ ಇದೀವಿ. ಕಾಲೇಜ್ನಾಗೇ ಇರ್ಲಿ, ಆಫೀಸ್ನಾಗೇ ಇರ್ಲಿ, ಕಾಖಾನೆಯಾಗೇ ಇರ್ಲಿ... ಎಲ್ಲೇ ಸರಿ ಗಂಡಸು ಎಂಗಸು ಒಟ್ಟಿಗೆ ಕೆಲಸ ಮಾಡೋ ಕಡೇಲಿ ತಬ್ಕೊಂಡು ಮುತ್ತು ಕೊಡಬೋದು ಅಂತ... ಇದರಿಂದೇನು ಆಯ್ತದೆ ಅಂದರೆ ಸಾಮರಸ್ಯ ಬೆಳೀತದೆ, ಸೆಕ್ಸುಯಲ್ ಹಾರಾಸಿಮೆಂಟಿನ

ಕೇಸುಗಳು ಕಡಿಮೆ ಆಗ್ತಾವೆ.. ಅದ್ಯಾರೋ ನರ್ಸಮ್ಮ ನಮ್ಮವನೊಬ್ಬ ಕಿಸ್ ಮಾಡ್ತಾ ಫೋಟೋ ತೆಗೆಸಿಕೊಂಡಿದ್ದೇ ದೊಡ್ಡದು ಮಾಡಿ ಅವನು ಮಂತ್ರಿಕುರ್ಚಿ ಬಿಡೋ ಹಾಗೆ ಮಾಡ್ತಲ್ಲಾ ಇನ್ಮೇಲೆ ಹಂಗೆ ಆಗಾಕಿಲ್ಲ...

ಇನ್ನೊಂದೂ ಗೊತ್ತಾ? ಅಲ್ಲಿ ಫುಟ್ ಪಾತೇ ಇಲ್ಲ! ನಮ್ಮಲ್ಲೂ ಫುಟ್ ಪಾತ್ ಕಿತ್ತು ಹಾಕಿಸಿದ್ರೆ ರಸ್ತೇಲಿ ನಡೆಯೋರು ಇರಾಕಿಲ್ಲ. ಅದರಿಂದ ಏನು ಉಪಯೋಗ ಆಗ್ತೈತೆ ಅಂದರೆ ಈ ನೂರೆಂಟು ಆಂಬ್ಯುಲೆನ್ಸು ನಮಗೆ ಬೇಕಾಗಿರುಲ್ಲ, ಆಂಬ್ಯುಲೆನ್ಸು ಬೇಡಾಂದ್ರೆ ನರ್ಸುಗಳೂ ಬೇಡ, ನರ್ಸುಗಳೂ ಇಲ್ಲ ಅಂದ್ಮೇಲೆ ಡಾಕ್ಟರೂ ಇಲ್ಲ, ಡಾಕ್ಟರೂ ಇಲ್ಲ ಅಂದಮೇಲೆ ಆಸ್ಪತ್ರೇ ಕೂಡಾ ಇಲ್ಲ... ಹಂಗೇ ಯೋಚನೆ ಮಾಡ್ಕೊಂತಾ ಹೋದರೆ ಹೊಸಾ ಮೆಡಿಕಲ್ ಕಾಲೇಜೇ ಬೇಡ.. ಎಷ್ಟು ಕಾಸು ಮಿಗತ್ತೈತೆ, ಅದರ ಜತೆಗೆ ಆಗೋ ಅನ್ಕೂಲ ನೋಡ್ರೀ. ಪ್ರತೀ ವರ್ಷ ಈ ಕಾಲೇಜಿನ ನಡೆಸೋರು ಸೇರಿ ನಮಗೆ ಕೊಡ್ತಾರಲ್ಲಾ ತಲೆನೋವು – ಸೀಟು ಜ್ಯಾಸ್ತಿ ಮಾಡಿ, ಫೀಸು ಜ್ಯಾಸ್ತಿ ಮಾಡಿ, ಕಾಲೇಜಿಗೆ ಬಿಲ್ಡಿಂಗ್ ಕಟ್ಕೋಕ್ಕೆ ಹಳ್ಳಹಳ್ಳಿ ಕೊಡಿ ಈ ತರಹದ ಡಿಮ್ಯಾಂಡ್ಸೇ ಬಿದ್ದೋಗುತ್ತೆ...

ಆಗೇನು ಮಾಡೋದು ಅಂದ್ರೆ ಎಲ್ಲಾ ಮೆಡಿಕಲ್ ಕಾಲೇಜ್ನೂ ಎಂಜಿನಿಯರಿಂಗ್ ಕಾಲೇಜು ಮಾಡೋದೂ ಡಾಕ್ಟರಿಗೆ ಈ ಪುಸ್ತಕ ಓದ್ಕೊಂಡು ಬಂದು ಎಂಜಿನೀರಿಂಗೇ ಹೇಳಿಕೊಡ್ರಲಾ ಅನ್ನೋದೂ... ಸಮಸ್ಯೆಗೆ ಎಂತಾ ಸುಲಭದ ಪರಿಹಾರ ಅಲ್ವಾ?

ಗಡಿಯಾರ ನೋಡಿಕೊಂಡೆ.

ಸಾರ ಟೈಮು ಆಯ್ತಾ? ಇವತ್ತಿಗೆ ಸಾಕು ಬಿಡ್ರೀ ನನಗೂ ಮರೆತು ಮರೆತು ಹೋಗಿದೆ. ನಾಳೆ ಸಿಗ್ರೀ ಇನ್ನೂ ಸಾವಿರಾರು ಕ್ರಾಂತಿಕಾರಕ ಬದಲಾವಣೆಗಳಿಗೆ ನಾವು ಯೋಜನೆ ಹಾಕ್ತಾ ಇದೀವಿ.... ಅದನ್ನೆಲ್ಲಾ ನಿಮಗೇ ಖಾಸಗಿಯಾಗಿ ಹೇಳ್ತೀನೀ.... ಅಂತ ಕಿರಿಯ ನಾಯಕರು ಕೆಲವೇ ಕೆಲವು ಕಾನ್ಫಿಡೆನ್ಷಿಯಲ್ ಸಂಗತಿಗಳನ್ನು ನಮ್ಮೊಂದಿಗೆ ಹಂಚಿಕೊಂಡರು.

ಕ್ರಾಂತಿಕಾರಕ ಯೋಜನೆಗಳಲ್ಲಿ ಕೆಲವನ್ನು ತಮ್ಮೊಂದಿಗೂ ಕಾನ್ಫಿಡೆನ್ಷಿಯಲ್ ಆಗಿ ಖಾಸಗಿಯಾಗಿ ಹಂಚಿಕೊಳ್ಳುತ್ತಿದ್ದೇನೆ. ಇದನ್ನು ಈಗಲೇ ಯಾರಿಗೂ ಹೇಳೋಣು ಬೇಡಿ... ಬುಟ್ಟಿಯಿಂದ ಸಾಕಷ್ಟು ಹಣ್ಣು ಹಾವು ಆಚೆ ಬಂದಮೇಲೆ ಎಲ್ಲರಿಗೂ ಅರಿವು ಮೂಡಿಸೋಣ....!

❋

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ಬಸದಿ 3. ಮನವಿ 5. ತವಕ 7. ಪಾದ 8. ತಪ್ಪಲೆ 9. ರಕ್ಷಕ 10. ಸವಾರ 11. ಡಬರಿ 13. ಸ್ತರ 14. ಹವನ 15. ಹೆಣಿಗೆ 16. ವಂತಿಗೆ

**ಮೇಲಿಂದ ಕೆಳಕ್ಕೆ**

2. ಸಮುಚಿತ 4. ನಳಪಾಕ 5. ತಲೆಬರಹ 6. ಕರತಾಡನ 10. ಸರಪಣಿ 12. ರಿಯಾಯತಿ



**ಫೋಟೊ ಪ್ರಹಸನ**

# ಚೂಪಾದ ಮಾತು

**- ಪ್ರಶಾಂತ ಅಡೂರ**

''ಮಂಡ ಕತ್ತರಿ, ಚಾಕು, ಕಟ್ಟರ್, ಇಳಗಿ, ಕುಡಗೋಲ್ ಚೂಪ ಮಾಡಿಸ್ಗೋರಿ..''

ಅಂತ ಒದರಕೋತ ಇವತ್ತ ಮನಿ ಮುಂದ ಮಂಡ ಸಾಮಾನ ಚೂಪ ಮಾಡೊಂವಾ (ಸಾಣಿ ಹಿಡಿಯೊಂವಾ) ಬಂದಿದ್ದಾ.

ನಾ ಗೇಟನಾಗ ನಿಂತಿದ್ದ ನೋಡಿ...

''ಸರ್... ನಿಮ್ಮ ಮನ್ಯಾಗ ಏನರ ಮಂಡ ಸಾಮನ ಇದ್ದರ ಚೂಪ್ ಮಾಡಿಸ್ಗೋರಿ'' ಅಂತ ನನಗ ಅಂದಾ... ಹಂಗ ನಮ್ಮ ಮನ್ಯಾಗ ಸಾಮಾನ ಇಷ್ಟ ಏನ ಮನಷ್ಯಾರು ಭಾಳ ಮಂಡರು, ಒಬ್ಬರ ಹೇಳಿದ್ದ ಇನ್ನೊಬ್ಬರ ಕೇಳೋರಲ್ಲಾ ಏನಲ್ಲಾ, ಆದರು ಇಂವಾ ಏನ ಮುಂಜ ಮುಂಜಾನೆ ಬಂದಾ ಅಂತ ತಲಿಕೆಟ್ಟ

''ಏ.... ನಮ್ಮನಿ ಸಾಮಾನೆಲ್ಲಾ ಚೂಪ ಅವ ತೊಗೊ.... ನೀ ಬಾಜು ಮನಿಯವರಿಗೆ ಕೇಳ್ಕೊ'' ಅಂತ ಅಂದ ಅವನ್ನ ನಾ ಮುಂದ ಕಳಸಲಿಕತ್ತಿದ್ದೆ ಅಷ್ಟರಾಗ ನನ್ನ ಮಕ್ಕಳ ಐಸ್ ಕ್ರೀಮ್ - ಶೇಂಗಾ ಕಡ್ಲಿ ಗಾಡಿ ಬಂದಿರಬೇಕ ಅಂತ ತಿಳ್ಕೊಂಡ ತಮ್ಮ ಅಭ್ಯಾಸ ಬಿಟ್ಟ ಓಡಿ ಹೊರಗ ಬಂದರು.

ನಾ ಅವರನ ನೋಡಿದವನ

''ಈ ಎರಡು ಮಕ್ಕಳ ಮಂಡ ಅವ ನೋಡ, ಒಟ್ಟ ಹೇಳಿದ್ದ ಮಾತ ಕೇಳಂಗಿಲ್ಲಾ. ಇವನ್ನೇನರ ಚೂಪ ಮಾಡ್ತಿ ಏನ'' ಅಂತ ಅವಂಗ ಕೇಳಿದೆ.

ಅಂವಾ ನಕ್ಕೋತ

''ಏ... ಬರ್ರಿ ಇಲ್ಲೆ... ನಿಮ್ಮಿಬ್ಬರದು ಮೂಗ ಮಂಡ ಅದಾವ... ಚೂಪ ಮಾಡ್ತೇನಿ'' ಅಂದಾ.

ಅಂವಾ ಹಂಗ ಅಂದದ್ದಕ್ಕ ನನ್ನ ಮಗಳ ಹೆದರಿ ಮೂಗ ಹಿಡಕೊಂಡ ಒಳಗ ಓಡಿ ಹೋದ್ಲು.

ಅಷ್ಟರಾಗ ನನ್ನ ಹೆಂಡ್ತಿ ನಾ ಹೊರಗ ಏನೋ ಗದ್ಲಾ ನಡಸಿದ್ದ ವಾಸನಿ ಬಡದ ತಾ ಹಿರೇತನ ಮಾಡಲಿಕ್ಕೆ ಹೊರಗ ಬಂದೋಕಿನ ನನಗ ''ರ್ರಿ.. ಎಷ್ಟ ಮಂಡ ಇದ್ದೀರಿ ನೀವು... ಮಕ್ಕಳಿಗೆ ಹೋಮವರ್ಕ ಮಾಡಸಂದರ ಹೊರಗ ಬಂದ ಹರಟಿ ಹೊಡಿಲಿಕತ್ತೀರಿ'' ಅಂತ ಒದರಲಿಕ್ಕೆ ಶುರು ಮಾಡಿದ್ಲು.

ಆ ಸಾಣಿ ಹಿಡಿಯೊಂವಾ ನನ್ನ ಹೆಂಡತಿನ್ನ ಒಂದ ಸರತೆ ನೋಡಿದವನ ನಂಬದೇಲ್ಲಾ ಮಂಡ ಸಂಸಾರ ತೊಗೊ ಅಂತ ಅನ್ಕೊಂಡ ''ಮಂಡ ಕತ್ತರಿ, ಚಾಕು, ಕಟ್ಟರ್, ಇಳಗಿ, ಕುಡಗೋಲ್ ಚೂಪ ಮಾಡಿಸ್ಗೋರಿ...'' ಅಂತ ಒದರ್ಕೋತ ತನ್ನ ಗಾಡಿ ದುಗಿಸ್ಗೋತ ಮುಂದಿನ ಮನಿ ಕಡೆ ಹೊಂಟ ಬಿಟ್ಟಾ.

ಪಾಪ ಅಂವಾ ನಾ ಎಲ್ಲೆ 'ನನ್ನ ಹೆಂಡತಿನೂ ಮಂಡ ಇದ್ದಾಳ ಅಕಿನ್ನು ಚೂಪ ಮಾಡ' ಅಂತ ಅಂತೇನಿ ಅಂತ ತಿಳ್ಕೊಂಡನೋ ಏನೊ?

# ಒಪ್ಪೊತ್ತುಣ್ಣುವವ, ಆದರೆ ಯೋಗಿ ಅಲ್ಲ

**– ಹನಸೋಗೆ**

**ಇಂ**ತಹವರೂ ಇದ್ದಾರೆ. ಎಂತಹವರು? ಬನ್ನಿ, ತ್ಯಾಗರಾಜನ್ ಅವರನ್ನು ಭೇಟಿ ಮಾಡಿ. ಇವರು ಅಂತಹವರಲ್ಲೊಬ್ಬರು.

ತಿಂಡಿ ಆಯಿತೆ ಸರ್ ಎಂದು ತ್ಯಾಗರಾಜನ್ ಅವರನ್ನು ನಾವು ಕೇಳುವುದೇ ಇಲ್ಲ. ಹಾಗೆಯೇ, ಊಟ ಆಯಿತೇ? ಎಂದೂ ನಾವು ವಿಚಾರಿಸುವುದಿಲ್ಲ. ಈ ಮಾಮೂಲಿ ಪ್ರಶ್ನೆಗಳು ಅವರಿಗೆ ಅರ್ಥಹೀನ. ಏಕೆಂದರೆ ನಮಗೆಲ್ಲ ಅಗತ್ಯವೆನಿಸುವ ಬೆಳಗಿನ ತಿಂಡಿ ಆಗಲಿ ಅಥವಾ ಮಧ್ಯಾಹ್ನದ ಊಟ ಆಗಲಿ ಅವರಿಗೆ ಬೇಕಿಲ್ಲ. ಆದರೆ ಡಿನ್ನರ್? ತ್ಯಾಗರಾಜನ್ ಅದನ್ನು ತ್ಯಾಗ ಮಾಡಿಲ್ಲ. ಅವರಿಗೆ ಡಿನ್ನರ್ ಇರಲೇ ಬೇಕು.

ಏಕೀ ತರಹದ ಪಾರ್ಷಿಯಲ್ ಉಪವಾಸ? ಬೆಲೆಗಳು ದುಬಾರಿ ಎಂದು ತಿಂಡಿ/ಊಟವನ್ನು ಅವರು ತ್ಯಜಿಸಿಲ್ಲ. ಆಮ್ ಆದ್ಮಿಗಳಿಗೆ ಎರಡು ಊಟವನ್ನು ಕೊಡಲು ಹೆಣಗುತ್ತಿರುವ ಸರ್ಕಾರದ ಹೊರೆಯನ್ನು ಕಡಿಮೆ ಮಾಡಲು ಸಹ ಅವರು ಯೋಚಿಸಿಲ್ಲ. ಅರೆಹೊಟ್ಟೆ ತಿನ್ನುವ ಲಕ್ಷಾಂತರ ಮಂದಿಗೆ ಸಹಾನುಭೂತಿ ತೋರಿಸಲು ಹೀಗೆ ಆಹಾರ ತ್ಯಾಗ ಮಾಡಿಲ್ಲ. ಟ್ರಿಮ್ ಆಗಿರಲೂ ಸಹ ಈ ಉಪಾಯ ಮಾಡಿಲ್ಲ.

ಕಾರಣ ತೀರ ವೈಯಕ್ತಿಕ. ತಿಂದ ತಕ್ಷಣ ನಿದ್ರಾದೇವಿ ಅವರನ್ನು ಆಲಂಗಿಸಿಕೊಳ್ಳುತ್ತಾಳೆ. ತಿಂದು ಕೈ ತೊಳೆಯುತ್ತಿದ್ದಂತೆ ಚಾಪೆ ದಿಂಬು ಹುಡುಕಬೇಕಾದ ಪರಿಸ್ಥಿತಿ ಅವರದ್ದು. ಆದುದರಿಂದಲೇ ಅವರು  ಒಪ್ಪತ್ತು ಮಾಡುತ್ತಾರೆ. ಹಗಲಲ್ಲಿ ತಿಂದರೆ ಕೆಲಸಗಳನ್ನು ಹೇಗೆ ಮಾಡುವುದು ಎಂಬವರ ಪ್ರಶ್ನೆ. ನಾಷ್ಟ ಮುಗಿಸಿ ಮೋಟಾರ್‌ಬೈಕ್ ಹತ್ತಿರುವ ತ್ಯಾಗರಾಜನ್ ಅವರನ್ನು ಊಹಿಸಿಕೊಳ್ಳಿ. ಹೋಗುತ್ತಾ ಹೋಗುತ್ತಾ ನಿದ್ದೆ ಅವರನ್ನು ಆವರಿಸಿಕೊಂಡರೆ? ಅಥವಾ ಊಟ ಆದಮೇಲೆ ಆಫೀಸಿನಲ್ಲಿ ಹಾಸಿಗೆ ಹುಡುಕಿದರೆ? ಅಥವಾ ಕುರ್ಚಿಯ ಮೇಲೆ ಗಡದ್ದು ನಿದ್ದೆ ಮಾಡಿದರೆ? ಯಾವ, ಎಷ್ಟು ಉದಾರಿ ಮನೋಭಾವದ ಬಾಸ್ ಇವರನ್ನು ಎಷ್ಟು ದಿನ ಸಹಿಸಬಲ್ಲ? ಈ ಕಾರಣಗಳಿಂದಲೇ ಅವರು ರಾತ್ರಿ ಊಟಕ್ಕೆ ಮಾತ್ರ ಶರಣಾಗಿದ್ದಾರೆ. ಅದೂ ಎಂತಹ ಡಿನ್ನರ್? ಸುಗ್ರಾಸ ಭೋಜನ. ಮತ್ತೆ ಸೊಗಸಾದ ನಿದ್ದೆ. ಪ್ರಾಬ್ಲಮ್ ಸಾಲ್ವ್‌ಡ್!

ತಮ್ಮ ಕಾಲೇಜು ದಿನಗಳಿಂದ ಅವರು ಹೀಗೆಯೇ ಇದ್ದಾರೆ. ಪುಷ್ಕಳವಾಗಿ ಊಟ ಮಾಡುತ್ತಿದ್ದ ದಿನಗಳು ಇದ್ದವು. ಬಕಾಸುರ ಎಂದು ಸ್ನೇಹಿತರು ಚುಡಾಯಿಸುತ್ತಿದ್ದರಂತೆ. ಆದರೆ ನಿದ್ರಾದೇವಿಯ ಆಲಿಂಗನದ ಕಾಟವನ್ನು ತಪ್ಪಿಸಿಕೊಳ್ಳಲು ಅವರು ಏನಾದರೂ ಉಪಾಯ ಹುಡುಕಬೇಕಿತ್ತು. ಪ್ರಯೋಗ ಮಾಡಲು ಹೊರಟರು. ಮೊದಲು ನಾಷ್ಟಾಗೆ ಕತ್ತರಿ ಹಾಕಿದರು. ನಂತರ ಮಧ್ಯಾಹ್ನದ ಊಟಕ್ಕೆ ಸಂಚಕಾರ ಬಂದಿತು. ಉಳಿದಿದ್ದು ಡಿನ್ನರ್ ಮಾತ್ರ. ರಾತ್ರಿ ಒಮ್ಮೆ ಉಂಡರೆ ಮುಂದಿನ 24 ತಾಸು ಅವರು ತಿನ್ನುವ ಬಗ್ಗೆ ಯೋಚಿಸಬೇಕಿಲ್ಲ. ಬಿಪಿ ಅಥವಾ ಸಕ್ಕರೆ ಬಗ್ಗೆ ಯೋಚನೆ ಇಲ್ಲ. ಆದರೆ ಕೊಬ್ಬಿನಂಶ ಹೆಚ್ಚಿದೆ. ಇದಕ್ಕೆ ಕಾರಣ ರಾತ್ರಿ ತಿನ್ನುವ ಪುಷ್ಕಳ ಭೋಜನ ಎನ್ನುತ್ತಾರೆ ಈ ಸದಾ ಹಸನ್ಮುಖಿ. ನಮ್ಮಲ್ಲಿ ಆಗಾಗ್ಗೆ ನಡೆಯುವ ಸಾಂಕೇತಿಕ ಉಪವಾಸಕ್ಕೆ ತ್ಯಾಗರಾಜನ್ ಅಂತಹವರು ಹೇಳಿ ಮಾಡಿಸಿದ ಸತ್ಯಾಗ್ರಹಿ. ಅಲ್ಲವೆ?

❋